ಸಂಪುಟ : 13 Volume | ಸಂಚಿಕೆ : 206 Issue | ಪುಟಗಳು : 08 Pages | ಭಾನುವಾರ 28 ಸಪ್ಟೆಂಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ


ಸಂಪಾದಕರು: ರಮೇಶ ರೆಡ್ಡಿ

**ಬೆಳಗು**
" ಕಳವು ಮಾಡಲೂ ಅವಕಾಶ ಸಿಗುವವರೆಲ್ಲರೂ ಅನಿವಾರ್ಯ ಪ್ರಾಮಾಣಿಕರು "
- ಮುನಿಶ್ರೀ ತರುಣ್ ಸಾಗರ್

ಲಿಂಗಾಯತ ಎಂದು ಬರೆಯಿಸಿ 2 | ಮಿರ್ಜಿ, ದಳವಾಯಿಗೆ ಪ್ರಶಸ್ತಿ 4 | ಆ್ಯಪ್ ಡೌನ್‌ಲೋಡ್ ಆಗಿಲ್ಲ 8

# ರಾಜ್ಯದಲ್ಲಿ ಮತ್ತೆ ಮಳೆ ಆರ್ಭಟ

## 8 ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್, ಭೀಮಾನದಿ ಅಬ್ಬರ



ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಸೆ.27: ಕರ್ನಾಟಕದಲ್ಲಿಮತ್ತೆ ಚುರುಕಾಗಿದ್ದು, ರಾಜ್ಯದಾದ್ಯಂತ ಭಾರಿ ಮಳೆಯಾಗುತ್ತಿದೆ. ರಾಜ್ಯದ ಬರೊಬ್ಬರಿ 8 ಜಿಲ್ಲೆಗಳಲ್ಲಿಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಈ ಬಗ್ಗೆ ಹವಾಮಾನ ಇಲಾಖೆ ಮಾಹಿತಿ ನೀಡಿದ್ದು, ರಾಜ್ಯಾದ್ಯಂತ ಮುಂದಿನ 5 ದಿನಗಳ ವರೆಗೆ ಅಂದರೆ ಅಕ್ಟೋಬರ್ 2ರವರೆಗೂಮಳೆಮುಂದುವರೆಯಲಿದೆ. ಪ್ರಮುಖವಾಗಿಇಂದಿನಿಂದಎರಡುದಿನಗಳಕಾಲಉತ್ತರ ಕರ್ನಾಟಕದಾದ್ಯಂತ ಭಾರಿ ಮಳೆಯಾಗಲಿದೆ ಎಂದು ಹವಾಮಾನಇಲಾಖೆಮುನ್ಸೂಚನೆನೀಡಿದೆ.ಕರಾವಳಿ ಜಿಲ್ಲೆಗಳಲ್ಲೂಅಕ್ಟೋಬರ್1ರಿಂದಮಳೆಚುರುಕಾಗಲಿದ್ದು, ದಕ್ಷಿಣ ಒಳನಾಡಿನ ಸಾಕಷ್ಟು ಕಡೆಗಳಲ್ಲಿ ಸಾಧಾರಣ ಮಳೆಯಾಗಲಿದ್ದು, ಬಾಗಲಕೋಟೆ, ಬೀದರ್, ಗದಗ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

### » 8 ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್

ಅಂತೆಯೇ ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ, ವಿಜಯನಗರ, ದಕ್ಷಿಣಕನ್ನಡ, ಉತ್ತರಕನ್ನಡ, ಉಡುಪಿ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದ್ದು, ಧಾರವಾಡ, ಹಾವೇರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರುನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ತುಮಕೂರಿನಲ್ಲೂಸಾಧಾರಣ ಮಳೆಯಾಗಲಿದೆಎಂದುಹವಾಮಾನಇಲಾಖೆತಿಳಿಸಿದೆ.

### » ಉತ್ತರಕರ್ನಾಟಕ ತತ್ತರ

ಇನ್ನು ಭಾರಿಮಳೆಯಿಂದಾಗಿಉತ್ತರಕರ್ನಾಟಕತತ್ತರಿಸಿ ಹೋಗಿದ್ದು, ಸಿಂದಗಿ, ಹುಣಸಗಿ, ಕಕ್ಕೇರಿ, ಕೆಂಭಾವಿ, ಚಿಂಚೋಳಿ, ಔರಾದ್, ಭಾಲ್ಕಿ, ದೇವರಹಿಪ್ಪರಗಿ, ಹುಮ್ನಾಬಾದ್, ಇಂಡಿ, ನೆಲೋಗಿ, ಸೈದಾಪುರ, ಸೇಡಂ, ಅಫ್ಜಲ್?ಪುರದಲ್ಲಿಮಳೆಯಾಗುತ್ತಿದೆಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

### » ಉಕ್ಕಿಹರಿದ ಭೀಮಾನದಿ

ಇತ್ತವಿಜಯಪುರದಲ್ಲಿಭಾರಿಮಳೆಯಿಂದಾಗಿಭೀಮಾನದಿ ಉಕ್ಕಿಹರಿಯುತ್ತಿದ್ದು, ಇಂಡಿಯಆಲಮೇಲತಾಲೂಕಿನಲ್ಲಿ ಪ್ರವಾಹ ಉಂಟಾಗಿದೆ. ಕುಮಸಗಿ ಗ್ರಾಮದ 30ಕ್ಕೂ ಅಧಿಕ ಮನೆಗಳು ಸಂಪೂರ್ಣ ಜಲಾವೃತವಾಗಿದೆ. ಭೀಮಾ ತಟದ ನೂರಾರು ಎಕರೆ ಪ್ರದೇಶದ ಬೆಳೆ ಪ್ರವಾಹಕ್ಕೆ ಆಹುತಿಯಾಗಿದೆ. ಪ್ರತಿ ಎಕರೆಗೆ 25,000 ರೂಪಾಯಿಪರಿಹಾರಶೀಘ್ರ ನೀಡುವಂತೆಗ್ರಾಮಸ್ಥರು ಒತ್ತಾಯಿಸಿದ್ದಾರೆ.

### » ಕಟ್ಟಿಸಂಗಾವಿ ಸೇತುವೆ ಮುಳುಗಡೆ

ಕಲಬುರಗಿ ಹಾಗೂ ಮಹಾರಾಷ್ಟ್ರ ಭಾಗದಲ್ಲಿ ನಿರಂತರವಾಗಿ ಮಳೆ (ಖಚಿಟಿ) ಹಿನ್ನಲೆ ಭೀಮಾ ನದಿ ಹರಿವಿನಪ್ರಮಾಣದಲ್ಲಿಭಾರಿಹೆಚ್ಚಳವಾಗಿದೆ. ಇದರಜೊತೆಗೆ ಮಹಾರಾಷ್ಟ್ರದಿಂದ ನದಿಗೆ 3.40 ಲಕ್ಷ ಕ್ಯೂಸೆಕ್ ನೀರು ಬಿಡುಗಡೆಮಾಡಿರುವಪರಿಣಾಮ ಜೇವರ್ಗಿ ಪಟ್ಟಣದ ಸಮೀಪದಕಟ್ಟಿಸಂಗಾವಿಸೇತುವೆಮುಳುಗಡೆಯಾಗಿದೆ.

ಪರಿಣಾಮ ಬೀದರ್ - ಶ್ರೀರಂಗಪಟ್ಟಣ ರಾಷ್ಟ್ರೀಯ ಹೆದ್ದಾರಿಯಸಂಚಾರಸಂಪೂರ್ಣಬಂದ್‌ಆಗಿದೆ.ಬೀದರ್-ಶ್ರೀರಂಗಪಟ್ಟಣರಾಷ್ಟ್ರೀಯಹೆದ್ದಾರಿಯಸಂಚಾರಸಂಪೂರ್ಣ ಬಂದ್‌ಆಗಿದ್ದು, ನಡುರಸ್ತೆಯಮೇಲೆಯೇವಾಹನಗಳು ಕಿಲೋಮೀಟರಗಟ್ಟಲೆಕ್ಯೂ ನಿಂತಿವೆ.ಅಪಾರಪ್ರಮಾಣದ ನೀರು ಬಿಟ್ಟ ಮಹಾರಾಷ್ಟ್ರಒಂದೆಡೆ ಮಳೆಯಿಂದಾಗಿ ಜನ ತತ್ತರಿಸುತ್ತಿದ್ದರೆ ಅತ್ತ ಮಹಾರಾಷ್ಟ್ರದಲ್ಲೂ ಭಾರಿ ಮಳೆಯಿಂದಾಗಿ ಅಲ್ಲಿನ ಅಣೆಕಟ್ಟುಗಳಿಗೆ ಭಾರಿ ನೀರು ಹರಿಯುತ್ತಿದೆ. ಪರಿಣಾಮ ಮಹಾರಾಷ್ಟ್ರದ ಉಜನಿ ಜಲಾಶಯದಿಂದಭೀಮಾನದಿಗೆಅಪಾರಪ್ರಮಾಣದನೀರು ಬಿಡುಗಡೆಮಾಡಲಾಗಿದೆ. ಪರಿಣಾಮಕಲಬುರಗಿಯ ಸನ್ನತಿ ಬ್ಯಾರೇಜ್ ನಿಂದ ಯಾದಗಿರಿ ಕಡೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ.ಭೀಮಾ ನದಿ ಪ್ರವಾಹಕ್ಕೆರೈತರಬದುಕುಅಕ್ಷರಶಃಬರ್ಬಾದ್‌ಆಗಿದ್ದು, ನಾಯ್ಕಲ್‌ಗ್ರಾಮದಲ್ಲಿನೂರಾರುಎಕರೆಬೆಳೆಪ್ರವಾಹದ ನೀರಲ್ಲಿಮುಳುಗಿದೆ. ನದಿಪ್ರದೇಶದಸುತ್ತ ಸುಮಾರು ಒಂದುಕಿಲೋಮೀಟರ್?ವ್ಯಾಪ್ತಿಯವರೆಗೂಪ್ರವಾಹದ ನೀರುನುಗ್ಗಿದ್ದು, ಭತ್ತ ಹಾಗೂಹತ್ತಿ ಬೆಳೆದಿದ್ದ ಜಮೀನು ಸಮುದ್ರದ ರೀತಿ ಕಾಣತೊಡಗಿದೆ.



# ರೈತರ ಬಾಳು ಬೀದಿ ಪಾಲು

## ಜನಪ್ರತಿನಿಧಿಗಳ ನಿರ್ಲಕ್ಷ್ಯ!

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ :ಸೆ.27:ಕ್ಷೇತ್ರದಲ್ಲಿ ಸುರಿಯುತ್ತಿರುವ ನಿರಂತರ ಮಳೆಗೆ ರೈತರ ಕನಸುಗಳು, ಬೆಳೆಗಳು, ಮನೆಮಠಗಳು ಎಲ್ಲವೂ ನೀರಿನಲ್ಲಿ ಕೊಚ್ಚಿಹೋಗಿವೆ. ಹಗಲು ರಾತ್ರಿ ದುಡಿದು ಹೊಟ್ಟೆಪಾಡು ಸಾಗಿಸುತ್ತಿದ್ದ ರೈತರು ಇಂದು ಬೀದಿ ಪಾಲಾಗಿದ್ದಾರೆ.

ಆದರೆ ಅವರ ನೋವಿಗೆ ಮರುಗಬೇಕಾಗಿದ್ದ ಜನಪ್ರತಿನಿಧಿಗಳು ಕಣ್ಣುಮುಚ್ಚಿಕೊಂಡಿದ್ದಾರೆ. ಕುರ್ಚಿ, ಅಧಿಕಾರ, ಫೋಟೋಶೂಟ್, ಜಾತ್ರೆ ಉತ್ಸ ವಗಳಲ್ಲಿ ತೊಡಗಿರುವವರಿಗೆ ಬಡ ರೈತರ ಕಣ್ಣೀರು ಗೋಚರಿಸುತ್ತಿಲ್ಲ!

ರೈತರ ಬಾಳು ಹಾಳಾದರೂ, ಬದುಕು ಕೊಚ್ಚಿಹೋದರೂ, ಅವರ ಬಾಗಿಲಿಗೆ ಹೋಗಿ ಧೈರ್ಯ ನೀಡುವ ನಾಯಕರು, ಜನಪ್ರತಿನಿಧಿಗಳು ಕಾಣಿಸುತ್ತಿಲ್ಲ. ಜನರ ಸೇವೆ ಎಂಬ ಘೋಷಣೆ ಕೊಟ್ಟವರು ಸಂಕಷ್ಟದ ಹೊತ್ತಿನಲ್ಲಿ ಕಾಣೆಯಾಗಿರುವುದು ದುರಂತಕ್ಕಿಂತ ಕಡಿಮೆ ಅಲ್ಲ.

ಜನರು ಪ್ರಶ್ನಿಸುತ್ತಿದ್ದಾರೆ: ಜನಪ್ರತಿನಿಧಿಗಳು ಜನರ ಬಾಧೆ ನೋಡಿಕೊಳ್ಳದಿದ್ದರೆ, ಇವರನ್ನು ಆಯ್ಕೆ ಮಾಡಿದ ಅರ್ಥವೇನು? ಸರ್ಕಾರ ತಕ್ಷಣ ಪರಿಹಾರ ಘೋಷಿಸಿ, ರೈತರ ನೆರವಿಗೆ ಬರಬೇಕು. ಇಲ್ಲದಿದ್ದರೆ ಬಡ ರೈತರ ಶಾಪದಿಂದಲೇ ಈ ರಾಜಕೀಯ ನಾಯಕರು ಬೀದಿ ಪಾಲಾಗುವ ದಿನ ದೂರದಲ್ಲಿಲ್ಲ!

# ನವರಾತ್ರಿ ಮಹೋತ್ಸವದ ದಾಂಡಿಯಾ ರದ್ದು



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ಸೆ.27:ನಗರದ ಹೊರವಲಯದ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಸೆ. 29, 30 ರಂದು ಆಯೋಜನೆ ಮಾಡಲಾಗಿದ್ದ ದಾಂಡಿಯಾ ಕಾರ್ಯಕ್ರಮ ರದ್ದು ಪಡಿಸಲಾಗಿದೆ ಎಂದು ರಾಜರಾಜೇಶ್ವರಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಪ್ರೇಮಾ ರಾಜಶೇಖರ ಪಾಟೀಲ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ನಿರಂತರ ಸುರಿಯುತ್ತಿರುವ ಭಾರಿ ಮಳೆಯ ಹಿನ್ನಲೆ ಸಾರ್ವಜನಿಕರ ಜನ ಜೀವನ ಅಸ್ತವ್ಯಸ್ತಗೊಂಡಿರುವ ಪ್ರಯುಕ್ತ ಸಾರ್ವಜನಿಕರ ಹಿತದೃಷ್ಟಿಯಿಂದ ನವರಾತ್ರಿ ಮಹೋತ್ಸ ವದ ಸಾಂಸ್ಕೃತಿಕ ಕಾರ್ಯಕ್ರಮಗಳಾದ ದಾಂಡಿಯಾ ಕಾರ್ಯಕ್ರಮಗಳು ರದ್ದು ಪಡಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಪ್ರೇಮಾ ರಾಜಶೇಖರ ಪಾಟೀಲ್ ರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಗೋಡೆ ಕುಸಿದು ಬಾಲಕ ಸಾವು

ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ,ಸೆ.27-ಮನೆಯ ಗೋಡೆ ಕುಸಿದು ಇನ್ನೊಬ್ಬರ ಪತ್ರಾಸ ಮೇಲೆ ಬಿದ್ದ ಪರಿಣಾಮ ಆ ಮನೆಯ 11 ವರ್ಷದ ಬಾಲಕ ಮೃತಪಟ್ಟ ಘಟನೆ ಜಿಲ್ಲೆಯ ಮಹಾಲಿಂಗಪೂರದಲ್ಲಿ ಶನಿವಾರ ಬೆಳಗಿನಜಾವ ನಡೆದಿದೆ.

ಶುಕ್ರವಾರದಿಂದ ಶನಿವಾರ ಬೆಳಗಿನವರೆಗೂ ಸುರಿದ ಮಳೆಯಿಂದಾಗಿ ಮಹಾಲಿಂಗಪುರದ ಅಂಬೇಡ್ಕರ ವೃತ್ತದ ಬಳಿಯ ಮನೆಯ ಗೋಡೆ ಕುಸಿದು ಪಕ್ಕದ ಪತ್ರಾಸವುಳ್ಳ ಮನೆಯ ಮೇಲೆ ಬಿದ್ದಾಗ ಪತ್ರಾಸ ಕೆಳಗೆ ಮಲಗಿದ್ದ ದರ್ಶನ್ ನಾಗಪ್ಪ ಲಾತೂರ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ಪಕ್ಕದಲ್ಲೇ ಮಲಗಿದ್ದ ಮೃತ ಬಾಲಕನ ಸಹೋದರ ಶ್ರೀಶೈಲ್‌ನಿಗೂ ಪೆಟ್ಟಾಗಿದ್ದು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ ಬಾಲಕನ ತಾಯಿ ರೂಪಾ ಹಾಗೂ ಸಹೋದರಿ ಅದೃಷ್ಟವಶಾತ್ ಸಾವಿನಿಂದ ಪಾರಾಗಿದ್ದಾರೆ. ಮೃತ ಬಾಲಕ ದರ್ಶನ್ ತಂದೆ ಕೆಲಸದ ನಿಮಿತ್ತ ಬೇರೆ ಊರಿಗೆ ತೆರಳಿದ್ದರೆಂದು ಹೇಳಲಾಗಿದೆ. ಘಟನಾ ಸ್ಥಳಕ್ಕೆ ಪಿಎಸ್‌ಐ ಕಿರಣ ಸತ್ತಿಗೇರಿ ಭೇಟಿ ನೀಡಿದ್ದರು.

# ಕುಸಿದ ಛಾವಣಿ ವೃದ್ಧೆ ಸಾವು

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು:ಸೆ.27: ಟೀಕುಡಿಯಲುಅಂಗಡಿಗೆತೆರಳಿದ್ದಾಗಪಕ್ಕದಮನೆ ಛಾವಣಿ ಹಾಗೂ ಗೋಡೆ ಕುಸಿದು ವೃದ್ಧೆಯೊಬ್ಬರು ಸಾವನ್ನಪ್ಪಿರುವ ಘಟನೆ ರಾಯಚೂರು ಗಂಜ್ ವೃತ್ತದಬಳಿನಡೆದಿದೆ.ಮೃತವೃದ್ಧೆಯನ್ನುಎಲ್‌ಬಿಎಸ್ ನಗರದ ನಿವಾಸಿ 60 ವರ್ಷದ ಈಶಮ್ಮ ಎಂದು ಗುರುತಿಸಲಾಗಿದೆ.ಮೃತ ಈಶಮ್ಮ ಟೀ ಕುಡಿಯಲು ಅಂಗಡಿಗೆ ತೆರಳಿದ್ದರು. ಈ ವೇಳೆ ಏಕಾಏಕಿ ಟೀ ಅಂಗಡಿಯ ಪಕ್ಕದ ಮನೆ ಛಾವಣಿ, ಗೋಡೆ ಕುಸಿದು ಬಿದ್ದಿದೆ. ಪರಿಣಾಮ ಈಶಮ್ಮ ಸ್ಥಳದಲ್ಲೇ ಸಾವನ್ನಪ್ಪಿದ್ದು, ಇನ್ನಿಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.ಘಟನೆ ಸಂಬಂಧ ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



# ಖಾಲ್ಸಾ ಭಯೋತ್ಪಾದಕನ ಹಸ್ತಾಂತರ

ಮಲ್ಲಮ್ಮ ನುಡಿ ವಾರ್ತೆ ನವದೆಹಲಿ:ಸೆ.27: ಪಂಜಾಬ್ ಪೊಲೀಸ್ ಮತ್ತು ಕೇಂದ್ರೀಯ ಸಂಸ್ಥೆಗಳುಪ್ರವ 'ಖಯಶಸ್ಸನ್ನುಸಾಧಿಸಿವೆ. ಬಬ್ಬರ್ ಖಾಲ್ಸಾ ಇಂಟರ್ನ್ಯಾಷನಲ್ (ಬಿಕೆಐ) ಭಯೋತ್ಪಾದಕ ಪರ್ಮಿಂದರ್ ಸಿಂಗ್‌ಪಿಂಡಿಯನ್ನುಯುಎಇಯಿಂದಭಾರತಕ್ಕೆ ಹಸ್ತಾಂತರಿಸಲಾಗಿದೆ.ಪಂಜಾಬ್ ಪೊಲೀಸ್ ಡಿಜಿಪಿ ಸಾಮಾಜಿಕ ಮಾಧ್ಯಮವೇದಿಕೆ'ಎಕ್ಸ್ 'ನಲ್ಲಿಪೋಸ್ಟ್‌ಮಾಡಿದ್ದು, ಮಹತ್ವದಕಾರ್ಯಾಚರಣೆಯಲ್ಲಿ, ಕೇಂದ್ರೀಯಸಂಸ್ಥೆಗಳಸಹಕಾರ ಮತ್ತು ಬೆಂಬಲದೊಂದಿಗೆ ಪಂಜಾಬ್‌ಪೊಲೀಸರು ಬಬ್ಬರ್ ಖಾಲ್ಸಾ ಇಂಟರ್ನ್ಯಾಷನಲ್ ಭಯೋತ್ಪಾದಕ ಪರ್ಮಿಂದರ್ ಸಿಂಗ್ ಪಿಂಡಿಯನ್ನು ಅಬುಧಾಬಿ (ಯುಎಇ) ಯಿಂದ ಮರಳಿ ಕರೆತಂದಿದ್ದಾರೆ ಎಂದು ಹೇಳಿದ್ದಾರೆ.

# ಆಯುಧ ಪೂಜೆ : ಒಂದು ಬಸ್‌ಗೆ 150 ರೂ. ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಸೆ.27: ಆಯುಧ ಪೂಜೆ ಹಬ್ಬಕ್ಕೆಸರ್ಕಾರಿ ಬಸ್‌ಗಳಿಗೆ ಪೂಜೆ ಸಲ್ಲಿಸಲು ಸಾರಿಗೆ ಇಲಾಖೆಯಿಂದ ಹಣ ಬಿಡುಗಡೆ ಮಾಡಲಾಗಿದೆ. ಪ್ರತಿ ಬಸ್‌ಗೆ ಕೇವಲ 150 ರೂ. ರಿಲೀಸ್ ಮಾಡಿದೆ.ಪ್ರತಿವರ್ಷ ದಸರಾ ಹಿನ್ನೆಲೆಯಲ್ಲಿ ಆಯುಧಪೂಜೆಹಬ್ಬದಲ್ಲಿಸಾರಿಗೆಬಸ್‌ಗಳಿಗೆಪೂಜೆ ಸಲ್ಲಿಸಲಾಗುತ್ತದೆ. ಅದಕ್ಕಾಗಿ ಸಾರಿಗೆ ಇಲಾಖೆಯು ಪ್ರತಿ ಬಸ್, ಇಲಾಖಾ ವಾಹನಕ್ಕೆ ಹಣ ಬಿಡುಗಡೆ ಮಾಡಲಿದೆ. ಈ ಬಾರಿ ಕೇವಲ 150 ರೂ. ಬಿಡುಗಡೆ ಮಾಡಿದೆ. ಇದಕ್ಕೆ ಸಿಬ್ಬಂದಿ ಅಸಮಾಧಾನ ಹೊರಹಾಕಿದ್ದಾರೆ. ಹಬ್ಬದ ದಿನಗಳಲ್ಲಿ ಹೂ-ಹಣ್ಣು, ಹಾರ ಎಲ್ಲದರ ಬೆಲೆಯೂ ಏರಿಕೆ ಆಗುವುದು ಸಾಮಾನ್ಯ. ಒಂದು ಮಾರು ಹೂವಿನ ಹಾರವೇ ಹಬ್ಬದಲ್ಲಿ 100 ರೂ. ದಾಟಲಿದೆ. ಕೇವಲ 150 ರೂಪಾಯಿಯಲ್ಲಿ ಒಂದು ವಾಹನಕ್ಕೆ ಪೂಜೆ ಮಾಡಲು ಸಾಧ್ಯವೇ ಎಂಬ ಪ್ರಶ್ನೆ ವ್ಯಕ್ತವಾಗಿದೆ.ವಿಭಾಗೀಯ ಕಾರ್ಯಾಗಾರಕ್ಕೆ 2000 ರೂ. ಹಾಗೂ ಪ್ರಾದೇಶಿಕ ಕಾರ್ಯಾಗಾರಕ್ಕೆ 4000 ರೂ. ಹಣವನ್ನು ಸಾರಿಗೆ ಇಲಾಖೆ ಬಿಡುಗಡೆ ಮಾಡಿದೆ. ರಾಜ್ಯದ ನಾಲ್ಕೂ ನಿಗಮಗಳಿಗೆ ಒಂದು ಬಸ್‌ಗೆ 150 ರೂ. ಸಿಗಲಿದೆ. ಸಿಬ್ಬಂದಿಯೇ ಹಣ ಹಾಕಿ ಹಬ್ಬ ಮಾಡುವ ಸ್ಥಿತಿ ನಿರ್ಮಾಣವಾಗಿದೆ.

# ಕಮಲನಗರ:ಭಾರಿ ಮಳೆಯಿಂದ ಸಂಚಾರ ಸ್ಥಗಿತ




ಮಲ್ಲಮ್ಮ ನುಡಿವಾರ್ತೆಕಮಲನಗರ:ಸೆ.27: ಸತವಾಗಿಸುರಿಯುತ್ತಿರುವಮಳೆಮತ್ತು ಮಹಾರಾಷ್ಟ್ರದಧನೇಗಾಂವಆಣೆಕಟ್ಟಿನಿಂದ ಮಾಂಜ್ರಾನದಿಗೆನೀರುಬಿಟ್ಟಿರುವುದರಿಂದ ನದಿಭಾಗದಗ್ರಾಮಗಳಿಗೆಪ್ರವಾಹನೀರು ಅಪಾಯಮಟ್ಟಮೀರಿಹರಿಯುತ್ತಿದ್ದು, ಸಾವಿರಾರುಎಕರೆಪ್ರದೇಶದಹೊಲಗಳು ನೀರಿನಲ್ಲಿ ಮುಚ್ಚಿ ಹೋಗಿವೆ.

ಈ ವರ್ಷ ಮಾಂಜ್ರಾ ನದಿಗೆ ಪದೇ ಪದೇ ಹೆಚ್ಚಿನ ನೀರು ಬಿಡುವುದರಿಂದ ಪ್ರವಾಹ ಬಂದಿದ್ದು, ಕಮಲನಗರ ತಾಲೂಕಿನವಿವಿಧಗ್ರಾಮಗಳಸಂಪರ್ಕ ಸೇತುವೆ ಸಂಪರ್ಕ ಕಡಿತ ಸೇರಿದಂತೆ ಬೆಳೆಗಳು ಸಂಪೂರ್ಣ ಹಾಳಾಗಿದೆ. ಹೊರಂಡಿ, ಸೋನಾಳ, ಕಳಗಾಪುರ, ಹುಲಸೂರ್ (ಕೆ), ಹಾಲಹಳ್ಳಿ, ಖೇಡ, ಸಾವಳಿ, ಹೊಳಸಮುದ್ರ, ಬಳತ(ಬ), ನಿಡೋದಾ ಗ್ರಾಮಗಳ ಸಾವಿರಾರು ಎಕರೆ ಪ್ರದೇಶದ ಹೊಲಗಳಿಗೆ ನೀರು ನುಗ್ಗಿದೆ. ಇದರಿಂದ ಕಟಾವಿಗೆ ಬಂದ ಉದ್ದು, ಹೆಸರು, ಸೋಯಾಬಿನ್ ಬೆಳೆಗಳಲ್ಲಿ ಮೊಳಕಾಲುದ್ದ ನೀರು ನಿಂತಿವೆ. ಇದರ ಜತೆ ಫಲವತ್ತಾದ ಮಣ್ಣು ಕೊಚ್ಚಿಕೊಂಡು.ಕಮಲನಗರ, ಹೋಗಿದೆ. ಸಂಗಮ, ಬಳತ(ಕೆ) ವ್ಯಾಯಾ ಠಾಣಾಕುಶನೂರ್, ಖೇಡ-ಸಂಗಮ, ಸೋನಾಳ ಕಳಗಾಪೂರ್ - ಸಂಗಮ ಗ್ರಾಮಗಳ ಸಂಪರ್ಕ ಸೇತುವೆ ಮೇಲೆ ನೀರು ಹರಿಯುತ್ತಿದೆ. ಇದರಿಂದ ಬಹುತೇಕ ಸಂಪರ್ಕ ಸೇತುವೆಗಳು ಸಂಚಾರಕ್ಕೆ ನಿಷೇಧಿ ಸಿದ ಹಿನ್ನಲೆಯಲ್ಲಿ ಪ್ರಯಾಣಿಕರು ನೆಂಟರಿಷ್ಟರ ಮನೆ ಮತ್ತು ಪಟ್ಟಣಗಳಿಗೆ ತೆರಳಲು ಪರದಾಡುತ್ತಿದ್ದಾರೆ. ಬಳತ-ಠಾಣಾಕುಶನೂರ್ ಮತ್ತು ಸೋನಾಳ-ಲಖನಗಾಂವ ಮಧ್ಯದಲ್ಲಿಇರುವಸೇತುವೆಗಳುಪ್ರವಾಹನೀರಿನಿಂದಜಲಾವೃತ್ತಗೊಂಡುಬರೊಬರಿ20 ದಿನಗಳಾಗಿವೆ. ಇದರಿಂದ ರೈತರು ಮತ್ತು ವ್ಯಾಪಾರಸ್ಥರಿಗೆ ತೊಂದರೆಯಾಗುತ್ತಿದೆ. ಸಾವಳಿ, ಬಳತ(ಕೆ), ನಿಡೋದಾ, ಹಾಲಹಳ್ಳಿ ಗ್ರಾಮದ ಹೊಲ ಸೇರಿದಂತೆ ತಗ್ಗು ಪ್ರದೇಶಗಳಲ್ಲಿ ಪ್ರವಾಹ ನೀರು ನುಗ್ಗಿರುವ ಹಿನ್ನಲೆಯಲ್ಲಿ ಜನ ಭಯ ಭೀತರಾಗಿದ್ದಾರೆ.

ಹೀಗಾಗಿ ತಾಲೂಕಿನ ಜನ ಮತ್ತು ಜಾನುವಾರುಗಳನ್ನು ತಡೆ ನೀಡಲಾಗಿದೆ. ತಾಲೂಕಿನ ಬುಹುತೇಕ ಸೇತುವೆ ಮೇಲೆ ಸತತವಾಗಿ ನೀರು ಹರಿಯುದರಿಂದ ಸೇತುವೆ ಬೀಳುವ ಸಂಭವ ಇರುವುದರಿಂದ ಎಚ್ಚರಿಕೆ ನೀಡಲಾಗಿದೆ.

# ಅಪಾಯದ ಮಟ್ಟದಲ್ಲಿ ಮಾಂಜ್ರಾ ನದಿ; ಜಿಟಿಜಿಟಿ ಮಳೆ



ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 27 : ನಗರದಲ್ಲಿ ಗುರುವಾರ ದಟ್ಟ ಕಾರ್ಮೋಡ ಕವಿದು ದಿನವಿಡೀ ಜಿಟಿಜಿಟಿ ಮಳೆಯಾಗಿದ್ದರಿಂದ ಜನಜೀವನ ಅಸ್ತವ್ಯಸ್ತಗೊಂಡಿತು. ಗುರುವಾರ ಬೆಳಕು ಹರಿಯುತ್ತಿದ್ದಂತೆ ಆರಂಭಗೊಂಡ ಮಳೆ ಕತ್ತಲಾಗುವವರೆಗೆ ನಿರಂತರವಾಗಿ ಸುರಿಯಿತು. ಬೀದರ್ ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲೂ ಮಳೆಯಾಗಿದೆ. ಜಿಲ್ಲೆಯ ಔರಾದ್, ಭಾಲ್ಕಿ, ಹುಮನಾಬಾದ್, ಚಿಟಗುಪ್ಪದಲ್ಲೂ ಮಳೆ ಬಿದ್ದಿದೆ. ಮಹಾರಾಷ್ಟ್ರದಲ್ಲಿ ವ್ಯಾಪಕ ಮಳೆಯಾಗುತ್ತಿರುವುದು ಹಾಗೂ ಅಲ್ಲಿನ ಜಲಾಶಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸುತ್ತಿರುವ ಪರಿಣಾಮ ಜಿಲ್ಲೆಯ ಮಾಂಜ್ರಾ ನದಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ. ಕಾರಂಜಾ ಕೂಡ ಮೈದುಂಬಿ ಹರಿಯುತ್ತಿದೆ. ಕಮಲನಗರ, ಭಾಲ್ಕಿ ಹಾಗೂ ಹುಲಸೂರಿನ ಹಲವೆಡೆ ಸೇತುವೆಗಳ ಮೇಲಿಂದ ನೀರು ಹರಿಯುತ್ತಿದ್ದು ಸಂಪರ್ಕ ಕಡಿತಗೊಂಡಿದೆ. ಜಮೀನುಗಳಿಗೆ ಅಪಾರ ಪ್ರಮಾಣದಲ್ಲಿ ನೀರು ನುಗ್ಗಿದೆ. ನದಿಗೆ ಹೊಂದಿಕೊಂಡಿರುವ ಜಮೀನುಗಳು ಸಂಪೂರ್ಣ ಜಲಾವೃತವಾಗಿವೆ.

**ಏಷ್ಯಾಕಪ್:40 ವರ್ಷಗಳಲ್ಲಿ ಮೊದಲ ಬಾರಿಗೆ ಏಷ್ಯಾಕಪ್‌ನ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ಪಾಕಿಸ್ತಾನ ಮುಖಾಮುಖಿ**

# ಭೋವಿ ಸಮಾಜದವರು ಸಮೀಕ್ಷೆಯಲ್ಲಿ ಪಾಲ್ಗೊಳ್ಳಿ: ರಂಗಪ್ಪ ವಡ್ಡರ



ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ: ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಸಮೀಕ್ಷೆಯಲ್ಲಿ ಭೋವಿ ವಡ್ಡರ ಸಮಾಜದ ಬಂಧುಗಳು ಜಾತಿ ಕಾಲಂನಲ್ಲಿ ತಮ್ಮ ಮೂಲ ಜಾತಿಯನ್ನು ನಿಮ್ಮ ಜಾತಿ ಪ್ರಮಾಣ ಪತ್ರದಲ್ಲಿರುವಂತೆ ನಮೂದಿಸಬೇಕು.

ರಾಜ್ಯದ ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದೆ.

ರಾಜ್ಯ ಸರ್ಕಾರವು ಮುಂದೆ ಈ ಸಮೀಕ್ಷೆಯಲ್ಲಿ ಅಂಕಿ ಅಂಶಗಳ ಆಧಾರದ ಮೇಲೆಯೇ ಹಿಂದುಳಿದ ಜಾತಿಗಳಿಗೆ ಸಾಮಾಜಿಕ, ಶೈಕ್ಷಣಿಕ ಔದ್ಯೋಗಿಕ ಮೀಸಲಾತಿಯ ನೀಡಿಕೆ ತೀರ್ಮಾನ ಕೈಗೊಳ್ಳಬಹುದು.

ವ್ಯವಸ್ಥಿತವಾಗಿ ಸಮೀಕ್ಷೆಯನ್ನು ನಡೆಸುವ ಉದ್ದೇಶಕ್ಕಾಗಿ ಇದು ಬಹಳ ಪ್ರಮುಖ ಕಾರ್ಯವಾಗಿದೆ.

ಆದರಿಂದ ಯಾದಗಿರಿ ಜಿಲ್ಲೆಯಾದ್ಯಂತ ಇರುವ ನಮ್ಮ ಭೋವಿ ವಡ್ಡರ ಸಮಾಜದ ಬಂಧುಗಳು ಜಾತಿಯನ್ನು ಸಮೀಕ್ಷೆವೇಳೆ ದಾಖಲಿಸುವಂತೆ ಜಿಲ್ಲಾ ಭೋವಿ ವಡ್ಡರ ಸಮಾಜದ ಮುಖಂಡ ರಂಗಪ್ಪ ವಡ್ಡರ ತಿಳಿಸಿದ್ದಾರೆ.

# ಎಲ್ಲೆಡೆ ಬೆಳೆದ ಲಂಚ-ವಂಚನೆಗಳ ಬಳ್ಳಿ




ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ.27: ಇಂದು ಲಂಚ–ವಂಚನೆಗಳ ಬಳ್ಳಿ ಎಲ್ಲೆಡೆ ಬೆಳೆದಿದೆ ಎಂದು ಗೋರ್ಟಾ(ಬಿ) ನೀಲಮ್ಮನ ಬಳಗದ ಆರತಿ ಯರನಳ್ಳೆ ಕಳವಳ ವ್ಯಕ್ತಪಡಿಸಿದರು.

ನಗರದ ಬಸವಗಿರಿಯಲ್ಲಿ ಶುಕ್ರವಾರ ಮರಣವೇ ಮಹಾ ನವಮಿ ಹಾಗೂ ಕಲ್ಯಾಣ ಕ್ರಾಂತಿ ವಿಜಯೋತ್ಸವ ನಿಮಿತ್ತ ನಡೆದ ಲಂಚ–ವಂಚನೆಗೆ ಕೈಯಾನದ ಭಾಷೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅನೇಕ ಶರಣರು, ಮಹಾತ್ಮರು, ದೇಶ ಭಕ್ತರ ತ್ಯಾಗ, ಬಲಿದಾನದಿಂದ ವಿಶ್ವಗುರುವೆನಿಸಬೇಕಾದ ಭಾರತದಲ್ಲಿ ಭ್ರಷ್ಟಮನಗಳು ಹುಟ್ಟಿಕೊಂಡಿರುವುದು ದುರಂತ ಎಂದರು.

12ನೇ ಶತಮಾನದಲ್ಲಿ ಕಸ ಗುಡಿಸುವ ಲಕ್ಕಮ್ಮ ದಾರಿಯಲ್ಲಿ ಹೊನ್ನನಾಣ್ಯಬಿದ್ದರೂ ಮುಟ್ಟಲಾರೆನೆಂದು ಛಲ ತೊಟ್ಟಿದ್ದಳು. ಆಯ್ದಕ್ಕಿ ಲಕ್ಕಮ್ಮ ಪತಿ ಮಾರಯ್ಯ ಎರಡು ಸೇರು ಅಕ್ಕಿ ಹೆಚ್ಚಿಗೆ ತಂದರೆ 'ಈಸಕ್ಕಿ ಆಸೆ ನಿಮಗೇಕೆ' ಎಂದು ಮರಳಿಸಿದ್ದು ಸಾಮಾನ್ಯವಲ್ಲ ಎಂದು ನುಡಿದರು.

ಶರಣೆಯರಂಥ ಶುದ್ಧ ಮನಸ್ಸುಗಳು ರೂಪುಗೊಂಡಾಗ ಲೋಕಾಯುಕ್ತದ ಅವಶ್ಯಕತೆಯೇ ಇರುವುದಿಲ್ಲ. ಮನೆ ಮನೆಯ ತಾಯಂದಿರು ಲೋಕಾಯುಕ್ತರಾಗಬೇಕೆಂದು ಅಕ್ಕ ಅನ್ನಪೂರ್ಣತಾಯಿ ಕರೆಯಿತ್ತದ್ದನ್ನು ನೆನಪಿಸಿದರು.

ದುಡಿಯುವ ಪ್ರವೃತ್ತಿ ಹೆಚ್ಚಾದರೆ ನೀಡುವ ಕೈಗಳು ಹೆಚ್ಚುತ್ತವೆ. ಸಮಾಜದಲ್ಲಿ ಸುಭಿಕ್ಷೆ ನೆಲೆಗೊಳ್ಳುತ್ತದೆ ಎಂದು ತಿಳಿಸಿದರು.

ಸಾನಿಧ್ಯ ವಹಿಸಿದ್ದ ಲಿಂಗಾಯತ ಮಹಾ ಮಠದ ಪ್ರಭುದೇವ ಸ್ವಾಮೀಜಿ ಮಾತನಾಡಿ, ಲಂಚದ ಆಸೆಯಿಂದ ವಂಚನೆ ಆರಂಭವಾಗುತ್ತದೆ. ಇಂದು ಜಗತ್ತು ಎದುರಿಸುತ್ತಿರುವ ದೊಡ್ಡ ಪಿಡುಗು ಲಂಚ– ವಂಚನೆ. ಆದ–ರೆ, ಇವುಗಳಲ್ಲಿ ಸಿಲುಕಿದವರು ಪರಮತೆಯನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಮಾನವನ ನಿಜವಾದ ಗುರಿ ತನ್ನ ಮೂಲವಾದ ಪರಮಾತ್ಮನಲ್ಲಿ ಒಂದಾಗುವುದು. ಲಿಂಗಪೂಜೆ, ಲಿಂಗಯೋಗದಿಂದ ಗುರಿ ಸೇರಬಹುದು. ಲಿಂಗಪೂಜೆಯ ಫಲ ದೊರಕಬೇಕಾದರೆ ಅನ್ಯಾಯ ಸೋಕದಿರಬೇಕು. ಲಂಚ–ವಂಚನೆಯಿಂದ ಇನ್ನೊಬ್ಬರ ಶೋಷಣೆ ಮಾಡಬಾರದು ಎಂದು ಹೇಳಿದರು.

ಕಣ್ಣಲ್ಲಿಯ ಆಸೆ ಕಳೆದಲ್ಲದೆ, ಕಾಯಕದ ಕೈಗಳು ಶುದ್ಧವಿಲ್ಲದೆ ದೇವರು ಸಿಗಲಾರ. ಭಕ್ತರು ಕಾಯಕವೆಂದು ವಾಮಮಾರ್ಗದಿಂದ ತಂದರೆ ಅದು ಶರಣರ ದೃಷ್ಟಿಯಲ್ಲಿ ಸಲ್ಲದ ಗಳಿಕೆ ಎಂದು ತಿಳಿಸಿದರು.

ಸತ್ಯ ಶುದ್ಧ ಕಾಯಕ ಸುಖಿ ಜೀವನದ ಮಾರ್ಗ. ಅದರಿಂದ ರಾತ್ರಿ ಚೆನ್ನಾಗಿ ನಿದ್ರೆ ಬರುತ್ತದೆ. ಜೀವನ ಲವಲವಿಕೆಯಿಂದ ಕೂಡಿರುತ್ತದೆ. ಶಿವಯೋಗಿಯಾದವನಿಗೆ ಆಸೆ, ರೋಷ, ಹರುಷಾದಿಗಳು ಇಲ್ಲವಾಗಿ ಸಕಲ ಜೀವಗಳಲ್ಲಿ ಸಮಭಾವವಿರಬೇಕು ಎಂದು ಬಸವಣ್ಣನವರು ಹೇಳಿದ್ದಾರೆ ಎಂದು ನುಡಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷೆ ನೀಲಮ್ಮ ರೂಗನ್ ಮಾತನಾಡಿ, ಹೊನ್ನಿನೊಳಗೊಂದೇರೆಯ, ಸೀರೆಯೊಳಗೊಂದು ಎಳೆಯಬೇಕೆಂದಡೆ ನಿಮ್ಮಾಣೆ ಎಂಬ ಬಸವಣ್ಣನವರ ವಚನ ವಿಧಾನಸೌಧ, ಸಂಸತ್ತು ಮತ್ತು ಕಚೇರಿಗಳಲ್ಲಿ ತೂಗು ಹಾಕಬೇಕು ಎಂದು ಅಕ್ಕ ಹೇಳುತ್ತಿದ್ದರು ಎಂದು ಅಕ್ಕ ಅನ್ನಪೂರ್ಣತಾಯಿ ಅವರನ್ನು ನೆನೆದು ಭಾವುಕರಾದವರು. ಆಗ ಸಭಿಕರ ಕಣ್ಣಾಲಿಗಳು ತೇವವಾದವು.

ನಿವೃತ್ತ ಮುಖ್ಯಶಿಕ್ಷಕ ರೇವಣಪ್ಪ ಮೂಲಗೆ, ನೀಲಮ್ಮನ ಬಳಗದ ಪ್ರಭಾವತಿ ಮಾಣಿಕಪ್ಪ ಗೋರನಾಳೆ, ಲಾವಣ್ಯ ಚನ್ನಬಸಪ್ಪ ಹಂಗರಗಿ, ಸಾಹಿತಿ ರಮೇಶ ಮಠಪತಿ ಇದ್ದರು.

ಸಂಗೀತಾ ಆರ್. ಪಾಟೀಲ ವಚನ ಪಠಣ ಮಾಡಿದರು. ಗುರುಶ್ರೀ ವಚನ ಗಾಯನ ಮಾಡಿದರು.

ಗೋರ್ಟಾ(ಬಿ) ಲಿಂಗಾಯತ ಸೇವಾ ದಳದ ಪ್ರಜ್ವಲ್ ಸಂತೋಷ್ ರಾಜೋಳೆ ನಿರೂಪಿಸಿದರು. ಬಸವ ಚಿಕ್ಕಲಿಂಗೆ ಸ್ವಾಗತಿಸಿದರು.

# ಭಾರಿ ಮಳೆಯಿಂದ ನಾಗರಿಕರಿಗೆ ಸಂಕಟ : ಚರಂಡಿ ಮತ್ತು ರಸ್ತೆ ಸಮಸ್ಯೆ ಬಗೆಹರಿಸಲು ಆಗ್ರಹ



ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ.27: ಆಲ್ ಇಂಡಿಯಾ ಪ್ಯಾಂಥರ ಸೇನಾ, ಜಿಲ್ಲಾ ಘಟಕ, ಬೀದರ ವತಿಯಿಂದ ರಾಜ್ಯ ಸರ್ಕಾರದ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಈಶ್ವರ ಬಿ.ಖಂಡ್ರೆ ಹಾಗೂ ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಂ ಖಾನ್ ರವರಿಗೆ ಮನವಿ ಸಲ್ಲಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಬೀದರ್ ನಗರದ ಮುಖ್ಯ ರಸ್ತೆಗಳಲ್ಲಿಯೂ, ಪ್ರತಿಯೊಂದು ಓಣಿಗಳಲ್ಲಿಯೂ ಭಾರಿ ಮಳೆಯಿಂದ ನೀರು ನಿಂತು ಸಾರ್ವಜನಿಕರಿಗೆ ಮನೆಗೆ ಹೋಗಲು–ಬರಲು ತೊಂದರೆ ಉಂಟಾಗಿದೆ. ಕೆಲವಡೆ 3–4 ಫೀಟ್ ಆಳದ ನೀರು ರಸ್ತೆಗಳಲ್ಲಿ ನಿಂತಿದ್ದು, ಶಾಲಾ ಮಕ್ಕಳು ಮತ್ತು ನಾಗರಿಕರು ಕಷ್ಟಪಟ್ಟು ಸಂಚಾರ ಮಾಡುತ್ತಿದ್ದಾರೆ.

ಸಂಸ್ಥೆಯ ಜಿಲ್ಲಾಧ್ಯಕ್ಷ ಭರತ್ ಕಾಂಬಳೆ ಅವರು, ನಗರದ ಚರಂಡಿಗಳು ಮುಚ್ಚಿ ಹೋಗಿವೆ, ರಸ್ತೆ ಗುಣಮಟ್ಟ ತುಂಬಾ ಕಳಪೆ ಆಗಿದೆ. ಆದಷ್ಟು ಬೇಗನೆ ಚರಂಡಿ ವ್ಯವಸ್ಥೆ ಹಾಗೂ ಡಾಂಬರೀಕರಣ ಕಾಮಗಾರಿ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸಚಿವರು ತಕ್ಷಣವೇ ಸೂಚನೆ ನೀಡಬೇಕು ಎಂದು ಆಗ್ರಹಿಸಿದರು.

ಅವರು ಎಚ್ಚರಿಕೆ ನೀಡುತ್ತಾ, ಒಂದು ವೇಳೆ ಈ ಸಮಸ್ಯೆ ಪರಿಹಾರವಾಗದಿದ್ದರೆ ಬೀದರ್‌ನಲ್ಲಿ ಉಗ್ರಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

# ಜಾತಿ ಕಾಲಂನಲ್ಲಿ ಹಿಂದೂ ಗೊಂಡ ಎಂದು ಬರೆಯಿಸಿ: ಬಂಡೆಪ್ಪ ಖಾಶಂಪೂರ್




ಬೀದರ. ಸೆ. 27 : 'ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಧರ್ಮದ ಕಾಲಂನಲ್ಲಿ ಹಿಂದೂ, ಜಾತಿಯಲ್ಲಿ ಗೊಂಡ ಎಂದು ನಮೂದಿಸಬೇಕು' ಎಂದು ಮಾಜಿ ಸಚಿವ ಬಂಡೆಪ್ಪ ಖಾಶಂಪೂರ್ ತಿಳಿಸಿದರು.

ಹುಮ್ನಾಬಾದ ಪಟ್ಟಣದ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಬುಧವಾರ ನಡೆದ ಗೊಂಡ ಸಮಾಜದ ಸಭೆಯಲ್ಲಿ ಅವರು ಮಾತನಾಡಿದರು.

'ನಾವೆಲ್ಲರೂ ಗೊಂಡ ಜಾತಿಯವರೇ ಆಗಿದ್ದೇವೆ. ಸಮೀಕ್ಷೆಯಲ್ಲಿ ಎಲ್ಲರೂ ಒಂದೇ ರೀತಿಯ ವಿವರ ನೀಡುವುದರ ಮೂಲಕ ಹಕ್ಕುಗಳನ್ನು ಬಲಪಡಿಸಬೇಕು' ಎಂದರು.

ಈ ಸಂದರ್ಭದಲ್ಲಿ ಅಮೃತರಾವ್ ಚಿಮಕೋಡೆ, ಮುರಳಿಧರರಾವ್ ಎಕಲಾರಕರ, ಎಂ.ಎಸ್.ಕಟಗೆ, ಶಿವರಾಜ ಚೀನಕೇರಾ, ನಾಗರಾಜ್ ದುಬಲಗುಂಡಿ, ಮಾಳಪ್ಪ ಅಡಸಾರೆ, ಪ್ರಕಾಶ್ ಸೋನಕೇರಾ, ಅಶೋಕ್ ಸೋಂಡೆ, ವಿನಾಯಕ್ ಹಂದಿಕೇರಾ, ಶಿವಕುಮಾರ್ ಬೇಳಕೇರಾ, ವಿಠಲ್ ಬೇನ್ ಚಿಂಚೋಳಿ, ಸಚ್ಚಿನ್ ಕಲ್ಲೂರ್, ನಾರಾಯಣ್ ರಾಂಪೂರೆ, ತಾನಾಜಿ ಪಾಟೀಲ, ಪವನ್ ಗೊಂಡ, ರಾಜು, ಗಣೇಶ, ಉತ್ತಮ್, ಅರುಣ್ , ವಿಠಲ್ , ರಮೇಶ, ಮಲ್ಲು ಮೋಳಕೇರಾ, ಪಂಡೀತ, ಖಂಡಪ್ಪ, ಪ್ರಕಾಶ್, ಸಂತೋಷ್ ಸೇರಿದಂತೆ ಇತರರು ಹಾಜರಿದ್ದರು

# ಮೌಲ್ಯ ಶಿಕ್ಷಣ ಯುವಕರಿಗೆ ಪ್ರೇರಣೆ: ಪ್ರೊ.ಕೆ.ಸಿ.ವೀರಣ್ಣ




ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 27 : ಸ್ಪರ್ಧಾತ್ಮಕ ಜಗತ್ತಿನಲ್ಲಿ ಶಿಕ್ಷಣ ಕಲಿಸುವ ಪ್ರಮುಖ ಜವಾಬ್ದಾರಿ ಶಿಕ್ಷಕರದ್ದಾಗಿದೆ. ಶಿಕ್ಷಣ ಹೊರೆ ರಹಿತವಾಗಿರಬೇಕು. ಇದು ಸುಭದ್ರ ಭಾರತ ವಿಕಸಿತ ಭಾರತಕ್ಕೆ ನಾಂದಿ ಎಂದು ಕುಲಪತಿಳಾದ ಪ್ರೊ. ಕೆ.ಸಿ.ವೀರಣ್ಣ ನುಡಿದರು. ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ರೊಟರಿ ಕ್ಲಬ್ ಬೀದರ ಸಹಯೋಗದೊಂದಿಗೆ ಶಿವಾ ಇಂಟರ್ನ್ಯಾಶನಲ್ ಹೊಟೇಲಿನ ಸಭಾಂಗಣದಲ್ಲಿ ಶಿಕ್ಷಕರ ದಿನಾಚರಣೆ ಹಾಗೂ ರಾಷ್ಟ ನಿರ್ಮಾಣ ಶಿಕ್ಷಕ ಪ್ರಶಸ್ತಿ ಸಮಾರಂಭವನ್ನು ಜ್ಯೋತಿ ಪ್ರಜ್ವಲನ ಮಾಡಿದ ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರನ ಕುಲಪತಿಗಳಾದ ಪ್ರೊ. ಕೆ.ಸಿ. ವೀರಣ್ಣನವರು ಮುಂದುವರೆದು ನಿರಂತರ ಕಲಿಯುವಿಕೆಯಿಂದ ಒಂದು ಹೊಸ ವಾತಾವರಣ ನಿರ್ಮಾಣಗೊಂಡು ಧನಾತ್ಮಕ ವಿಚಾರಗಳಿಗೆ ಪ್ರೇರಣೆ ನೋಡಿದಂತಾಗುತ್ತದೆ.

ಶಿಕ್ಷಕರಾದವರು ನಿರಂತರ ಓದು, ಮನನ ಹಾಗೂ ಜವಾಬ್ದಾರಿಯನ್ನು ಅರಿತು ಶಿಕ್ಷಣ ವ್ಯವಸ್ಥೆ ಸುಧಾರಿಸಬೇಕು. ಶಿಕ್ಷಕರು ಸಂವಹನ ಮನೋಭಾವ ಅಳವಡಿಸಿಕೊಳ್ಳಬೇಕು. ಪಠ್ಯಕ್ರಮಕ್ಕೆ ಸೀಮಿತಗೊಳ್ಳದೆ ಹಲವು ವೈವಿಧ್ಯಮಯ ಚಟುವಟಿಕೆಗಳನ್ನು ಕರಗತ ಮಾಡಿಕೊಂಡು ಆದಿಶೆಯಲ್ಲಿ ಶಿಕ್ಷಣ ಅನುಷ್ಠಾನಕ್ಕೆ ಪ್ರಯತ್ನ ಮಾಡುವ ಮನೋಭಾವ ಶಿಕ್ಷಕರದಾಗಬೇಕು.

ಇಂದು ರೋಟರಿ ಸಂಸ್ಥೆ ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ಸೇವೆಯಲ್ಲಿ ಅಪ್ರತಿಮ ಕೆಲಸ ನಿರ್ವಹಣೆ ಮಾಡುತ್ತಿರುವುದು ನಾವೆಲ್ಲರೂ ಬಲ್ಲವರಾಗಿದ್ದೇವೆ. ಇಂದು ಅಂಥ ಸಂಸ್ಥೆ 25 ಶಿಕ್ಷಕರಿಗೆ ರಾಷ್ಟ್ರ ನಿರ್ಮಾಣ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಶ್ಲಾಘನೀಯ ಎಂದರು. ಮುಖ್ಯ ಅತಿಥಿಗಳಾದ ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಉಪನಿರ್ದೇಶಕರಾದ ಚಂದ್ರಕಾಂತ ಶಾಬಾದಕರ ಮಾತನಾಡುತ್ತ ನಮ್ಮ ಮಕ್ಕಳಲ್ಲಿಯ ಕೀಳರಿಮೆ ಹೊಡೆದು ಹಾಕಿ ಮುಖ್ಯ ವಾಹಿನಿ ತರಲು ಶಿಕ್ಷಕರು ಶ್ರಮಿಸಬೇಕು. ಮಕ್ಕಳಲ್ಲಿ ಬಹು ದೊಡ್ಡ ಪ್ರತಿಭೆ ಇದೆ, ಆದರೆ ಅದನ್ನು ಹೊರ ತರಬೇಕಾಗಿದೆ. ಶಿಕ್ಷಕರಾದವರು ಅಸಡ್ಡೆ ಹಾಗೂ ಮೂದಲಿಕೆ ಮಾತಾಡುವುದನ್ನು ಕಡಿಮೆ ಗೊಳಿಸಿ ಪರಿಣಾಮಕಾರಿ ಬೋಧನೆ ಮಾಡಿದಾಗ ಶಿಕ್ಷಣ ಇನ್ನು ಅಭಿವೃದ್ಧಿ ಹೊಂದಲು ಪ್ರಫುಲ್ಲ ಅವಕಾಶಗಳಿವೆ. ಪಾಲಕರಲ್ಲಿ ನಮ್ಮ ಮಕ್ಕಳು ಕೇವಲ ಡಾಕ್ಟರ, ಇಂಜಿನಿಯರ್ ಆಗಬೇಕೆಂಬ ಕಲ್ಪನೆ ಇದೆ, ಆದರೆ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ಮಕ್ಕಳು ಯು.ಪಿ.ಎಸ್.ಸಿ.ಯ ಸ್ಪರ್ಧಾತ್ಮಕ ಪರೀಕ್ಷೆ ಯಲ್ಲಿ ಯಶಸ್ವಿಯಾಗಲು ನಾವೆಲ್ಲರೂ ಸಮಾರೋಪಾದಿಯಲ್ಲಿ ಜಾಗೃತಿ ಮಾಡಲು ಎರಡು ಸಂಘಟನೆಗಳು ನಮ್ಮ ಜೊತೆ ಕೈ ಜೋಡಿಸಲು ಮನವಿ ಮಾಡಿದರು. ನನ್ನ ಈ ಮುಂದಿನ ಶೈಕ್ಷಣಿಕ ಅವಧಿಯಲ್ಲಿ ಜಿಲ್ಲೆಯ ಪಿ ಯು ಸಿ ಮಕ್ಕಳು ರಾಜ್ಯ ಕ್ಕೆ ನಂ.1 ರೀತಿಯಲ್ಲಿ ಉತ್ತೀರ್ಣರಾಗಿ ಹಿಂದುಳಿಯುವಿಕೆ ಹಣೆಪಟ್ಟಿಯಿಂದ ಶಾಶ್ವತವಾಗಿ ಹೊರ ಬರಲು ಕನಸನ್ನು ಕಂಡು ಪ್ರಯತ್ನ ಮಾಡುತ್ತಿದ್ದೇನೆಂದು ನುಡಿದರು.

ಪ್ರತಿಭಾ ಚಾಮಾ ಮಾತನಾಡಿ ಶಿಕ್ಷಕರಲ್ಲಿ ಬಹಳ ದೊಡ್ಡ ಸಾಮರ್ಥ್ಯ ಇದೆ. ವೃತ್ತಿ ಕೆಲಸದ ಜೊತೆಗೆ ಅನೇಕ ಕೆಲಸ ಕಾರ್ಯಗಳು ಮಾಡಿ ಸರಕಾರಕ್ಕೆ ಒಳ್ಳೆ ಹೆಸರು ತರುವವರು ಶಿಕ್ಷಕ ಸಮುದಾಯ. ಶಿಕ್ಷಕರಲ್ಲಿ ಜ್ಞಾನ, ತಾಳ್ಮೆ, ಪ್ರೀತಿ ಎಂಬ ಮಂತ್ರ ಇದ್ದಾಗ ಅವರು ಎಂಥ ಸಮಸ್ಯೆಗಳು ದೂರೀಕರಿಸಬಹುದಾಗಿದೆ. ದೇಶ ಅಭಿವೃದ್ಧಿಯಾಗಬೇಕಾದರೆ ಅದರ ಅಭಿವೃದ್ಧಿ ಕಂಬ ಶಿಕ್ಷಕರು. ಅನೇಕ ಕಷ್ಟಗಳ ಮಧ್ಯೆ ಅತ್ಯಂತ ನಿಷ್ಠಾವಂತರಾಗಿ ದುಡಿಯುವ ಶಿಕ್ಷಕರಿಗೆ ಇಂಥ ಪ್ರಶಸ್ತಿ ಪ್ರದಾನಗಳಿಂದ ಅವರಲ್ಲಿ ಉತ್ಸಾಹ ಇಮ್ಮಡಿ ಗೊಂಡು ಕೆಲಸ ಮಾಡಲು ಪ್ರೇರಣೆ ಸಿಕ್ಕಿದಂತಾಗುತ್ತದೆ ಎಂದರು.

ಬಿ ವ್ಹಿ ಬಿ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ಡಾ.ದೀಪಾ ರಾಗಾ ಸಹ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಾಯಕ ಗವರ್ನರ ರೋಟರಿ ಕಲ್ಯಾಣ ವಲಯದ ಹಾವಶೆಟ್ಟಿ ಪಾಟೀಲ ..ಅನೇಕ ಕಾರ್ಯಗಳನ್ನು ಮಾಡಿಯೇ ಜನಮನದಲ್ಲಿ ನೆಲೆಗೊಂಡ ಸಂಘ ನಮ್ಮದಾಗಿದೆ. ಮುಂಬರುವ ದಿನಗಳಲ್ಲಿ ಮಹಿಳೆಯರ ಸರ್ವಿಕಲ್ ಸಂಕಷ್ಟಕ್ಕೆ ವ್ಯಾಕ್ಸಿನೇಶನ್ ಹಾಗೂ ಮಕ್ಕಳಿಗೆ ಕೌಶಲ್ಯ ಕಲಿಯುವಿಕೆಗೆ ಸಹಕರಿಸಲು ಹತ್ತು ಲಕ್ಷ ಗಣಕ ಯಂತ್ರ ವಿತರಿಸುವ ಬೃಹತ್ ಯೋಜನೆ ನಮ್ಮದಾಗಿದೆ. ಈಗಾಗಲೇ ಪೋಲಿಯೋ ನಿರ್ಮಾಲನೆಗಾಗಿ ಶ್ರಮಿಸಿ ದಾಖಲೆ ಮಾಡಲಾಗಿದೆ. ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ಫ್ಯಾನ, ಆಮ್ಲಜನಕ ಯಂತ್ರ ನಿರ್ವಹಣೆ ಹೀಗೆ ಅನೇಕ ಸಾಮಾಜಿಕ ಕೆಲಸಗಳಿಗೆ ಸ್ಪಂದಿಸಿದೆ ಎಂದರು.

ಮೊದಲಿಗೆ ರೊಟರಿ ಕ್ಲಬ್ ಅಧ್ಯಕ್ಷರಾದ ಬಸವಕುಮಾರ ಪಾಟೀಲ ಸ್ವಾಗತಿಸಿದರು, ಪ್ರಾಸ್ತಾವಿಕವಾಗಿ ಕ.ಸಾ.ಪ.ಜಿಲ್ಲಾಧ್ಯಕ್ಷರಾದ ಸುರೇಶ ಚನ್ನಶೆಟ್ಟಿ ಮಾತನಾಡಿ ಇಂದು ಶಿಕ್ಷಕರ ದಿನಾಚರಣೆ ಇದು ವೈವಿಧ್ಯಮಯ ವಾಗಿದೆ. ಇಲ್ಲಿ ಸಂಗನವಾಡಿ ಶಿಕ್ಷಕಿಯರ ಜೊತೆಗೆ ಪ್ರಾಥಮಿಕ, ಪ್ರೌಢ, ಪಿ ಯು ಸಿ ಡಿಗ್ರಿ, ಡಿಪ್ಲೋಮಾ, ಐಟಿಐ, ಇಂಜಿನಿಯರಿಂಗ, ಪಶುವೈದ್ಯಕೀಯ, ತೋಟಗಾರಿಕೆ, ಬ್ರಿಮ್ಸ ಸೇರಿದಂತೆ ಎಲ್ಲರನ್ನು ಸೇರಿಸಿ 25 ಜನರನ್ನು ಆಯ್ಕೆ ಮಾಡಿ ಇಲ್ಲಿ ಸರಕಾರಿ ಅನುದಾನ ಅನುದಾನ ರಹಿತ ಎಂಬ ಭೇದ ಭಾವ ಮಾಡದೆ ಎಲ್ಲರ ಕ್ಷಮತೆ ಹಾಗೂ ಪರಿಶ್ರಮಕ್ಕೆ ಗೌರವ ಕೊಡಲಾಗಿದೆ ಎಂದರು. ರೋಟರಿ ಕ್ಲಬ್ ಕಾರ್ಯದರ್ಶಿ ಅನೀಲಕುಮಾರ ಬಿರಾದಾರ ವಂದಿಸಿದರೆ, ಶಿವಶಂಕರ ಟೋಕರೆ ನಿರೂಪಿಸಿದರು.

# ರೈತರಿಗೆ ವಾರದೊಳಗೆ ಪರಿಹಾರ ಒದಗಿಸದಿದ್ದರೆ ಉಗ್ರ ಹೋರಾಟ: ಸಿದ್ರಾಮಪ್ಪ ಆಣದೂರೆ



ಬೀದರ. ಸೆ. 27: ಜಾತಿ ಜನಗಣತಿ ಬಿಟ್ಟು ಬೆಳೆಹಾನಿಯಿಂದ ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರ ಶೀಘ್ರವೇ ಪರಿಹಾರ ವಿತರಣೆ ಮಾಡಬೇಕು. ವಾರದೊಳಗೆ ಪರಿಹಾರ ನೀಡದೇ ಇದ್ದರೆ ಸಾವಿರಾರು ರೈತರೊಂದಿಗೆ ಉಗ್ರಹೋರಾಟ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಸಿದ್ರಾಮಪ್ಪ ಆಣದೂರೆ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಅತಿವೃಷ್ಟಿಯಿಂದ ಲಕ್ಷಾಂತರ ಎಕರೆ ರೈತರ ಜಮೀನಿನಲ್ಲಿ ಬೆಳೆದ ಬೆಳೆಗಳು ನಾಶವಾಗಿವೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಹೀಗಿರುವಾಗ ಸರ್ಕಾರ ಜಾತಿ ಜನಗಣತಿಯಲ್ಲಿ ನಿರತವಾಗಿದೆ. ಇದೇ ರೀತಿ ಇನ್ನೂ ಸ್ವಲ್ಪ ದಿನ ಹೀಗೆ ಮುಂದುವರೆದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಕಾಲ ದೂರವಿಲ್ಲ. ಆದ್ದರಿಂದ ಹಳ್ಳಿಗಳಿಗೆ ತೆರಳಿ ರೈತರೊಂದಿಗೆ ಚರ್ಚಿಸಿದ್ದೇವೆ. ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ. ರೈತರ ತಾಳ್ಮೆ ಕಟ್ಟೆಯೊಡೆದರೆ ಶ್ರೀಲಂಕಾ ಮತ್ತು ನೇಪಾಳದಂತೆ ದಂಗೆಏಳುವ ಸಂಭವವಿದೆ. ಮುಂದಾಗುವ ಅನಾಹುತಕ್ಕೆ ಸರ್ಕಾರವೇ ಹೊಣೆಯಾಗುತ್ತದೆ ಎಂದರು.

ಅತಿವೃಷ್ಟಿಯಿಂದ ಬೆಳೆಹಾನಿಯಾಗಿದೆ. ರೈತರು ಈಗಾಗಲೇ ಕಂಗಾಲಾಗಿದ್ದಾರೆ. ಗಾಯದ ಮೇಲೆ ಬರೆ ಎಳೆದಂತೆ ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆಯ ಚುನಾವಣೆ ಕೂಡಾ ಮುಂದೂಡಲಾಗಿದೆ. ಆಡಳಿತ ಮಂಡಳಿ ಇಲ್ಲದೆ ಕಾರ್ಖಾನೆ ಆರಂಭ ಆಗುವುದಿಲ್ಲ. ಕಾರ್ಖಾನೆ ಆರಂಭಿಸದಿದ್ದರೆ ರೈತರ ಕಬ್ಬು ಸಾಗಾಟ ನಡೆಯುವುದಿಲ್ಲ. 4 ಲಕ್ಷ ಟನ್ ಕಬ್ಬು ನುರಿಸುವ ಗುರಿ ಹೊಂದಿರುವ ನಾರಂಜಾ ಸಕ್ಕರೆ ಕಾರ್ಖಾನೆ ಬಂದ್ ಆದರೆ ನಮ್ಮ ಮುಂದಿನ ಗತಿಯೇನು? ಎಂದು ರೈತರು ಆತಂಕದಲ್ಲಿದ್ದಾರೆ.

ಈ ಜನಪ್ರತಿನಿಧಿಗಳು ತಮ್ಮ ಪ್ರತಿಷ್ಠೆಗಾಗಿ ರೈತರನ್ನು ಸಂಕಷ್ಟಕ್ಕೆ ತಳ್ಳಿದ್ದಾರೆ ಎಂದು ಅಸಮಾಧಾನ ಹೊರಹಾಕಿದರು. ಜನಗಣತಿ ಬದಲಾಗಿ ರಾಜಕಾರಣಿಗಳ ಆಸ್ತಿಗಣತಿ ನಡೆ–ಯಲಿ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮಧ್ಯಸ್ಥಿಕೆ ವಹಿಸಿ ಕಾರ್ಖಾನೆಯನ್ನು ಆರಂಭಿಸಬೇಕು. ಇಲ್ಲದಿದ್ದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದರಲ್ಲದೆ ಡಿಸಿಸಿ ಬ್ಯಾಂಕ್‌ನಲ್ಲಿ ರೈತರಿಗೆ ಸಾಲ ನೀಡಲು ಹಣ ಇಲ್ಲ ಎನ್ನುತ್ತಾರೆ. ರೈತರು ಧೈರ್ಯದಿಂದ ಪ್ರಶ್ನೆ ಮಾಡುವುದಿಲ್ಲ. ಒಟ್ಟಿನಲ್ಲಿ ಇವರಾರಿಗೂ ರೈತರ ಬಗ್ಗೆ ಕಾಳಜಿಯಿಲ್ಲ ಎಂದು ಸಿದ್ರಾಮಪ್ಪ ಕಳವಳ ವ್ಯಕ್ತಪಡಿಸಿದರು.

ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಶ್ರೀಮಂತ ಬಿರಾದಾರ ಮಾತನಾಡಿ ಈಗಾಗಲೇ ಅತಿವೃಷ್ಟಿಯಿಂದ ಖರೀಫ ನಾಶವಾಗಿದೆ. ರಬ್ಬಿ ಬಿತ್ತನೆ ಮಾಡೋಣ ಎಂದರೆ ಮತ್ತೆ ಮಳೆ ಆವಾಂತರ ಸೃಷ್ಟಿಸಿದೆ. ಇಳುವರಿ ಇಲ್ಲ. ರೈತರ ಸಾಲ ದಿನೇ ದಿನೇ ಹೆಚ್ಚಾಗುತ್ತಿದೆ. ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಸರ್ಕಾರದ ಪರಿಹಾರದ ಹಣಕ್ಕಾಗಿ ಅಕೌಂಟ್ ಚೆಕ್ ಮಾಡುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಜಿಲ್ಲಾಧಿಕಾರಿಗಳಿಗೆ ತಕ್ಷಣವೇ ಪರಿಹಾರ ನೀಡಿ, ಇಲ್ಲ ಸಾಲ ಮನ್ನಾ ಮಾಡಿ ಎಂದು ಪತ್ರ ಬರೆಯಲಾಗಿದೆ. ಆದರೆ ಉತ್ತರ ಇಂದಿಗೂ ಸಿಕ್ಕಿಲ್ಲ ಎಂದರು. ಬಿಎಸ್‌ಎಸ್‌ಕೆ ಈಗಾಗಲೇ ಬಂದ್ ಆಗಿದೆ. ಅದೇ ರೀತಿ ನಾರಂಜಾ ಬಂದ್ ಆಗುವ ಆತಂಕದಲ್ಲಿ ರೈತರಿದ್ದಾರೆ. ಅತಿವೃಷ್ಟಿಯಿಂದ ಬೆಳೆಹಾನಿಯಾಗಿದ್ದು ದೇವರ ಪೆಟ್ಟಾದರೆ, ನಾರಂಜಾ ಸಕ್ಕರೆ ಕಾರ್ಖಾನೆಗಾಗಿ ನಡೆಯುತ್ತಿರುವ ರಾಜಕೀಯ ರೈತರ ಮೇಲೆ ಇನ್ನೊಂದು ರೀತಿಯ ಪೆಟ್ಟು ಬಿದ್ದಂತಾಗಿದೆ. ವಾರದೊಳಗೆ ನಾರಂಜಾ ಕಾರ್ಖಾನೆ ಕೂಡಾ ಆರಂಭಿಸಬೇಕು. ಇಲ್ಲದಿದ್ದರೆ ಹೋರಾಟ ಮಾಡಲಾಗುವುದು ಎಂದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಜಮಖಂಡಿ ಮಾತನಾಡಿ ಇಡೀ ರಾಜ್ಯದಲ್ಲಿಯೇ ಜಿಲ್ಲೆಯಲ್ಲಿ ರೈತರ ಮೇಲೆ ಹೆಚ್ಚು ಶೋಷಣೆಯಾಗುತ್ತಿದೆ. ಟನ್ ಕಬ್ಬಿಗೆ 3200 ರೂಪಾಯಿ ಬೆಲೆ ನೀಡಬೇಕು. ಈ ವಿಚಾರವನ್ನು ಶೀಘ್ರವೇ ಜಿಲ್ಲಾಧಿಕಾರಿಗಳು ಸಭೆ ಕರೆದು ತಿಳಿಸಬೇಕು. ಇಲ್ಲದಿದ್ದರೆ ರಾಜ್ಯಾಧ್ಯಕ್ಷರೊಂದಿಗೆ ರಸ್ತೆ ತಡೆ ಹೋರಾಟ ಮಾಡಲಾಗುವುದು ಎಂದರು. ಸಂಘದ ಪ್ರಧಾನ ಕಾರ್ಯದರ್ಶಿ ದಯಾನಂದ ಸ್ವಾಮಿ ಸಿರ್ಸಿ, ಪ್ರಮುಖರಾದ ಮಲ್ಲಿಕಾರ್ಜುನ ಸಂಗಮ ಭಾಲ್ಕಿ, ಪ್ರಕಾಶ ಬಾವಗೆ, ನಾಗಯ್ಯ ಸ್ವಾಮಿ, ಶಂಕ್ರೆಪ್ಪ ಪಾರಾ, ವೆಂಕಟರಾವ ಮರಕಲ್, ಹಣಮಂತರಾವ, ಧೂಳಪ್ಪ ಆಣದೂರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಬೆಳೆಹಾನಿ ಪರಿಹಾರ ನೀಡದಿದ್ದರೆ ರೈತರ ಆತ್ಮಹತ್ಯೆ ದ್ವಿಗುಣ: ಆಂದೋಲಾ ಶ್ರೀಗಳು



ಬೀದರ. ಸೆ. 27 : ಜಿಲ್ಲೆಯಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಸುಮಾರು 1 ಲಕ್ಷ ಹೆಕ್ಟೇರ್ ಬೆಳೆಹಾನಿಯಾಗಿದೆ. ಆದರೆ ಪರಿಹಾರ ಮಾತ್ರ ಸರ್ಕಾರ ಇಂದಿಗೂ ನೀಡಿಲ್ಲ. ಮಂತ್ರಿಗಳು ಕೇವಲ ಫೋಟೊಗಾಗಿ ರೈತರ ಜಮೀನಿಗೆ ತೆರಳಿ ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಶಿವಸೇನಾ ರಾಜ್ಯಾಧ್ಯಕ್ಷ ಪೂಜ್ಯ ಸಿದ್ಧಲಿಂಗ ಸ್ವಾಮೀಜಿ ಆಂದೋಲಾ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಶಾಸಕರು, ಮಂತ್ರಿಗಳು ತಮ್ಮ ಸಂಬಳ ಹೆಚ್ಚಿಸುವಂತೆ ಸ್ಪೀಕರ್‌ಗೆ ಮನವಿ ಕೊಡುವ ಇವರು ರೈತರ ಬೆಳೆಹಾನಿಯಾಗಿದೆ. ಅವರು ಸಂಕಷ್ಟದಲ್ಲಿದ್ದಾರೆ. ಪರಿಹಾರ ಹಣ ಬಿಡುಗಡೆ ಮಾಡಿ ಎಂದು ಸಿಎಂಗೆ ಕೇಳುವುದಿಲ್ಲ. ಇಲ್ಲಿಯ ಮಂತ್ರಿಗಳ ನಿರ್ಲಕ್ಷ ?? ನಡೆಯಿಂದ ರೈತರು ಕಂಗಾಲಾಗಿದ್ದಾರೆ. ಮಳೆಹನಿಯೊಂದಿಗೆ ರೈತರ ಕಣ್ಣೀರ ಹನಿಯ ಶಾಪ ನಿಮ್ಮನ್ನು ಕುರ್ಚಿಯಿಂದ ಕೆಳಗಿಳಿಯುವಂತೆ ಮಾಡುತ್ತದೆ ಎಂದು ಉಭಯ ಸಚಿವರ ವಿರುದ್ಧ ಹರಿಹಾಯ್ದರು.

ರಾಜ್ಯದಲ್ಲಿ 7 ತಿಂಗಳಲ್ಲಿ 760 ಅಪಘಾತಗಳು ನಡೆದಿವೆ. ರಸ್ತೆಮೇಲಿನ ಗುಂಡಿ ಮುಚ್ಚುವ ಕಾರ್ಯವೂ ಇವರಿಂದ ಸಾಧ್ಯವಾಗಿಲ್ಲ ಎಂದು ರಾಜ್ಯಸರ್ಕಾರದ ವಿರುದ್ಧ ಗರಂ ಆದ ಶ್ರೀಗಳು ಕ.ಕ.ದ ಏಳು ಜಿಲ್ಲೆಗಳಲ್ಲಿ ಒಂದು ವರ್ಷಕ್ಕೆ ಸುಮಾರು 2500 ಮಹಿಳೆಯರು ನಾಪತ್ತೆಯಾಗಿದ್ದಾರೆ. ಎಫ್‌ಐಆರ್ ಆದರೂ ಸಹಿತ ಹುಡುಕುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ ಎಂದರು.

ಮೂರು ವರ್ಷದಲ್ಲಿ ದುರಾಡಳಿತ ನಡೆಸಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 2649 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗಲಾದರೂ ಮುಖ್ಯಮಂತ್ರಿಗಳು ಕಣ್ಣುತೆರೆಯದಿದ್ದರೆ ರೈತರ ಆತ್ಮಹತ್ಯೆ ಸಂಖ್ಯೆ ದ್ವಿಗುಣವಾಗುತ್ತದೆ. ನಂತರ ಇದರ ಹೊಣೆ ಸರ್ಕಾರವೇ ಹೊರಬೇಕಾಗುತ್ತದೆ ಎಂದು ಶ್ರೀಗಳು ನುಡಿದರು.

ಪೊಲೀಸ್ ಕಾನ್ಸ್ಟೆಬಲ್ ನೇಮಕಾತಿ ವಿಷಯದಲ್ಲಿ ಈಗಿರುವ ವಯೋಮಿತಿ ಬಿಟ್ಟು ಜನರಲ್ 30ಕ್ಕೆ, ಪ.ಜಾ. ಪ.ಪಂ. 33ಕ್ಕೆ ಸರ್ಕಾರ ಹೆಚ್ಚಿಸಬೇಕು. ಅರ್ಥವಿಲ್ಲದ ಜಾತಿ ಜನಗಣತಿಯನ್ನು ಸರ್ಕಾರ ಕೈಬಿಟ್ಟು ಯುವಕರ ಕೈಯಲ್ಲಿ ಉದ್ಯೋಗ ನೀಡಿ. ಬಸವ, ಬುದ್ಧ ಮತ್ತು ಅಂಬೇಡ್ಕರ್ ಆಶಯದ ಮೇಲೆ ನಮ್ಮ ಸರ್ಕಾರ ನಡೆಯುತ್ತಿದೆ ಎಂದು ಪುಂಗಿ ಊದುವ ಸಿಎಂ ಅವರು ಉದ್ಯೋಗಾಕಾಂಕ್ಷಿಗಳಿಗೆ ಕೊಡಲಿಪೆಟ್ಟು ಹಾಕಿದ್ದಾರೆ. ಹುಮನಾಬಾದನಲ್ಲಿ ಮಳೆಯಿಂದ ಮನೆ ಬಿದ್ದಿವೆ. ಮುಸ್ಲಿಂ ಮನೆಗೆ ರೂ. 50 ಸಾವಿರ ಪರಿಹಾರ ನೀಡಲಾಗಿದೆ. ಹಿಂದೂ ವ್ಯಕ್ತಿಯ ಮನೆ ಬಿದ್ದರೆ ಕೇವಲ ರೂ. 15 ಸಾವಿರ ಮಾತ್ರ ನೀಡಲಾಗಿದೆ. ಇದೇನಾ ಸರ್ಕಾರದ ಸಾಮಾಜಿಕ ನ್ಯಾಯ? ಎಂದು ಸರ್ಕಾರದ ವಿರುದ್ಧ ಕೆಂಡಾಮಂಡಲರಾದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಜಿಎಸ್‌ಟಿ ಕಡಿಮೆ ಮಾಡಿ ಜನತೆಗೆ ದಸರಾ ಉಡುಗೊರೆ ನೀಡಿದ್ದಾರೆ. ಅದನ್ನು ಸ್ವಾಗತ ಮಾಡದ ಕಾಂಗ್ರೆಸ್ ಸರ್ಕಾರ ರೈತರಿಗೆ ಬೆಳೆಹಾನಿ ಪರಿಹಾರ ನೀಡಿ ದಸರಾ ಉಡುಗೊರೆ ನೀಡಲಿ ಎಂದು ಶಿವಸೇನಾ ವತಿಯಿಂದ ಮನವಿ ಮಾಡಿಕೊಳ್ಳುತ್ತೇವೆ ಎಂದು ಶ್ರೀಗಳು ತಿಳಿಸಿದರು.

ಐ ಲವ್ ಮೊಹಮ್ಮದ್' ಎಂದು ಇಸ್ಲಾಂ ಬಾಂಧವರು ಎಲ್ಲೆಂದರಲ್ಲಿ ಪೋಸ್ಟರ್ ಅಳವಡಿಸುತ್ತಿದ್ದಾರೆ. ಇದನ್ನು ಪ್ರಶ್ನೆ ಮಾಡಿದರೆ ಉತ್ತರ ಪ್ರದೇಶದಲ್ಲಿ ಕಲ್ಲು ತೂರಾಟ ಆಗುತ್ತದೆ. ದಾವಣಗೆರೆಯಲ್ಲಿ ಹಿಂದೂಗಳ ಮನೆ ಮೇಲೆ ಕಲ್ಲು ತೂರಾಟ ಆಗುತ್ತಿದೆ. ಇದಕ್ಕೆ ದಾವಣಗೆರೆಯಲ್ಲಿ ಶ್ಯಾಮನೂರ ಮಲ್ಲಿಕಾರ್ಜುನ ಗಲಭೆಕೋರರ ಪರ ನಿಂತಿದ್ದಾರೆ. ಇದು ಖಂಡನೀಯ ಎಂದರಲ್ಲದೆ ದೇಶದಲ್ಲಿ ಪ್ಯಾಲಿಸ್ತಿನಿ ಧ್ವಜ ಹಾರಾಟ ಮಾಡಲು ಅವಕಾಶ ನೀಡಬಾರದು ಎಂದರು.

ಬೀದರ್ ಜಿಲ್ಲೆಯಲ್ಲಿ ಮುಸ್ಲಿಂ ಶಿಕ್ಷಕನೊಬ್ಬ ಹಿಂದೂ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ಕೊಟ್ಟಾಗಲೂ ಇಲ್ಲಿಯ ಜಿಲ್ಲಾಡಳಿತ ಮತ್ತು ಉಸ್ತುವಾರಿ ಮಂತ್ರಿಗಳು ಕೈಕಟ್ಟಿ ಕುಳಿತಿದ್ದಾರೆ ಎಂದು ಹೇಳಿದ ಆಂದೋಲಾ ಶ್ರೀಗಳು ಇಂತಹ ಘಟನೆಗಳೆಲ್ಲ ಇವರ ಕಣ್ಣಿಗೆ ಕಾಣುವುದಿಲ್ಲವೇ? ಎಂದು ಪ್ರಶ್ನಿಸಿದರು. ಜಿಲ್ಲೆಗೆ ನಾನು ಬರಲು ನಿರ್ಬಂಧ ಹೇರಲಾಗುತ್ತಿದೆ. ಇದಕ್ಕೆ ಇನ್ನು ಮುಂದೆ ನಾನು ಹೆದರುವುದಿಲ್ಲ. ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವೆ. ನಿರ್ಬಂಧ ಹೇರುವುದು, ಗಡಿಪಾರು ಮಾಡುವುದು ಇದೆಲ್ಲ ನಡೆದರೆ ಸಹಿಸುವುದಿಲ್ಲ ಎಂದರು. ಮುಂದಿನ ದಿನಗಳಲ್ಲಿ ಶಿವಸೇನಾ ಜಿಲ್ಲಾಧ್ಯಕ್ಷರ ನೇಮಕಾತಿ ಶೀಘ್ರದಲ್ಲೇ ಮಾಡಲಾಗುವುದು ಎಂದು ಶ್ರೀಗಳು ತಿಳಿಸಿದರು.

ಇದೇ ವೇಳೆ ಸುದ್ದಿಗೋಷ್ಠಿಯಲ್ಲಿ ಶಿವಸೇನಾ ಮುಖಂಡರಾದ ಅಮೃತ ಪಾಟೀಲ, ವಿಲಾಸ ಶ್ರೀಗಿರಿ, ಗೋರಖನಾಥ ಮಡಿವಾಳ, ಪರಮೇಶ ಆಂದೋಲಾ, ಅನೀಲ ಜನವಾಡೆ, ಗುರುಶಾಂತ ಟೆಂಗಳಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಹಿರಿಯ ನಾಗರಿಕರ ಸಮಾವೇಶದಲ್ಲಿ ಶರಣ ವಿಜಯೋತ್ಸವ ನಾಡಹಬ್ಬ

ಮಲ್ಲಮ್ಮ ನುಡಿ ವಾರ್ತೆ



ಬಸವಕಲ್ಯಾಣ :– ಸೆ 27 ಹಿರಿಯರು ಇರುವ ಮನೆ ಸದ್ವಿಚಾರ,ಸದ್ಗುಣಗಳಿರುವ ತಾಣ, ಶಿಸ್ತು, ಸಂಯಮ, ಸಂಪ್ರದಾಯ ಸಂಸ್ಕೃತಿಯನ್ನು ಬೆಳೆಸುವ ಹಿರಿಯರು ಕುಟುಂಬಕ್ಕೆ ಕಲಶಪ್ರಾಶ ಎಂದು ಕಲಬುರ್ಗಿ ಮಹಾಂತ ಜ್ಯೋತಿ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಶೀವರಾಜ ಪಾಟೀಲ ಹೇಳಿದರು.

ಅವರು ಅಂತರರಾಷ್ಟ್ರೀಯ ಲಿಂಗಾಯತ ಧರ್ಮ ಕೇಂದ್ರ ಹಾಗೂ ಲಿಂಗವಂತ ಹರಳಯ್ಯ ಪೀಠದ ವತಿಯಿಂದ ಇಲ್ಲಿನ ಹರಳಯ್ಯನವರ ಗವಿಯಲ್ಲಿ ನಡೆಯುತ್ತಿರುವ ಶರಣ ವಿಜಯೋತ್ಸವ ನಾಡಹಬ್ಬ ಹುತಾತ್ಮ ದಿನಾಚರಣೆ ಕಾರ್ಯಕ್ರಮದ 5 ನೇಯ ದಿನದಂದು ನಡೆದ ಹಿರಿಯ ನಾಗರಿಕರ ಸಮಾವೇಶದಲ್ಲಿ ಜೀವನಕ್ಕೆ ಹಿರಿಯ ನಾಗರಿಕರ ಪ್ರೇರಣದಾಯಕ ಭಾವ–ನಿರ್ಭಾವ ಕುರಿತು ಮಾತನಾಡಿ,ಹಿರಿಯರಿಲ್ಲದ ಮನೆ ಗುರುವಿಲ್ಲದ ಮಠ ಶೋಭೆ ತರುವುದಿಲ್ಲ. ಹಿರಿಯರ ತಂದೆ–ತಾಯಿಯರ ಪ್ರೀತಿ ಸಿಗಲಾರದ ಮಕ್ಕಳು ಹೆಚ್ಚಾಗಿ ಕ್ರಿಮಿನಲ್‌ಗಳಾಗಿ ಬೆಳೆಯುತ್ತಾರೆ. ಹಿರಿಯರ ಜ್ಞಾನ ಅನುಭವ ಏನು ಎಂಬುದನ್ನು ಕಿರಿಯರು ಕೇಳಿಸಿಕೊಳ್ಳಬೇಕು. ಮೂಲಭೂತವಾದ ಕುಟುಂಬಗಳಲ್ಲಿ ಕಲಹದಿಂದ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿದ್ದು, ಮಕ್ಕಳಿದ್ದು ಹೆತ್ತವರು ವೃದ್ಧಾಶ್ರಮಕ್ಕೆ ಸೇರುತ್ತಿರುವುದು ಸಮಾಜದ ನೈತಿಕ ಅಧಃಪತನಕ್ಕೆ ಸಾಕ್ಷಿಯಾಗಿದ್ದು,ಸಂಸ್ಕಾರ ಭರಿತವಾದ ಮನಸ್ಸಿನಿಂದ ಇನ್ನೊಬ್ಬರನ್ನು ಗೌರವದಿಂದ ಆದರದಿಂದ ಕಾಣಬಹುದು ಎಂದರು.

ಜಾಗತಿಕಲಿಂಗಾಯತಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಬಸವರಾಜ ಬುಳ್ಳಾ ಮಾತನಾಡಿ,ಬಸವಣ್ಣನೇ ನಮ್ಮ ಧರ್ಮ ಗುರು ವಚನ ಸಾಹಿತ್ಯವೇ ನಮ್ಮ ಧರ್ಮ ಗ್ರಂಥ ನಾವೆಲ್ಲರೂ ಏಕದೇವೋಪಾಸಕರಾಗಬೇಕು. ಜಗತ್ತಿನಲ್ಲಿಯೇ ಸ್ತ್ರೀಯರ ಸಲುವಾಗಿ ತ್ಯಾಗ ಮಾಡಿದ ವ್ಯಕ್ತಿ ಬಸವಣ್ಣನವರು. ಅಂಗ–ಲಿಂಗ ಒಂದಾಗುವುದೇ ಸಾಮರಸ್ಯ. ಲಿಂಗಾಯತ ಧರ್ಮ ಪ್ರತ್ಯೇಕ ಸ್ವಾತಂತ್ರ್ಯ ಧರ್ಮವಾಗಿದೆ ಸಾಮಾಜಿಕ,ಶೈಕ್ಷಣಿಕ ಸಮೀಕ್ಷೆಯಲ್ಲಿ ಧರ್ಮದ ಕಾಲಂನಲ್ಲಿ ನಿರ್ಭಯವಾಗಿ ಲಿಂಗಾಯತ ವೆಂದು ಉಪಜಾತಿ ಕಾಲಂನಲ್ಲಿ ತಮ್ಮ ಕಾಯಕ ಅಥವಾ ಉಪಪಜಾತಿ ನಮೂದಿಸಿರಿ ಎಂದರು.

ಶ್ರೀ ಬಸವೇಶ್ವರ ಹಿರಿಯ ನಾಗರಿಕರ ಒಕ್ಕೂಟದ ಅಧ್ಯಕ್ಷ ಚನ್ನಪ್ಪ ಪ್ರತಾಪೂರೆ ಪ್ರಾಸ್ತವಿಕವಾಗಿ ಮಾತನಾಡಿ, ಹಿರಿಯ ನಾಗರಿಕರು ನಮ್ಮ ಬೌದ್ಧಿಕ ಸಂಪತ್ತು ಅವರಿಗೆ ದೀರ್ಘ ಕೆಲಸದ ಅನುಭವ, ಉತ್ತಮ ದೃಷ್ಟಿಕೋನ ಯೋಜನಾ ಕೌಶಲ್ಯ ಮತ್ತು ಸಾಮಾಜಿಕ ಕಾರ್ಯಗಳಿಗಾಗಿ ವಿನಿಯೋಗಿಸಲು ಸಾಕಷ್ಟು ಹೆಚ್ಚುವರಿ ಸಮಯವಿದೆ. ಹಿರಿಯರನ್ನು ಕುಟುಂಬದಲ್ಲಿ ತಿರಸ್ಕಾರ ಭಾವದಿಂದ ಕಾಣದೆ ಯಜಮಾನರಾಗಿ ಕಾಣಬೇಕು ಎಂದರು.

ನೇತೃತ್ವ ವಹಿಸಿದ ಪೂಜ್ಯ ಡಾ. ಗಂಗಾಂಬಿಕಾ ಅಕ್ಕ ಮಾತನಾಡಿ, ಒಳ್ಳೆಯ ಸಂಸ್ಕಾರ ಶರಣರ ಸಂಗ ಗುರು ಹಿರಿಯರ ಮೇಲಿನ ಭಕ್ತಿ ಗೌರವ ಆಚಾರ ವಿಚಾರಗಳಿಂದ ಉತ್ತಮ ವ್ಯಕ್ತಿತ್ವ ನಿರ್ಮಾಣ ಸಾಧ್ಯ ಹಿರಿಯರ ಆದರ್ಶಗಳು ಇಂದಿನ ಪೀಳಿಗೆಗೆ ಮಾರ್ಗದರ್ಶನವಾಗಬೇಕು. ಶರಣರ ಮಾರ್ಗದರ್ಶಣ ನಡೆ ನುಡಿ ವಚನಗಳು ಆಚಾರ ವಿಚಾರಗಳು ಎಂದೆಂದಿಗೂ ಪ್ರಸ್ತುತ ಎಂದರು.

ಬಸವ ಧರ್ಮ ಪೀಠದ ಪೂಜ್ಯಶ್ರೀ ಸಿದ್ಧರಾಮೇಶ್ವರ ಮಹಾಸ್ವಾಮಿಗಳು ಸಾನಿಧ್ಯವಹಿಸಿಕೊಂಡು ಆಶೀರ್ವಚನ ನೀಡಿದರು. ಮಾಜಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ರಾಜಕುಮಾರ ಬಿರಾದಾರ ಸಿರಾಗಾಪೂರ ಉದ್ಘಾಟಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿ.ಆರ್.ಪಾಟೀಲ, ಗುರುಪಾದಪ್ಪ ಪಾಟೀಲ, ವೈಜಿನಾಥ ಹಳ್ಳೆಖೆಡೆ, ದೇವಿಂದ್ರಪ್ಪ ಗುಣತೂರೆ, ಬಸವರಾಜ ನರಶೆಟ್ಟಿ, ಶಿವಪುತ್ರಪ್ಪ ಅವಸೆ, ರಾಜಶೇಖರ ಬಿರಾದಾರ, ಚಂದ್ರಪ್ಪ ಬಿರಾದಾರ, ಸುಲೋಚನಾ ಮಾಮಾ, ಗಂಗಮ್ಮ ಕೊಳಕೂರ, ಮಂಠಾಳದ ಚಂದ್ರಕಾಂತ ಝುಂಝಾ, ಧನರಾಜ ಸಾತಬಾಯಿ, ಶಕುಂತಲಾ ಕರಣೆ, ಅಚಿಜಲಿ ಬಾಲಿಕಿಲೆ, ಸವಿತಾ ಬಾಲಿಕಿಲೆ, ಚಂಪಾವತಿ ಮಹಾಜನ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಶಂಕರ ಕರಣೆ ಸ್ವಾಗತಿಸಿದರು. ಲೀಲಾ ಸಂಕಳ್ಳಿ ನಿರೂಪಿಸಿದರು. ಝೀ ಟಿ.ವಿ. ಸರಿಗಮಪ 21ನೇ ವಿಜೇತೆ ಶಿವಾನಿ ಶಿವದಾಸ ಸ್ವಾಮಿ ತಂಡದವರಿಂದ ನಡೆದ ವಚನ ಗಾಯನ ಸೇರಿದ ಜನರ ಮನಸೂರೆಗೊಂಡವು.



ಬಸವಕಲ್ಯಾಣ :– ಇಲ್ಲಿನ ಅಕ್ಕ ಮಹಾದೇವಿ ಮಹಿಳಾ ಮಹಾವಿದ್ಯಾಲಯದ ಆವರಣದಲ್ಲಿ ಶುಕ್ರವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದಲ್ಲಿ ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಅವರಿಗೆ ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಪೀಠದ ವೀರಸೋಮೇಶ್ವರ ಜಗದ್ಗುರುಗಳು ಸನ್ಮಾನಿಸಿದರು.ಈ ಸಂದರ್ಭದಲ್ಲಿ ಹಾರಕೂಡದ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಪೂಜ್ಯ ಶ್ರೀ ಡಾ ಚನ್ನವೀರ ಶಿವಾಚಾರ್ಯರು. ಶಾಸಕರಾದ ಶರಣು ಸಲಗರ. ಔರಾದ್ ಶಾಸಕರಾದ ಪ್ರಭು ಚವ್ಹಾಣ. ಶೈಲೇಂದ್ರ ಬೆಲ್ದಾಳ. ಹುಮನಾಬಾದ ಶಾಸಕರಾದ ಡಾ ಸಿದ್ದಲಿಂಗ ಪಾಟೀಲ. ಎಂಎಲ್ಸಿ ಬಿ. ಜಿ. ಪಾಟೀಲ್. ಭಾಲ್ಕಿಯ ಮಾಜಿ ಶಾಸಕರಾದ ಪ್ರಕಾಶ ಖಂಡ್ರೆ. ಎಂಎಲ್ಸಿ ರಘುನಾಥ್ ಮಲಕಾಪೂರೆ. ಪ್ರಮುಖರಾದ ಪ್ರದೀಪ ವಾತಡೆ. ಸುನೀಲ ಪಾಟೀಲ. ಸುರೇಶ ಸ್ವಾಮಿ. ಸೂರ್ಯಕಾಂತ ಶೀಲವಂತ. ರುದ್ರೇಶ್ವರ ಸ್ವಾಮಿ ಗೋರ್ಟಾ. ರಮೇಶ್ ರಾಜೋಳೆ. ಗೋವಿಂದರಡ್ಡಿ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

## 'ಸೃಷ್ಟಿ ಪರಮಾತ್ಮನದು ವ್ಯಾಮೋಹ ಜೀವಾತ್ಮನದು'
## ಕಾಶಿ ಜ್ಞಾನ ಪೀಠದ ಶ್ರೀಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಶರನ್ನವರಾತ್ರಿ ಸಂದೇಶ

ಮಲ್ಲಮ್ಮ ನುಡಿ ವಾರ್ತೆ



ವಾರಾಣಾಸಿ (ಉ.ಪ್ರ.) : ಶಿವನ ಸೃಷ್ಟಿಯ ಪ್ರಕೃತಿಯೊಳಗಿನ ಕಲ್ಲು, ಮಣ್ಣು,ಉಸುಕು,ನೀರು ಬಳಸಿಯೇ ಮನುಷ್ಯ ತನ್ನ ವಾಸಕ್ಕೆಂದು ಮನೆ–ಮಠಗಳನ್ನು ನಿರ್ಮಿಸುತ್ತಾನೆ. ಅವು ಭಗವಂತನ ಕೃಪೆ ಎನ್ನುವದನ್ನು ಮರೆತು ಎಲ್ಲವೂ ತನ್ನದೆಂದು ಹೇಳಿಕೊಳ್ಳುತ್ತಾನೆ. ಇಲ್ಲಿ ಸೃಷ್ಟಿ ಪರಮಾತ್ಮನದಾದರೂ ಅಲ್ಲಿರುವ ವ್ಯಾಮೋಹ ಜೀವಾತ್ಮನದಾಗಿರುವುದರಿಂದ ಅಂತಿಮವಾಗಿ ಯಾವುದೋ ನೆಲೆಯಲ್ಲಿ ದುಃಖಿತನಾಗುತ್ತಾನೆ ಎಂದು ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದಾಗಿರುವ ಕಾಶಿ ಜ್ಞಾನ ಪೀಠದ ಶ್ರೀಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಕರೆ ನೀಡಿದರು.

ಅವರು ಉತ್ತರಪ್ರದೇಶದ ವಾರಾಣಾಸಿ ನಗರದ ತಮ್ಮ ಜ್ಞಾನ ಪೀಠದಲ್ಲಿ ಶರನ್ನವರಾತ್ರಿ ಆಚರಣೆಯ ಅಂಗವಾಗಿ ಶನಿವಾರ 6ನೆಯ ದಿನದ ಶುಭಾಶೀರ್ವಾದ ಸಂದೇಶ ನೀಡಿ ಮಾತನಾಡುತ್ತಿದ್ದರು. ಮನುಷ್ಯ ಸಾಮಾನ್ಯವಾಗಿ ಮನೆ, ಮಠ, ಮಡದಿ, ಮಕ್ಕಳನ್ನೇ ತನ್ನ ಸಂಸಾರವೆಂದು ತಿಳಿದುಕೊಂಡಿರುತ್ತಾನೆ. ಆದರೆ ಅವು ಯಾವವೂ ಅವನದಾಗಿ ಇರುವದಿಲ್ಲ. ಅದೆಲ್ಲವೂ ಕೇವಲ ವ್ಯಾಮೋಹದ ಭ್ರಮೆ ಮಾತ್ರ. ಯಾವ ವಸ್ತುವಿನ ಮೇಲೆ ನನ್ನದೆಂಬ ಭಾವನೆ ಇರುತ್ತದೆಯೋ ಅದು ಹೆಚ್ಚು ದುಃಖವನ್ನೇ ಕೊಡುತ್ತದೆ ಎಂದರು.

ನೀರಿನಲ್ಲಿರುವ ಕಮಲದಂತೆ, ಕೆಸರಿನಲ್ಲಿರುವ ಕುಂಬಾರ ಹುಳದಂತೆ ಸಂಸಾರದಲ್ಲಿದ್ದ ವಿವೇಕಿಯು ಸಂಸಾರದ ವ್ಯಾಮೋಹವನ್ನು ಅಂಟಿಸಿಕೊಳ್ಳದೆ ಎಲ್ಲವೂ ಭಗವತ್ ಸೃಷ್ಟಿಯೇ ಆಗಿದೆ ಎಂಬ ಭಕ್ತಿಯ ಮುಕ್ತ ಭಾವ ಬದ್ಧತೆಯನ್ನು ಹೊಂದಿದಾಗ ಮಾತ್ರ ಶಿವ–ಶಕ್ತಿಯರ ಕೃಪಾಕಾರುಣ್ಯದೊಂದಿಗೆ ಸಾಕ್ಷಾತ್ಕಾರ ಸಂಪಾದನೆ ಸಾಧ್ಯವಾಗುತ್ತದೆ ಎಂದೂ ಶ್ರೀಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಕುಂಕುಮಾರ್ಚನೆ:ಶರನ್ನವರಾತ್ರಿಯ ಸಂದರ್ಭದಲ್ಲಿ ಕಾಶಿ ಜ್ಞಾನಪೀಠದಲ್ಲಿರುವ ಶ್ರೀಚಕ್ರಸಹಿತ ಆದಿಶಕ್ತಿ ಮಾತೆಗೆ ಲಲಿತಾ ಸಹಸ್ರನಾಮ ಪಠಣಪೂರ್ವಕ ವಿಶೇಷ ಕುಂಕುಮಾರ್ಚನೆ ನಡೆಯಿತು. ರಾಜ್ಯದ ವಿವಿಧ ಜಿಲ್ಲೆಗಳ ಭಕ್ತರು ಪಾಲ್ಗೊಂಡಿದ್ದರು.



ಬಸವಕಲ್ಯಾಣ:– ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀಮಠದ ದಾಸೋಹ ಮನೆಯಲ್ಲಿ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರ ಸಾನಿಧ್ಯದಲ್ಲಿ ನವರಾತ್ರಿ ಘಟಸ್ಥಾಪನೆಯ 6ನೇ ದಿನದ ಪೂಜೆ ಜರುಗಿತು. (ಮಲ್ಲಮ್ಮ ನುಡಿ ಚಿತ್ರ)

## ಇಂದು ಉಚಿತ ಕಣ್ಣಿನ ತಪಾಸಣೆ ಶಿಬಿರ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.27–ಜಿಲ್ಲೆಯ ಹುನಗುಂದ ತಾಲೂಕಿನ ಕಮತಗಿ ಪಟ್ಟಣದ ಕಲ್ಯಾಣಮಠ ಪಾಲಿಕ್ಲಿನಿಕ್‌ದಲ್ಲಿ ಸೆ.28 ರಂದು ಉಚಿತ ಕಣ್ಣಿನ ತಪಾಸಣೆ ಶಿಬಿರ ನಡೆಯಲಿದೆ.

ಡಾ.ಎಚ್.ಎಚ್.ಕಲ್ಯಾಣಮಠ ಅವರ ತಂದೆ ಲಿಂ.ಸಂಗನಬಸಯ್ಯ ಕಲ್ಯಾಣಮಠ ಅವರ ಪುಣ್ಯಸ್ಮರಣೆಯ ಅಂಗವಾಗಿ ರವಿವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಶಿಬಿರ ಬಾಗಲಕೋಟೆಯ ಐ ಬಡ್ಡಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ನಡೆಯಲಿದೆ.

ಶಿಬಿರದಲ್ಲಿ ಐ ಬಡ್ಡಿ ಕಣ್ಣಿನ ಆಸ್ಪತ್ರೆಯ ವೈದ್ಯರಾದ ಡಾ.ರಾಜಶೇಖರ ಪಾಟೀಲ,ಡಾ.ಕಿರಣ,ಡಾ.ವಿದ್ಯಾಶ್ರೀ ಭಾಗವಹಿಸಿ ರೋಗಿಗಳ ತಪಾಸಣೆ ನಡೆಸುವರು.ಅವಶ್ಯವಿರುವ ರೋಗಿಗಳಿಗೆ ಉಚಿತ ಔಷಧಿ ನೀಡಲಾಗುವುದು. ರೈತಮಿತ್ರ, ಯಶಸ್ವಿನಿ ಕಾರ್ಡ್ ಇದ್ದವರಿಗೆ ಉಚಿತ ಶಸ್ತ್ರಚಿಕಿತ್ಸೆ ಮಾಡಲಾಗುವುದು ಹಾಗೂ ಯಶಸ್ವಿನಿ ಕಾರ್ಡ್ ಇಲ್ಲದವರಿಗೆ ರಿಯಾಯಿತಿ ದರದಲ್ಲಿ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಲಾಗುವುದು.

ಕಮತಗಿ ಪಟ್ಟಣ ಹಾಗೂ ಸುತ್ತ ಮುತ್ತಲಿನ ಗ್ರಾಮಸ್ಥರು ಶಿಬಿರದಲ್ಲಿ ಭಾಗವಹಿಸಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಡಾ.ಎಚ್.ಎಸ್.ಕಲ್ಯಾಣಮಠ ತಿಳಿಸಿದ್ದಾರೆ.

## ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪೂರಕ: ಕುಲಸಚಿವ ಪಿ.ನಾಗರಾಜು ಅಭಿಮತ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.26–ವಿದ್ವಾಂಸರಿಂದ ವಿಷಯವಾರು ವೈವಿಧ್ಯಮಯ ವಿಷಯ ಸಂಗ್ರಹಿಸಿದ ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪೂರಕವಾಗಿವೆ ಎಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಆಡಳಿತ ವಿಭಾಗದ ಕುಲಸಚಿವ ಪಿ.ನಾಗರಾಜು ಅವರು ಹೇಳಿದರು.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಸಾರಾಂಗ ಹಾಗೂ ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುರುಗೋಡು ಇವರ ಸಹಯೋಗದಲ್ಲಿ ಕುರುಗೋಡು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ "ರಾಜ್ಯ ಶಿಕ್ಷಣ ನೀತಿ ಅನ್ವಯ 2025–26 ನೇ ಸಾಲಿನ ಶೈಕ್ಷಣಿಕ ಮೂರನೇ ಸೆಮಿಸ್ಟರ್‌ನ ಪದವಿ ಕನ್ನಡ ಭಾಷಾ ಪಠ್ಯಪುಸ್ತಕಗಳ ಲೋಕಾರ್ಪಣೆ ಹಾಗೂ ಕಾರ್ಯಾಗಾರ" ಉದ್ಘಾಟಿಸಿ ಅವರು ಮಾತನಾಡಿದರು.

ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಮಾರ್ಗಸೂಚಿಗಳಾಗಿದ್ದು, ಸಾಹಿತ್ಯದ ಅಭಿರುಚಿಯನ್ನು ಮೂಡಿಸುವಲ್ಲಿ, ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಿವೆ ಎಂದು ತಿಳಿಸಿದರು.

ಸಾಹಿತಿ ಹಾಗೂ ಸಿಂಡಿಕೇಟ್ ಸದಸ್ಯ ಡಾ.ಅಮರೇಶ್ ನುಗಡೋಣಿ ಅವರು ಸ್ನಾತಕ ಪದವಿಯ ಪಠ್ಯಪುಸ್ತಕಗಳನ್ನು ಲೋಕಾರ್ಪಣೆ ಮಾಡಿ ಮಾತನಾಡುತ್ತಾ, ಕನ್ನಡ ಸಾಹಿತ್ಯದ ಚರಿತ್ರೆಯ ಅರಿವು ಮತ್ತು ಕನ್ನಡ ಭಾಷಾ ಜ್ಞಾನ ನೀಡುವ ಕಾರ್ಯವನ್ನು ಪಠ್ಯಪುಸ್ತಕಗಳು ಮಾಡುತ್ತವೆ. ವಿದ್ಯಾರ್ಥಿಗಳು ಪಠ್ಯ ಪುಸ್ತಕದ ಜ್ಞಾನಕ್ಕೆ ಸೀಮಿತವಾಗದೇ ಸ್ಪರ್ಧಾತ್ಮಕ ಪ್ರಪಂಚಕ್ಕೆ ಉಪಯುಕ್ತವಾಗುವ ಜ್ಞಾನವನ್ನು ಸಂಪಾದಿಸಬೇಕು ಎಂದು ಕರೆ ನೀಡಿದರು. ವಿಶ್ವವಿದ್ಯಾಲಯವು ಸಂಪಾದಕರಿಗೆ ಚಿಂತನ–ಮಂಥನ ಕಾರ್ಯಾಗಾರವನ್ನು ನಡೆಸಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗುವ ಉತ್ತಮ ಪಠ್ಯಕ್ರಮವನ್ನು ರೂಪಿಸಬೇಕಾಗಿದೆ ಎಂದು ತಿಳಿಸಿದರು.

ಕಲಾ ವಿಭಾಗದ ಡೀನ್ ಮತ್ತು ಕನ್ನಡ ಅಧ್ಯಯನ ಮಂಡಳಿಯ ಅಧ್ಯಕ್ಷ ಡಾ.ರಾಬರ್ಟ್ ಜೋಸ್ ಅವರು ಮಾತನಾಡಿ, ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಸಾಹಿತ್ಯ ಲೋಕಕ್ಕೆ ಮಾರ್ಗವಾಗಿದ್ದು, ಇಂದಿನ ಡಿಜಿಟಲ್ ಯುಗದಲ್ಲಿ ಉತ್ತಮ ಪಠ್ಯಪುಸ್ತಕಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆಸಕ್ತಿ ಹುಟ್ಟಿಸಬೇಕಾದ ಅಗತ್ಯವಿದೆ ಎಂದರು. ಪ್ರಸಾರಾಂಗದ ನಿರ್ದೇಶಕ ಡಾ.ತಿಪ್ಪೇರುದ್ರ ಪ್ರಾಸ್ತವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ.ಶಾಂತಲಾ ವಹಿಸಿದ್ದರು. ಡಾ.ಶಶಿಕಾಂತ್ ಅವರು ಸ್ವಾಗತಿಸಿದರು, ಮಂಜುನಾಥಸ್ವಾಮಿ ನಿರೂಪಿಸಿದರು. ಈ ಸಂದರ್ಭದಲ್ಲಿ ಪ್ರಸಾರಾಂಗದ ಹಿಂದಿನ ನಿರ್ದೇಶಕ ಡಾ.ಅರುಣಕುಮಾರ ಲಗಶೆಟ್ಟಿ, ವಾಣಿಜ್ಯ ಸೌರಭ–2 ಪಠ್ಯಪುಸ್ತಕದ ಸಂಪಾದಕ ಸಿ.ದೇವಣ್ಣ, ರಘುಪ್ರಸಾದ್, ಮೌನೇಶ್ ಬಡಿಗೇರ್, ಕಾಲೇಜಿನ ಅಧ್ಯಾಪಕ ಡಾ.ಚನ್ನಬಸವಯ್ಯ ಹೆಚ್.ಎಂ., ಮುರಳಿಶಂಕರಗೌಡ, ಡಾ.ಜ್ಞಾನ ಪ್ರಸೂನಾಂಭ, ಮಧುಸೂಧನ್, ವೀರಲಿಂಗಪ್ಪ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಪ್ರವಾಸೋದ್ಯಮದಿಂದ ದೇಶದ ಆರ್ಥಿಕ ಪ್ರಗತಿ ಹೆಚ್ಚಳ: ಪ್ರವಾಸೋದ್ಯಮ ಅಧಿಕಾರಿ ನಜೀರ ಅಹ್ಮದ್

ಮಲ್ಲಮ್ಮ ನುಡಿ ವಾರ್ತೆ




ರಾಯಚೂರು ಸೆಪ್ಟೆಂಬರ್ 27– ಪ್ರವಾಸೋದ್ಯಮವು ವಿವಿಧ ದೇಶಗಳ ಸಂಸ್ಕೃತಿ, ವೈವಿಧ್ಯತೆಯ ಬಗ್ಗೆ ಪ್ರವಾಸಿಗರಿಗೆ ತಿಳಿದುಕೊಳ್ಳಲು ಸಹಾಯವಾಗಿದೆ. ಅಲ್ಲದೆ ದೇಶದ ಆರ್ಥಿಕತೆಯನ್ನು ಹೆಚ್ಚಿಸುಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ನಜೀರ ಅಹ್ಮದ್ ಕನವಳ್ಳಿ ಅವರು ಹೇಳಿದರು.

ಸೆ.27ರ ಶನಿವಾರ ದಂದು ನಗರದ ಹಮದರ್ದ್ ಪ್ರೌಢ ಶಾಲೆಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ, ಶಿಕ್ಷಣ ಇಲಾಖೆ, ಪುರಾತತ್ವ ಸಂಗ್ರಹಾಲಯಗಳು & ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ–2025ರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇವಲ ಪ್ರವಾಸಿ ತಾಣಗಳನ್ನು ಗುರುತಿಸುವುದು ಮಾತ್ರವಲ್ಲ; ಅವುಗಳನ್ನು ಮೇಲ್ದರ್ಜೆಗೇರಿಸುವುದು, ಆಕರ್ಷಣೆಯುಗೊಳಿಸುವುದು ಪ್ರವಾಸೋದ್ಯಮ ಇಲಾಖೆಯ ಮುಖ್ಯ ಉದ್ದೇಶವಾಗಿದೆ. ಪ್ರವಾಸಿ ತಾಣಗಳಲ್ಲಿ ಮೂಲ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಇಲಾಖೆಯ ಮೇಲಿದೆ ಎಂದರು.

ಜಿಲ್ಲೆಯಲ್ಲಿರುವ ಐತಿಹಾಸಿಕ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಇಲಾಖೆಯಿಂದ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಪ್ರತಿಯೊಬ್ಬರ ಸಹಕಾರ ಅತ್ಯಗತ್ಯವಾಗಿರುತ್ತದೆ ಎಂದರು. ಈ ವೇಳೆ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಚೆನ್ನಾರೆಡ್ಡಿ ಅವರು ಉಪನ್ಯಾಸ ನೀಡಿ, ಜಿಲ್ಲೆಯಲ್ಲಿ ಸಾಕಷ್ಟು ಪ್ರವಾಸಿ ತಾಣಗಳಿದ್ದು, ಅವುಗಳನ್ನು ಅಭಿವೃದ್ಧಿಪಡಿಸುವುದು ಅತೀ ಅಗತ್ಯವಾಗಿದೆ. ವಿಶ್ವ ಪ್ರವಾಸೋದ್ಯಮ ದಿನಾಚರಣೆಯನ್ನು ವಿಶ್ವದ್ಯಾಂತ ಆಚರಣೆ ಮಾಡಲಾಗುತ್ತದೆ. ಈ ದಿನಾಚರಣೆಯು ಕಾರ್ಯಕ್ರಮಕ್ಕೆ ಸೀಮಿತವಾಗಬಾರದು ಎಂದರು.

ಅನೇಕ ಐತಿಹಾಸಿಕ ಸ್ಥಳಗಳು ಜಿಲ್ಲೆಯಲ್ಲಿದ್ದು, ಅವುಗಳನ್ನು ಅಭಿವೃದ್ಧಿಪಡಿಸುವ ಕಾರ್ಯವಾಗಬೇಕು. ಪ್ರವಾಸಿ ತಾಣಗಳು ಅಭಿವೃದ್ಧಿಯಾದಲ್ಲಿ ಸ್ಥಳೀಯರಿಗೆ ಆರ್ಥಿಕವಾಗಿ ಅನುಕೂಲವಾಗಲಿದೆ. ಪ್ರವಾಸೋದ್ಯಮ ಕಾರ್ಯಚಟುವಟಿಕೆಯಿಂದ ಇತಿಹಾಸದ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ ಎಂದರು. ಪ್ರವಾಸೋದ್ಯಮ ಅಭಿವೃದ್ಧಿಯಾದಾಗ, ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗುತ್ತದೆ ಮತ್ತು ಕರಕುಶಲಕಾರರು ಕೂಡ ಆರ್ಥಿಕವಾಗಿ ಸಬಲರಾಗುತ್ತಾರೆ ಎಂದು ತಿಳಿಸಿದರು.

ಜಿಲ್ಲೆಯು 4000 ವರ್ಷಗಳ ಇತಿಹಾಸ ಹೊಂದಿದ್ದು, ಜಿಲ್ಲೆಯ ಮಸ್ಕಿಯಲ್ಲಿ ಇತಿಹಾಸಕಾರರು ಭೂ ಉತ್ಖನನೆ ಮಾಡಿದ್ದಾರೆ. ಇದರಲ್ಲಿ ನಾಲ್ಕು ಸಾವಿರ ವರ್ಷಗಳ ಹಿಂದೆ ಜನರು ವಾಸಿಸುತ್ತಿದ್ದರು ಎಂದು ತಿಳಿಬಂದಿದೆ. ಗಬ್ಬೂರಿನಲ್ಲಿ 20 ಪ್ರಾಚೀನ ದೇವಾಲಯಗಳಿವೆ. 21 ಶಿಲಾಶಾಸನಗಳಿವೆ. ಮುದಗಲ್‌ನಲ್ಲಿ ಎರಡು ಸುತ್ತಿನ ಕೋಟೆಯಲ್ಲಿ ಶಿಲಾಶಾಸನಗಳಿವೆ. ಕವಿತಾಳ, ಕೋಟೆಕಲ್ ಸೇರಿದಂತೆ ಹಲವೆಡೆ ಬೆಟ್ಟಗುಡ್ಡಗಳ ಮೇಲೆ ರೇಖಾ ಚಿತ್ರಗಳಿವೆ. ಇವು ಆದಿಮಾನವರ ವಾಸಸ್ಥಾನಗಳು ಎಂಬುದು ತಿಳಿಯುತ್ತದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಪ್ರಥಮ ದರ್ಜೆ ಪದವಿ ಮಹಿಳಾ ಕಾಲೇಜು ಪ್ರಾಂಶುಪಾಲರಾದ ಡಾ.ಸುಗುಣಾ, ಪುರಾತತ್ವಸಂಗ್ರಹಾಲಯ, ಪರಂಪರೆ ಇಲಾಖೆಯ ಕ್ಯೂರೇಟರ್ ಶಿವಪ್ರಕಾಶ, ಹಮದರ್ದ್ ಕಾಲೇಜಿನ ಪ್ರಾಂಶುಪಾಲರಾದ ಕಾಶಪ್ಪ, ಚಿತ್ರಕಲಾ ಶಿಕ್ಷಕ ಚಂದ್ರಶೇಖರ ಸೇರಿದಂತೆ ಇತರರಿದ್ದರು. ಶಿಕ್ಷಕ ಡಾ.ದಂಡಪ್ಪ ಬಿರಾದಾರ ನಿರೂಪಿಸಿದರು.

## ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ:
## ಸೇಡಂದಲ್ಲಿ ಸೆಪ್ಟೆಂಬರ್ 29 ರಂದು ಪೂರ್ವಭಾವಿ ಸಭೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಸೆ.27– ಬರುವ ಅಕ್ಟೋಬರ್ 7 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವದ ಕಾರ್ಯಕ್ರಮ ಆಚರಿಸುತ್ತಿರುವ ಹಿನ್ನಲೆಯಲ್ಲಿ ಇದೇ ಸೆಪ್ಟೆಂಬರ್ 29ರಂದು ಬೆಳಿಗ್ಗೆ 11 ಗಂಟೆಗೆ ಸೇಡಂ ತಾಲೂಕು ಆಡಳಿತ ಭವನದಲ್ಲಿನ ತಹಸೀಲ್ದಾರರ ಕಾರ್ಯಾಲಯದಲ್ಲಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಮೇಲ್ಕಂಡ ದಿನದಂದು ನಡೆಯುವ ಈ ಪೂರ್ವಭಾವಿ ಸಭೆಗೆ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು, ಚುನಾಯಿತ ಜನ ಪ್ರತಿನಿಧಿಗಳು, ಸಾರ್ವಜನಿಕರು, ಎಲ್ಲಾ ಸಂಘಟನೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಸಮಯಕ್ಕೆ ಸರಿಯಾಗಿ ಹಾಜರಾಗಿ ತಮ್ಮ ಸಲಹೆ–ಸೂಚನೆಗಳನ್ನು ನೀಡಬೇಕೆಂದು ಸೇಡಂ ತಹಶೀಲ್ದಾರರು ಹಾಗೂ ತಾಲ್ಲೂಕು ಜಯಂತ್ಯೋತ್ಸವ ಸಮಿತಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಟ್ಟಿಸಂಗಾವಿ ಭೀಮಾಸೇತುವೆ ಮುಳುಗಡೆ



ಮಲ್ಲಮ್ಮ ನುಡಿ ವಾರ್ತೆ

ಜೇವರಗಿ,ಸೆ.27: ಕಟ್ಟಿ ಸಂಗಾವಿ ಹತ್ತಿರದ ಭೀಮಾನದಿಯ ಸೇತುವೆ ಪ್ರವಾಹದಲ್ಲಿ ಮುಳುಗಿದ್ದು, ಸೇತುವೆ ಮೇಲೆ ಯಾರೂ ವಾಹನಗಳನ್ನು ಚಲಾಯಿಸಬಾರದು ಶಾಸಕ ಡಾ. ಅಜಯಸಿಂಗ್ ಹಾಗೂ ತಹಶೀಲ್ದಾರ ಮಲ್ಲಣ್ಣ ಯಲಗೋಡ ಮನವಿ ಮಾಡಿದ್ದಾರೆ

ಸೇತುವೆ ಎರಡೂ ಬದಿ ವಾಹನಗಳು ಸಾಲುಗಟ್ಟಿ ನಿಂತಿವೆ. ನೀರಿನ ಮಟ್ಟ ಹೆಚ್ಚಾಗಿವೆ.ಪ್ರವಾಹ ಭೀತಿಇದೆ. ನದಿಯ ತೀರದ ಗ್ರಾಮಗಳ ಜನರು ಮತ್ತು ದನ ಕರುಗಳನ್ನು ನದಿ ದಡದಲ್ಲಿ ಬಿಡಬಾರದು ಮತ್ತು ನದಿ ತೀರಕ್ಕೆ ಹೋಗಬಾರದು ಎಂದು ಅವರು ತಿಳಿಸಿದ್ದಾರೆ

# ಲಿಂಗಾಯತ ಧರ್ಮ ಎಂದು ಬರೆಯಿಸಿ: ಬಸವರಾಜ ಬುಳ್ಳಾ




ಮಲ್ಲಮ್ಮ ನುಡಿ ವಾರ್ತೆ

ಬೀದರ.ಸೆ.27:ಬಸವಕಲ್ಯಾಣ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಧರ್ಮ ಕಾಲಂನಲ್ಲಿ ನಿರ್ಭಯವಾಗಿ ಲಿಂಗಾಯತ ಎಂದೇ ಬರೆಸಬೇಕು' ಎಂದು ಜಾಗತಿಕ ಲಿಂಗಾಯತ ಮಹಾಸಭೆ ಹಿರಿಯ ಉಪಾಧ್ಯಕ್ಷ ಬಸವರಾಜ ಬುಳ್ಳಾ ಸಲಹೆ ನೀಡಿದ್ದಾರೆ.

ನಗರದ ಶರಣ ಹರಳಯ್ಯ ಗವಿಯಲ್ಲಿ ಶುಕ್ರವಾರ ನಡೆದ ಶರಣ ವಿಜಯೋತ್ಸವದ ಹಿರಿಯರ ಸಮಾವೇಶದಲ್ಲಿ ಅವರು ಮಾತನಾಡಿ, 'ಬಸವಣ್ಣನವರೇ ನಮ್ಮ ಧರ್ಮಗುರು. ವಚನಸಾಹಿತ್ಯವೇ ಧರ್ಮಗ್ರಂಥವಾಗಿದೆ. ಲಿಂಗಾಯತರು ಏಕದೇವೋಪಾಸಕರು. ಲಿಂಗಾಯತ ಸ್ವತಂತ್ರ ಧರ್ಮವಾಗಿದೆ' ಎಂದು ಹೇಳಿದರು.

ಪ್ರೊ.ಶಿವರಾಜ ಪಾಟೀಲ ಮಾತನಾಡಿ, 'ಹಿರಿಯರ ವಾಸದಿಂದ ಮನೆಗೊಂದು ವಿಶಿಷ್ಟ ಕಳೆ ಬರುತ್ತದೆ. ಅವರ ಮಾರ್ಗದರ್ಶನದಿಂದ ಸಂಸಾರ ಸುಖಿ ಆಗುತ್ತದೆ. ಹಿರಿಯರು ಕುಟುಂಬಕ್ಕೆ ಕಲಶಪ್ರಾಯ ಆಗಿರುತ್ತಾರೆ. ಸಂಪ್ರದಾಯ, ಸಂಸ್ಕೃತಿಯ ಪರಿಪಾಲಕರು. ಇವರಿಂದ ಮಕ್ಕಳಲ್ಲಿ ಸದ್ವಿಚಾರ, ಸದ್ಗುಣ ಬೆಳೆಯುತ್ತದೆ. ಆದರೆ ಇದೆಲ್ಲ ಇಲ್ಲದ್ದರಿಂದ ಈಚೆಗೆ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಹಿರಿಯ ನಾಗರಿಕರ ಒಕ್ಕೂಟದ ಅಧ್ಯಕ್ಷ ಪ್ರೊ.ಸಿ.ಬಿ.ಪ್ರತಾಪುರೆ ಮಾತನಾಡಿ, 'ಹಿರಿಯರು ತಮ್ಮ ಬೌದ್ಧಿಕ ಸಂಪತ್ತು, ದೀರ್ಘ ಕೆಲಸದ ಅನುಭವ, ಉತ್ತಮ ದೃಷ್ಟಿಕೋನ, ಯೋಜನಾ ಕೌಶಲ್ಯವನ್ನು ಸಾಮಾಜಿಕ ಕಾರ್ಯಗಳಿಗೆ ವಿನಿಯೋಗಿಸುವುದು ಉತ್ತಮ. ಹಿರಿಯರನ್ನು ಕುಟುಂಬದಲ್ಲಿ ತಿರಸ್ಕಾರ ಭಾವದಿಂದ ಕಾಣುವುದು ಸರಿಯಲ್ಲ' ಎಂದರು.

ಹರಳಯ್ಯ ಪೀಠಾಧ್ಯಕ್ಷೆ ಅಕ್ಕ ಗಂಗಾಂಬಿಕಾ ಮಾತನಾಡಿ, 'ಒಳ್ಳೆಯ ಸಂಸ್ಕಾರ, ಉತ್ತಮರ ಸಂಗ ಮತ್ತು ಗುರು ಹಿರಿಯರ ಮೇಲಿನ ಭಕ್ತಿ ಗೌರವವು ಉತ್ತಮ ವ್ಯಕ್ತಿತ್ವ ರೂಪುಗೊಳ್ಳಲು ಕಾರಣವಾಗುತ್ತದೆ' ಎಮದು ಹೇಳಿದರು. ಬಸವ ಮಹಾಮನೆಯ ಸಿದ್ದರಾಮೇಶ್ವರ ಸ್ವಾಮೀಜಿ, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ರಾಜಕುಮಾರ ಶಿರಗಾಪುರ, ಪ್ರೊ.ಎಸ್.ಜಿ.ಕರ್ಣೆ, ಲೀಲಾ ಸಂಕಳ್ಳಿ ಮಾತನಾಡಿದರು.

ಪ್ರಮುಖರಾದ ಜಿ.ಆರ್.ಪಾಟೀಲ, ಗುರುಪಾದಪ್ಪ ಪಾಟೀಲ, ವೈಜನಾಥ ಹಳ್ಳಿಖೇಡೆ, ದೇವಿಂದ್ರಪ್ಪ ಗುಣತೂರೆ, ಬಸವರಾಜ ನರಶೆಟ್ಟಿ, ಶಿವಪುತ್ರಪ್ಪ ಔಸೆ, ರಾಜಶೇಖರ ಬಿರಾದಾರ, ಚಂದ್ರಪ್ಪ ಬಿರಾದಾರ, ಸುಲೋಚನಾ ಮಾಮಾ, ಗಂಗಮ್ಮ ಕೊಳಕೂರ, ಚಂದ್ರಕಾಂತ ಝುಂಝಾ, ಧನರಾಜ ಸಾತಬಾಯಿ, ಶಕುಂತಲಾ ಕರ್ಣೆ, ಅಂಜಲಿ ಬಾಲಿಕಿಲೆ, ಸವಿತಾ ಬಾಲಿಕಿಲೆ, ಚಂಪಾವತಿ ಮಹಾಜನ ಉಪಸ್ಥಿತರಿದ್ದರು. ಶಿವಾನಿ ಶಿವದಾಸ ಸಂಗೀತ ಪ್ರಸ್ತುತಪಡಿಸಿದರು.

# ಸ್ಕೌಟ್ಸ್, ಗೈಡ್ಸ್: ಮಿರ್ಜಿ, ದಳವಾಯಿಗೆ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.27–ಜಿಲ್ಲೆಯಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಬೆಳವಣಿಗೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಜಿಲ್ಲಾ ಮುಖ್ಯ ಆಯುಕ್ತ ಎಚ್.ಜಿ.ಮಿರ್ಜಿ ಹಾಗೂ ಜಿಲ್ಲಾ ಕಾರ್ಯದರ್ಶಿ ಎಸ್.ಎಸ್. ದಳವಾಯಿ ಅವರಿಗೆ ರಾಜ್ಯಪಾಲ ತಾವರಚಂದ ಗೆಹಲೋಟ್ ಅವರು ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಶುಕ್ರವಾರ ಬೆಂಗಳೂರಿನ ರಾಜಭವನದ ಗಾಜಿನ ಮನೆಯಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ವತಿಯಿಂದ ನಡೆದ ಸಮಾರಂಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರುಗಳು, ಜಿಲ್ಲಾ ಕಾರ್ಯದರ್ಶಿಗಳು ಮತ್ತು ಲೀಡರ್ ಟ್ರೈನರ್ಸ್‌ಗಳಿಗೆ ಪ್ರಶಸ್ತಿ ನೀಡಲಾಯಿತು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಮುಖ್ಯ ಆಯುಕ್ತ ಕೆ.ಕೆ.ಖಂಡೇಲ್ವಾಲ್, ರಾಜ್ಯ ಮುಖ್ಯ ಆಯುಕ್ತ ಹಾಗೂ ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಗುರುವಿಗೆ ಮೀರಿಸಿದ ಶಿಷ್ಯ ಶ್ರೇಷ್ಠ : ಡಾ. ಹಾಲಪ್ಪ ಪೃಥ್ವಿರಾಜ್




ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ : ಸೆ.27:ಶಿಷ್ಯ ಗುರುವಿನ ಮಾರ್ಗದರ್ಶನವನ್ನು ಪಡೆದು ಗುರುವನ್ನು ಮೀರಿಸಿ ಉನ್ನತ ಸ್ಥಾನ ಹೊಂದಿದಾಗ ಬೋಧನೆ ಮಾಡಿದ ಗುರುವಿಗೆ ಮರೆಯಲಾಗದ ಗುರುದಕ್ಷಿಣೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಹಾಲಪ್ಪ ಪೃಥ್ವಿರಾಜ ಅಭಿಪ್ರಾಯ ಪಟ್ಟರು. ಪಟ್ಟಣದ ತಹಸೀಲ್ ಕಚೇರಿ ಪಕ್ಕದಲ್ಲಿರುವ ಪುರಭವನದಲ್ಲಿ ವಿದ್ಯಾಚೇತನ ಪದವಿ ಮಹಾವಿದ್ಯಾಲಯದ ಪ್ರಥಮ ವರ್ಷದ ಬಿ. ಕಾಂ. ಹಾಗೂ ಬಿ. ಎಸ್. ಸಿ. ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಹಾಗೂ ಶಿಕ್ಷಕರ ದಿನಾಚರಣೆ ಪ್ರಯುಕ್ತ ಮಾತನಾಡಿ ಪರಿಶ್ರಮವೇ ಯಶಸ್ಸಿನ ಕೀಲಿ ಕೈ ಎಂದು ಹೇಳಿದರು.

ಇತಿಹಾಸ ವಿಭಾಗದ ಸಹಾಯಕ ಸಹ ಪ್ರಾಧ್ಯಾಪಕರಾದ ದಶವಂತ ಬಂಡೆ ಮಾತನಾಡಿ ಶಿಕ್ಷಕ ದೇಶದ ಶಿಲ್ಪಿ, ಗೌರವಾನ್ವಿತ ರಾಧಾಕೃಷ್ಣನ್ ಅವರ ಹುಟ್ಟುಹಬ್ಬದ ಪ್ರಯುಕ್ತ ಶಿಕ್ಷಕ ದಿನಾಚರಣೆಯನ್ನು ಆಚರಿಸಲಾಗುತ್ತದೆ. ರಾಧಾಕೃಷ್ಣನ್ ಅವರಿಗೆ ವರ್ಗಾವಣೆಯಾದ ಸಂದರ್ಭದಲ್ಲಿ ವಿದ್ಯಾರ್ಥಿಗಳೆಲ್ಲರೂ ಸೇರಿ ಅವರನ್ನು ಸಾರೋಟದಲ್ಲಿ ಕೂಡಿಸಿ ಕುದುರೆಗಳ ಬದಲಾಗಿ ತಾವೆ ಸ್ವತಹ ರೈಲ್ವೆ ನಿಲ್ದಾಣದವರೆಗೆ ತೆಗೆದುಕೊಂಡು ಒಯ್ದದ್ದು ಇಲ್ಲಿ ಸ್ಮರಿಸುವಂತದ್ದು ಹಾಗೂ ಸಂಪೂರ್ಣ ರೈಲ್ವೆ ನಿಲ್ದಾಣವನ್ನು ಅವರು ಪ್ರಯಾಣಿಸುವ ರೈಲನ್ನು ಹೂವಿನಿಂದ ಅಲಂಕಾರ ಮಾಡಿ ಆನಂದ ಭಾಷ್ಪಗಳೊಂದಿಗೆ ಗುರುವಿಗೆ ಬೀಳ್ಕೊಟ್ಟಿರುವುದು ಇವತ್ತಿನ ವಿದ್ಯಾರ್ಥಿಗಳಿಗೆ ಪ್ರೇರಣೆ ಎಂದರು.

ಜಯ ಕರ್ನಾಟಕ ಜನಪರ ವೇದಿಕೆಯ ಅಧ್ಯಕ್ಷರಾದ ಸಂತೋಷ್ ಬಿ.ಜಿ. ಪಾಟೀಲ್ ಮಾತನಾಡಿ ಭಾರತ ದೇಶದಲ್ಲಿ ಮಹಿಳೆಯರಿಗೆ ಅತ್ಯಂತ ಗೌರವಾನ್ವಿತ ಸ್ಥಾನವಿದೆ. ಅದಕ್ಕಾಗಿಯೇ ನಮ್ಮ ಭೂಮಿಯನ್ನು ನಮ್ಮ ನದಿಗಳನ್ನು ನಾವು ಮಾತೆಯರ ಹೆಸರುಗಳಿಂದ ಸಂಭೋಧಿಸುತ್ತೇವೆ. ಕೆಸರಲ್ಲಿ ಹುಟ್ಟಿದಂತಹ ಕಮಲ ಕೆಸರಲ್ಲೇ ಬೆಳೆದು ಸುಂದರ ರೂಪದೊಂದಿಗೆ ಭಗವಂತನ ಪಾದ ಸೇರುವುದು. ಆ ಹೂವಿನಂತೆ ಬಡ ಹಾಗೂ ಮಧ್ಯಮ ಕುಟುಂಬದಲ್ಲಿ ಜನಿಸಿದ ತಾವೆಲ್ಲ ವಿದ್ಯಾರ್ಥಿಗಳು ಕಠಿಣ ವಿದ್ಯಾರ್ಜನೆಯಿಂದ ಗುರುಗಳ ಮಾರ್ಗದರ್ಶನ ಪಡೆದು ನಿಶ್ಚಿತ ಗುರಿ ತಲುಪಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಸಂಜುಕುಮಾರ್ ಮಾಶೆಟ್ಟಿ ಮಾತನಾಡಿ ನಮ್ಮ ಶಿಕ್ಷಣ ಸಂಸ್ಥೆಯು ಬಡ ವಿದ್ಯಾರ್ಥಿಗಳಿಗಾಗಿ ಅತ್ಯಂತ ಕಡಿಮೆ ಶುಲ್ಕದೊಂದಿಗೆ ನುರಿತ ಉಪನ್ಯಾಸಕರಿಂದ ಬೋಧನೆ ಮಾಡಿಸಲಾಗುತ್ತಿದ್ದು 2018ರಲ್ಲಿ 40 ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡ ನಮ್ಮ ಕಾಲೇಜು ಇವತ್ತು 336 ವಿದ್ಯಾರ್ಥಿಗಳನ್ನು ಹೊಂದಿದೆ ನಮ್ಮಲ್ಲಿನ ಉಪನ್ಯಾಸಕರಾದ ನಸಿರಮಿಯ್ಯಾ ಪ್ರೀ. ಪಿ. ಎಚ್. ಡಿ. ವಾಣಿಜ್ಯ ವಿಭಾಗಕ್ಕೆ ಆಯ್ಕೆಯಾಗಿದ್ದಾರೆ. ಅದೇ ರೀತಿ ಆರತಿ ಅರ್ಜುನ್‌ರಾವ್ ನಮ್ಮ ಕಾಲೇಜಿನ ಬಿ.ಎಸ್. ಸಿ 4ನೇ ಸೆಮಿಸ್ಟರ ವಿದ್ಯಾರ್ಥಿನಿ ಸಿ.ಎ. ಫೌಂಡೇಶನ್ ಉತ್ತೀರಣರಾಗಿರುವುದು ಹೆಮ್ಮೆ ತಂದಿದೆ ಎಂದರು.

ಕಾರ್ಯಕ್ರಮದಲ್ಲಿ ದತ್ತಾತ್ರಿ ಹಳ್ಳೆ, ಸಪ್ನಾ ದೇಶಮುಖ, ಹೇಮಲತಾ ಪಾಟೀಲ, ರಾಣಿ ಹಳ್ಳೆ, ಅಂಜಲಿ, ಮಾಲಾಶ್ರೀ, ಮಾಧವರಾವ ಮೋರೆ, ಲಕ್ಷ ??ಣ ಇನ್ನಿತರರು ಹಾಗೂ ಕಾಲೇಜಿನ ಸಿಬ್ಬಂದಿ ಉಪಸ್ಥಿತರಿದ್ದರು.

ಸಾಕ್ಷಿ ಮತ್ತು ಪ್ರಜ್ಞಾ ನಿರೂಪಿಸಿದರು, ಸಂಸ್ಥೆಯ ಆಡಳಿತ ಅಧಿಕಾರಿ ಲಿಂಗರಾಜ ಕೋಟೆ ವಂದಿಸಿದರು.

# ಸಮೀಕ್ಷೆಗಿರುವ ನ್ಯೂನತೆ ಸರಿಪಡಿಸಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.27:ತಾಲೂಕಿನಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಸುತ್ತಿರುವ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯಲ್ಲಿ ಪಾಲ್ಗೊಂಡಿರುವ ಸಮೀಕ್ಷೆದಾರರಿಗೆ ದಸರಾ ರಜೆ ನೀಡುವುದು, ಸಮೀಕ್ಷೆಗಿರುವ ನ್ಯೂನತೆಗಳನ್ನು ಸರಿಪಡಿಸವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಎಂದು ತಾಲೂಕು ಸರಕಾರಿ ಪ್ರಾಥಮಿಕಶಾಲಾ ಶಿಕ್ಷಕರ ಸಂಘ ಮತ್ತು ತಾಲೂಕು ಸರಕಾರಿ ನೌಕರರ ಸಂಘ ಒತ್ತಾಯಿಸಿದೆ. ಈ ಕುರಿತು ಪಟ್ಟಣದ ತಹಸೀಲ್ ಕಚೇರಿಯಲ್ಲಿ ತಾಲೂಕು ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸೂರ್ಯಕಾಂತ ಸುಂಟೆ ಮತ್ತು ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ ನೇತೃತ್ವದಲ್ಲಿ ಶುಕ್ರವಾರ ತಹಸೀಲ್ದಾರಗೆ ಮನವಿ ಪತ್ರ ಸಲ್ಲಿಸಿದರು. ಸಮೀಕ್ಷೆ ಕಾರ್ಯದಲ್ಲಿ ಕೈಗೊಂಡಿರುವ ಸಮೀಕ್ಷೆದಾರರು ಹಲವು ತಾಂತ್ರಿಕ ತೊಂದರೆ ಅನುಭವಿಸುತ್ತಿದ್ದಾರೆ. ಸಮೀಕ್ಷೆ ಕಾರ್ಯದಲ್ಲಿ ಇಂಟರ್‌ನೆಟ್ ಸಮಸ್ಯೆ ಎದುರಾಗುತ್ತಿದೆ. ಕುಟುಂಬ ಸದಸ್ಯರಿಗೆ ಒಟಿಪಿ ಸಮಸ್ಯೆ ಕಾಡುತ್ತಿದೆ. ಸಮೀಕ್ಷೆದಾರರಿಗೆ 150 ಮನೆಗಳನ್ನು ನಿಯೋಜಿಸಿರುವುದರಿಂದ ಕೆಲಸದ ಒತ್ತಡ ಹೆಚ್ಚಾಗುತ್ತಿದೆ. ಹಾಗಾಗಿ ಮೇಲಾಧಿಕಾರಿಗಳು ಗಮನ ಹರಿಸಿ ಸಮೀಕ್ಷೆಗಿರುವ ಎಲ್ಲ ಅಡೆತಡೆಗಳನ್ನು ನಿವಾರಿಸುವುದರ ಜತೆಗೆ ಸಮೀಕ್ಷೆದಾರರಿಗೆ ಇರುವ ಮನೆಗಳನ್ನು ಕಡಿತಗೊಳಿಸಬೇಕು. ಸಮೀಕ್ಷೆಯಲ್ಲಿ ಬಹುತೇಕ ಶಿಕ್ಷಕರೇ ಇದ್ದಾರೆ. ಆದ್ದರಿಂದ ಸಮೀಕ್ಷೆದಾರರಿಗೆ ತಮ್ಮ ಸೇವೆಯ ವ್ಯಾಪ್ತಿಯಲ್ಲಿ ಸಮೀಕ್ಷೆ ಕೈಗೊಳ್ಳಲು ಅವಕಾಶ ಕಲ್ಪಿಸಬೇಕು.

ಬಹುತೇಕ ಸಮೀಕ್ಷೆದಾರರಿಗೆ ಇನ್ನೂ ಸಮೀಕ್ಷೆ ಕಿಟ್ ತಲುಪಿರುವುದಿಲ್ಲ. ಕೂಡಲೇ ಸಮೀಕ್ಷೆ ಕಿಟ್ ವಿತರಿಸುವುದರ ಜತೆಗೆ ಸಮೀಕ್ಷೆಯಲ್ಲಿ ಪಾಲ್ಗೊಂಡ ಸಮೀಕ್ಷೆದಾರರಿಗೆ ನಾಡಿನ ದೊಡ್ಡ ಹಬ್ಬ ಆಗಿರುವ ದಸರಾ ಹಬ್ಬದಲ್ಲಿ ನಾಲ್ಕೈದು ದಿವಸ ರಜೆ ನೀಡಬೇಕು ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ತಾಲೂಕು ಸರಕಾರಿ ನೌಕರರ ಸಂಘದ ಕಾರ್ಯದರ್ಶಿ ರಾಜಪ್ಪ ಪಾಟೀಲ್, ಪ್ರಮುಖರಾದ ಅಶೋಕ ಕುಂಬಾರ, ವಸಂತ ಹುಣಸನಾಳೆ, ಪ್ರಭು ಡಿಗ್ಗೆ, ನಿರಂಜಪ್ಪ ಪಾತ್ರೆ, ಶಿವಕಾಂತ ಬಾಪುರ್ಸೆ, ಅಶೋಕ, ಗದಗೆಪ್ಪ ಪಾಟೀಲ್, ಕೃಷ್ಣಲಾಂಚಕರ್, ವೆಂಕಟ ಮಲಗೊಂಡ, ಪ್ರಕಾಶ, ವಿಶ್ವನಾಥ, ಓಂಕಾರ, ಮಲ್ಲಿಕಾರ್ಜುನ ಪಾಟೀಲ್, ದಯಾನಂದ ಕಣಜೆ, ಶಿವಕುಮಾರ ಸೇರಿದಂತೆ ಮುಂತಾದವರು ಇದ್ದರು.

# ಉಚಿತ ಹೃದಯ ತಪಾಸಣೆ ಶಿಬಿರ ಸೆ 29 ರಂದು



ಕಲಬುರಗಿ:ಸೆ.27:ನಗರದ ಸೂಪರ್ ಮಾರ್ಕೆಟ್‌ನಲ್ಲಿರುವ ಜವಳಿ ಕಾಂಪ್ಲೆಕ್ಸ್‌ನಲ್ಲಿ ಹರಿದಾಸ್ ಆಸ್ಪತ್ರೆಯಲ್ಲಿ ವಿಶ್ವ ಹೃದಯ ದಿನದ ನಿಮಿತ್ಯ ಡಾ. ಅರುಣಕುಮಾರ ಹರಿದಾಸ್ ಅವರಿಂದ ಉಚಿತ ಹೃದಯ ತಪಾಸಣೆ ಶಿಬಿರವನ್ನು ಸೆಪ್ಟೆಂಬರ್ 29 ರಂದು ಹಮ್ಮಿಕೊಳ್ಳಲಾಗಿದೆ. ಮೊ.9587774122 /8105460239. ಸಂಪರ್ಕಿಸಬೇಕೆಂದು ಹರಿದಾಸ್ ಅವರು ಪ್ರಕಟನೆಯ ಮೂಲಕ ಮನವಿ ಮಾಡಿದ್ದಾರೆ.

# ಜೆಸ್ಕಾಂಮುಖ್ಯ ಕಚೇರಿಯಲ್ಲಿ ಪ್ರವೀಣ್ ಪಾಟೀಲ್ ಹರವಾಳ ಪದಗ್ರಹಣ ಸೆ.29.ರಂದು



ಕಲಬುರಗಿ: ಸೆ.27:ಗುಲ್ಬರ್ಗ ವಿದ್ಯುತ್ಶಕ್ತಿ ಸರಬರಾಜು ನಿಯಮಿತ ಕಂಪನಿಯ (ಉಇಖಅಔಒ) ನಿಗಮ ಮಂಡಳಿಯ ಅಧ್ಯಕ್ಷರನ್ನಾಗಿ ಪ್ರವೀಣ್ ಪಾಟೀಲ್ ಹರವಾಳ

ಆಯ್ಕೆ ಮಾಡಿದ ಕಾರಣಿ ಭೋತರಾದ ಮಾನ್ಯ ಂಖಅಅ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ, ಇಂಧನ ಸಚಿವರಾದ ಕೆ.ಜೆ.ಜಾರ್ಜ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ಅದೇ ರೀತಿ ವಿಶೇಷವಾಗಿ ಪಂಚಾಯತ್ ರಾಜ್ ಹಾಗು ಗ್ರಾಮೀಣಭಿವೃದ್ಧಿ ಸಚಿವರು ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು ಹಾಗು ಕಲಬುರಗಿ ಜಿಲ್ಲಾ ಸಂಸದರಾದ ರಾಧಾಕೃಷ್ಣ ದೊಡ್ಡಮನಿ, ವೈದ್ಯಕೀಯ ಶಿಕ್ಷಣ ಸಚಿವರಾದ ಶರಣಪ್ರಕಾಶ ಪಾಟೀಲ್ ಅವರಿಗೂ ಸಹ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯ ಕಾಂಗ್ರೆಸ್ ಪಕ್ಷದ ಶಾಸಕರಾದ ಅಜಯ ಧರಂಸಿಂಗ್,. ಶ್ರೀ ಅಲ್ಲಮಪ್ರಭು ಪಾಟೀಲ್, ಎಂ.ವೈ.ಪಾಟೀಲ್, ಬಿ ಆರ್ ಪಾಟೀಲ್ , ಮೇಡಂ ಕನೀಜ್ ಫಾತಿಮಾ ಹಾಗೂ ವಿಧಾನ ಪರಿಷತ್ ಸದಸ್ಯರುಗಳಾದ ತಿಪ್ಪಣ್ಣಪ್ಪ ಕಮಕನೂರ್, ಜಗದೇವ ಗುತ್ತೇದಾರ ಮತ್ತು ಜಿಲ್ಲೆಯ ಎಲ್ಲ ಹಿರಿಯ ಮುಖಂಡರಿಗೂ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ಸೆ. 29.ರಂದು ಸೋಮವಾರ ಬೆಳಗ್ಗೆ 11.20 ಗಂಟೆಗೆ ಉಇಖಅಔಒ ಮುಖ್ಯ ಕಚೇರಿಯಲ್ಲಿ ಪದಗ್ರಹಣ ಮಾಡಲಿದ್ದಾರೆ. ಆದ್ದರಿಂದ ತಾವೆಲ್ಲರೂ ಬಂದು ಕಾರ್ಯಕ್ರಮಕ್ಕೆ ಮೇರಗನ್ನು ತುಂಬಬೇಕೆಂದು ಕೇಳಿಕೊಳ್ಳುತ್ತೇನೆ ಹಾಗು ಕಲಬುರಗಿಯಲ್ಲಿ ಅಪಾರ ಮಳೆಯಿಂದಾಗಿ ರೈತರ ಪರಿಸ್ಥಿತಿ ಹದಗೆಟ್ಟಿದ್ದು, ಸಾರ್ವಜನಿಕರು ಅನೇಕ ಅಡಚಣೆಯನ್ನು ಎದುರಿಸುತ್ತಿರುವುದರಿಂದ ಯಾವುದೇ ಆಡಂಬರದ ಆಚರಣೆಗಳನ್ನು ಮಾಡದಂತೆ ಹಾಗೂ ಹಾರ–ಹೂ ಗುಚ್ಛಗಳನ್ನು ನೀಡದಂತೆ ಪ್ರವೀಣ್ ಪಾಟೀಲ್ ಹರವಾಳ ಅವರು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

# ಭೀಕರ ಮಳೆಯ ಪ್ರಯುಕ್ತ ರೈತರು, ಸಾರ್ವಜನಿಕರು ಎಚ್ಚರಿಕೆ ವಹಿಸಲು ಮನವಿ



ಕಲಬುರಗಿ : ಸೆ.27: ಜಿಲ್ಲೆಯಲ್ಲಿ ಮತ್ತೆ ಕೆಲವು ದಿನಗಳಿಂದ ಕಂಡ–ರಿಯದ ಮಳೆ ನಿರಂತರವಾಗಿ ಸುರಿಯುತ್ತಿರುವ (ಅತಿವೃಷ್ಟಿ) ಪ್ರಯುಕ್ತ ಸಾರ್ವಜನಿಕರು, ರೈತ ಬಾಂಧವರು ಹಾಗೂ ಶಾಲಾ ಮಕ್ಕಳು ಭೀಕರ ಮಳೆಯಿಂದ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕೆಂದು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಡಾ ಅಂಬಾರಾಯ ಅಷ್ಠಗಿ ಮನವಿ ಮಾಡಿದ್ದಾರೆ.

ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಮಕ್ಕಳ ರಕ್ಷಣೆಯ ಹಿತದೃಷ್ಟಿಯಿಂದ ಪಾಲಕರು, ಪೋಷಕರು, ಶಾಲೆ ಮುಖ್ಯಸ್ಥರು ಹಾಗೂ ಶಾಲಾ ಆಡಳಿತ ಮಂಡಳಿಯವರು ಅತ್ಯಧಿಕ ಮಳೆಯಾಗುತ್ತಿರುವ ಪ್ರಯುಕ್ತ ಶಾಲಾ ಕಟ್ಟಡಗಳಿಂದ ಮತ್ತು ಇತರೆ ಮೂಲಗಳಿಂದ ಸಂಭವಿಸಬಹುದಾದ ಅನಾಹುತಗಳಿಂದ ಎಚ್ಚರಿಕೆ ವಹಿಸಬೇಕು. ಈಗಾಗಲೇ ಜಿಲ್ಲಾಡಳಿತವು 2 ದಿನಗಳ ಶಾಲೆಗಳಿಗೆ ರಜೆ ಘೋಷಿಸಿರುವುದರಿಂದ ಕಲಬುರಗಿ ಜಿಲ್ಲೆಯ ಎಲ್ಲಾ ಮಕ್ಕಳು ಸೇರಿದಂತೆ ರೈತ ಬಾಂಧವರು, ಸಾರ್ವಜನಿಕರು ನದಿ ಪಾತ್ರದ ಜನರು ವಿಶೇಷವಾಗಿ ರೈತರು, ಸಾರ್ವಜನಿಕರು ಮಕ್ಕಳು ನದಿ, ಹಳ್ಳ, ಕೊಳ್ಳ, ಕೆರೆಗಳನ್ನು ದಾಟ–ದಂತೆ ಹಾಗೂ ಜಾನುವಾರುಗಳನ್ನು ನದಿ ದಂಡೆಗೆ ಅಥವಾ ಹಳ್ಳದ ತಟಕ್ಕೆ ಬಿಡದಂತೆ ಮುಂಜಾಗ್ರತೆ ವಹಿಸಬೇಕೆಂದು ಡಾ ಅಂಬಾರಾಯ ಅಷ್ಠಗಿ ಮನವಿ ಮಾಡಿದ್ದಾರೆ.

# ಅಂತರ ವಿಶ್ವವಿದ್ಯಾಲಯ ಕಬಡ್ಡಿ ಸ್ಪರ್ಧೆಗೆ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.27: ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ನ ಅಲ್ಲಮಪ್ರಭು ಶಿಕ್ಷಣ ಮಹಾವಿದ್ಯಾಲಯ, ತಳವಾಡನ ಬಿ.ಇಡಿ. ದ್ವಿತೀಯ ವರ್ಷದ ವಿದ್ಯಾರ್ಥಿಯಾದ ಮಾಳಪ್ಪ ನಿಂಗಣ್ಣಾ, ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿ ನಡೆಯಲಿರುವ ಅಂತರ ವಿಶ್ವವಿದ್ಯಾಲಯ ಕಬಡ್ಡಿ ಸ್ಪರ್ಧೆಯಲ್ಲಿ ಬೀದರ ವಿಶ್ವವಿದ್ಯಾಲಯ ಬೀದರನಿಂದ ಆಯ್ಕೆಯಾಗಿದ್ದಾನೆಂದು ಕಾಲೇಜಿನ ಪ್ರಾಚಾರ್ಯ ಪಾಂಡುರಂಗ ವಿ. ಕುಂಬಾರ ತಿಳಿಸಿದ್ದಾರೆ.

ಹರ್ಷ : ವಿದ್ಯಾರ್ಥಿಯ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿಗಳಾದ ಶ್ರೀ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿಗಳಾದ ಶ್ರೀ ಮಹಾಲಿಂಗ ದೇವರು, ಆಡಳಿತಾಧಿಕಾರಿಗಳಾದ ಶ್ರೀ ಮೋಹನ್ ರೆಡ್ಡಿ, ಪ.ಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀ ಬಸವರಾಜ ಮೊಳಕೇರಿ, ಶಿಕ್ಷಣ ಸಂಯೋಜ–ಕರಾದ ಶ್ರೀ ಬಾಲಾಜಿ ವಲ್ಲೂರೆ, ದೈಹಿಕ ಶಿಕ್ಷಕರಾದ ಶ್ರೀ ಬಸವರಾಜ ಕರನೂರ, ಮಹಾವಿದ್ಯಾಲಯದ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ನ್ಯಾಯವಾದಿಗಳು ಒಳ್ಳೆಯ ಸಮಾಜದ ನಿರ್ಮಾಣಕರ್ತರು




ಕಲಬುರಗಿ: ಸೆ.27:ಕರ್ನಾಟಕ ಪೀಪಲ್ಸ್ ಎಜ್ಯುಕೇಶನ್ ಸೊಸೈಟಿಯ ಸಿದ್ಧಾರ್ಥ ಕಾನೂನು ಮಹಾವಿದ್ಯಾಲಯ ಕಲಬುರಗಿಯ ಖಕಿಂಅ ಅಡಿಯಲ್ಲಿ 3 ವರ್ಷದ ಕೋರ್ಸನ ಪ್ರಥಮ ಸೇಮಿಸ್ಟರ್ ವಿದ್ಯಾರ್ಥಿಗಳ ಪರಿಚಯ ಕಾರ್ಯಕ್ರಮ ಹಾಗೂ ಪಾಲಕರ ಸಭೆಯನ್ನು ಹಿರಿಯ ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯಾದರ್ಶಿಗಳಾದ ಶ್ರೀನಿವಾಸ ನವಲೆ ಅವರು ಉದ್ಘಾಟಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕಾನೂನು ಪದವಿಯ ಮಹತ್ವ, ಅವಕಾಶಗಳ ಕರಿತು ಸವಿಸ್ತರವಾಗಿ ಭಾಷಣದಲ್ಲಿ ಮಾತನಾಡಿದರು.

ಈ ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ಪೀಪಲ್ಸ್ ಎಜ್ಯುಕೇಶನ್ ಸೊಸೈಟಿ ಆಡಳಿತ ಆಧಿಕಾರಿಗಳಾದ ಡಾ.ಚಂದ್ರಶೇಖರ್ ಶೀಲವಂತ ಅವರು ತಮ್ಮ ಮುಖ್ಯ ಅತಿಥಿ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಮಹಾವಿದ್ಯಾಲಯದ ಸ್ಥಾಪನೆಯ ಉದ್ದೇಶವನ್ನ ವಿವರಿಸುತ್ತಾ ನಮ್ಮಲ್ಲಿ ಲಭ್ಯವಿರುವ ಎಲ್ಲಾ ಸಂಪನ್ಮೋಲಗಳನ್ನು ಸೂಕ್ತವಾಗಿ ಬಳಸಿಕೊಂಡು ಯಶಸ್ವಿಯಾಗಬೇಕೆಂದು ಶುಭ ಹಾರೈಸಿದರು.

ಸಂಸ್ಥೆಯ ಪ್ರಧಾನ ಕಾರ್ಯಾದರ್ಶಿಗಳಾದ ಶಾಂತಪ್ಪಾ ಸುರನ್ ರವರು ವಿದ್ಯಾರ್ಥಿಗಳು ಕಾನೂನು ನಿಘಂಟು ಪುಸ್ತಕಗಳನ್ನು ಓದಿ ಕಾನೂನು ಶಬ್ದಗಳನ್ನು ಸೂಕ್ತ ರೀತಿಯಲ್ಲಿ ಆರ್ಥೈಸಿಕೊಂಡು ಮತ್ತು ಇಂಗ್ಲೀಷ್ ಭಾಷೆಗೆ ಅದತ್ಯಯನ್ನು ನೀಡಿ ತಮ್ಮ ಕಾನೂನು ವಿದ್ಯಾಭ್ಯಾಸವನ್ನು ಮಾಡಬೇಕು ಎಂದು ಸಲಹೆ ನೀಡಿದರು. ಅದೇರಿತಿಯಾಗಿ ಉಪನ್ಯಾಸಕರು ಸಹ ತಮ್ಮ ಉಪನ್ಯಾಸವನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ನೀಡಬೇಕು, ಮತ್ತು ಆಂಗ್ಲ ಭಾಷೆಗೆ ಆದತ್ಯಯನ್ನು ನೀಡಬೇಕೆಂದು ಕಿವಿಮಾತು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರದ ಡಾ.ಎಸ್.ಚಂದ್ರಶೇಖರ್ ಅವರು ವಿದ್ಯಾರ್ಥಿಗಳಿಗೆ ಕಾಲೇಜಿನ ಭೋಧಕ ಮತ್ತು ಭೋಧಕೇತರ ಸಿಬ್ಬಂದಿಗಳ ಪರಿಚಯಸುತ್ತಾ ತಮ್ಮ ಮಹಾವಿದ್ಯಾಲಯದ ರೂಪರೇಷಗಳ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಕಾರ್ಯಕ್ರಮದ ಸಂಯೋಜಕರಾದ ಕುಮಾರಿ ಅಮೃತಾ ದೇಶಮಾನ್ಯ ಮತ್ತು ಹಿರಿಯ ಉಪನ್ಯಾಸಕರಾದ ಡಾ.ಅಪರ್ಣಾ ಜೆ ಶಿಂಧೆ, ಡಾ.ತಿಪ್ಪೆಸ್ವಾಮಿ, ಕೆ.ಜಿ.ಜವಳಿ, ಶೀಲಾ ಜೋಷಿ, ಕವಿತಾ ಎನ್ ಜಿ, ಮಹಾಲಕ್ಷ್ಮೀ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಉಪನ್ಯಾಸಕಿ ಮಹಾಲಕ್ಷ್ಮಿ ಆರ್ ಡಿ ಮತ್ತು ಸ್ವಾಗತ ಭಾಷಣ ಮಹಾಂತೇಷ್ ಬಿ ಹಾಗೂ ವಂದನಾರ್ಪಣೆಯನ್ನು ಉಪನ್ಯಾಸಕಿ ಕವಿತಾ ಎನ್ ನಡಸಿಕೊಟ್ಟರು. ಕಾರ್ಯಕ್ರಮವನ್ನು ಬುದ್ಧವಂದನೆ ಮೂಲಕ ವಿದ್ಯಾರ್ಥಿ ಸುಮಿತ್ ನಡಸಿಕೊಟ್ಟುರು ಹಾಗೂ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಯವಾಯಿತು.

# ಔರಾದ, ಕಮಲನಗರ ಜನತೆಗೆ ಶೀಘ್ರ ಸಿಹಿಸುದ್ದಿ: ಶಾಸಕ ಪ್ರಭು ಚವ್ಹಾಣ

ಔರಾದ:ಸೆ.27:ಔರಾದ(ಬಿ) ಪಟ್ಟಣ ಪಂಚಾಯತ್ ಪುರಸಭೆಯಾಗಿ ಮತ್ತು ಕಮಲನಗರ ಗ್ರಾಮ ಪಂಚಾಯತ್ ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೇರುವ ಕಾಲ ಸನ್ನಿಹಿತವಾಗಿದೆ. ಕ್ಷೇತ್ರದ ಜನತೆಗೆ ಶೀಘ್ರ ಸಹಿ ಸುದ್ದಿ ದೊರೆಯುವ ನಿರೀಕ್ಷೆಯಿದೆ ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು.ಬಿ ಚವ್ಹಾಣ ಅವರು ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಔರಾದ(ಬಿ) ಪಟ್ಟಣಪಂಚಾಯಿತಿ ಪುರಸಭೆಯಾಗಬೇಕು ಮತ್ತು ಕಮಲನಗರ ಗ್ರಾಮ ಪಂಚಾಯಿತಿ ಪಟ್ಟಣ ಪಂಚಾಯಿತಿಯಾಗಬೇಕು ಎನ್ನುವುದು ಜನತೆಯ ಬಹುದಿನಗಳ ಬೇಡಿಕೆಯಾಗಿದೆ. ಇದಕ್ಕಾಗಿ ನಾನು ಸುಮಾರು ವರ್ಷಗಳಿಂದ ನಿರಂತರ ಪ್ರಯತ್ನಿಸುತ್ತಿದ್ದೇನೆ.

ರಾಜ್ಯದ ಮುಖ್ಯಮಂತ್ರಿಗಳು, ಸಚಿವರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಸೇರಿದಂತೆ ಸಂಬಂಧಪಟ್ಟ ಎಲ್ಲ ಇಲಾಖೆಗಳಿಗೆ ಪದೇ–ಪದೇ ಪತ್ರಗಳನ್ನು ಬರೆಯುತ್ತಿದ್ದು, ಸಾಕಷ್ಟು ಸಲ ಖುದ್ದಾಗಿ ಭೇಟಿ ನೀಡಿ ಮನವಿ ಸಲ್ಲಿಸಿದ್ದೇನೆ.

ಡಾ.ನಂಜುಂಡಪ್ಪ ವರದಿಯನ್ವಯ ಅತ್ಯಂತ ಹಿಂದುಳಿದ ಪ್ರದೇಶವಾಗಿರುವ ಔರಾದ(ಬಿ) ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಔರಾದ(ಬಿ) ಪಟ್ಟಣ ಪಂಚಾಯಿತಿ ಹಾಗೂ ಕಮಲನಗರ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೆ ಏರಿಸಲು ಸರ್ಕಾರದ ಮೇಲೆ ಒತ್ತಡ ಹಾಕುತ್ತಲೇ ಬರುತ್ತಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಕೆಲಸ ತ್ವರಿತವಾಗಿ ಮಾಡಲು ನಿರಂತರ ಶ್ರಮ ಪಡುತ್ತಿದ್ದೇನೆ.

ಹಿಂದೆ ಜನಸಂಖ್ಯೆ ಕೊರತೆ ಹಾಗೂ ಮತ್ತಿತರೆ ಕಾರಣಗಳಿಂದ ಕೆಲಸ ಆಗಿರಲಿಲ್ಲ. ಔರಾದ್ ಪಟ್ಟಣ ಪಂಚಾಯತಿ ಪುರಸಭೆಯಾಗಿ ಮತ್ತು ಕಮಲನಗರ ಗ್ರಾಮ ಪಂಚಾಯಿತಿ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಲು ಎಲ್ಲ ಮಾನದಂಡಗಳನ್ನು ಹೊಂದಿದ್ದು, ಇದಕ್ಕಿರುವ ಎಲ್ಲ ಅಡೆತಡೆಗಳನ್ನು ಸರಿಪಡಿಸಲಾಗಿದೆ. ಇದೀಗ ನನ್ನ ಮನವಿಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ನನ್ನ ನಿರಂತರ ಪ್ರಯತ್ನಕ್ಕೆ ಫಲ ಸಿಗುವ ಕಾಲ ಹತ್ತಿರ ಬಂದಿದೆ.

ಔರಾದ(ಬಿ) ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲ ರೀತಿಯ ತಯಾರಿಗಳನ್ನು ಮಾಡಿಕೊಂಡಿದ್ದು,

ಈಗಲಾಗಲೇ ಮಾಸ್ಟರ್ ಪ್ಲಾನ್‌ಗೆ ಸರ್ಕಾರದಿಂದ ಮಂಜೂರಾತಿ ಪಡೆಯಲಾಗಿದೆ.

ರಸ್ತೆ, ಕುಡಿಯುವ ನೀರು ಸೇರಿದಂತೆ ಎಲ್ಲ ಅವಶ್ಯಕ ಮೂಲಸೌಕರ್ಯಗಳನ್ನು ಪೂರೈಸುತ್ತಿದ್ದು, ಪಟ್ಟಣದ ಸೌಂಧರ್ಯ ಹೆಚ್ಚಿಸಲು ಎಲ್ಲ ರೀತಿಯ ಕ್ರಮಗಳನ್ನು ವಹಿಸಲಾಗುತ್ತಿದೆ. ಔರಾದ(ಬಿ) ಪಟ್ಟಣ ಪಂಚಾಯಿತಿ ಪುರಸಭೆಯಾಗಿ ಮೇಲ್ದರ್ಜೆಗೆ ಏರಿಸಿದಲ್ಲಿ ಹೆಚ್ಚಿನ ಅನುದಾನ ಲಭಿಸಿ ಅಭಿವೃದ್ಧಿ ಕೆಲಸಗಳಿಗೆ ಮತ್ತಷ್ಟು ವೇಗ ಸಿಗಲಿದೆ.

ಕಮಲನಗರ ತಾಲ್ಲೂಕು ಕೇಂದ್ರದಲ್ಲಿಯೂ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಿದ್ದು,

ಸದ್ಯಕ್ಕೆ ಗ್ರಾಮ ಪಂಚಾಯಿತಿಯಾಗಿರುವ ಕಮಲನಗರವು ಪಟ್ಟಣಪಂಚಾಯಿತಿಯಾದ ನಂತರ ಸರ್ಕಾರದಿಂದ ಹೆಚ್ಚುವರಿ ಅನುದಾನ ದೊರೆತು ಅಭಿವೃದ್ಧಿ ಕೆಲಸಗಳು ತೀವ್ರ ಗತಿಯಲ್ಲಿ ನಡೆಯಲು ಸಾಧ್ಯವಾಗಲಿದೆ. ಹಾಗೂ ಸಾರ್ವಜನಿಕರಿಗೂ ಕೂಡ ಸಾಕಷ್ಟು ಅನುಕೂಲವಾಗುತ್ತದೆ ಎಂದು ಶಾಸಕರು ತಿಳಿಸಿದ್ದಾರೆ.

# ನೀರಿನಲ್ಲಿ ಕೊಚ್ಚಿ ಹೋದ ಯುವಕ; ಸ್ಥಳಕ್ಕೆ ಅಪರ ಜಿಲ್ಲಾಧಿಕಾರಿ ಗೆಣ್ಣೂರ ಭೇಟಿ

ಮಲ್ಲಮ್ಮ ನುಡಿ ವಾರ್ತೆ



ತಾಳಿಕೋಟಿ: ಹತ್ತಿರ ಡೋಣಿ ನದಿಯಲ್ಲಿ ಸೆಪ್ಟೆಂಬರ್ 24ರಂದು ಬೈಕ್ ಸಮೇತ ಕೊಚ್ಚಿಹೋದ ಸೇತುವೆ ಸ್ಥಳಕ್ಕೆ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಶನಿವಾರ ಭೇಟಿ ನೀಡಿದರು. ತಾಳಿಕೋಟಿಗೆ ಬಂದಿದ್ದ ವಡವಡಗಿ ಗ್ರಾಮದ ಯುವಕರಿಬ್ಬರು ಮರಳಿ ಹೋಗುವಾಗ ಡೋಣಿ ಸೇತುವೆ ಮೇಲಿನ ಪ್ರವಾಹಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದರು ಅದರಲ್ಲಿ ಮಹಾಂತೇಶ ಹೊಸಗೌಡರ ಎಂಬಾತನನ್ನು ರಕ್ಷಿಸಲಾಗಿದ್ದು, ಸಂತೋಷ್ ಹಡಪದ ಎನ್ನುವ ಇನ್ನೊಬ್ಬನು ಇಲ್ಲಿಯವರೆಗೆ ಪತ್ತೆಯಾಗಿಲ್ಲ ಶೋಧ ಕಾರ್ಯ ಮುಂದುವರೆದಿದೆ. ಈ ಘಟನೆ ಕುರಿತು ಅಪರ ಜಿಲ್ಲಾಧಿಕಾರಿ ಗೆಣ್ಣೂರ ಅವರು ಸ್ಥಳದಲ್ಲಿದ್ದ ತಹಸಿಲ್ದಾರ್ ಡಾ.ವಿನಯಾ ಹೂಗಾರ ಅವರಿಂದ ಘಟನೆಯ ಸಂಪೂರ್ಣ ಮಾಹಿತಿ ಪಡೆದು-ಕೊಂಡರು. ತಹಸಿಲ್ದಾರ್ ಹೂಗಾರ ಅವರು ಕಳೆದ ಮೂರು ದಿನಗಳಿಂದ ನಿರಂತರ ಮಳೆ ಬರುತ್ತಿರುವುದರಿಂದ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ ಇದರಿಂದ ಶೋಧ ಕಾರ್ಯದಲ್ಲಿ ತೊಂದರೆಯಾಗುತ್ತಿದೆ ಎಂದು ತಿಳಿಸಿದಾಗ ಗೆಣ್ಣೂರ ಅವರು ನೀರಿನ ರಭಸ ತಗ್ಗಿದ ನಂತರ ಶೀಘ್ರ ಶೋಧ ಕಾರ್ಯ ಮುಂದುವರಿಸಿ ಎಂದು ಸೂಚನೆ ನೀಡಿದರು. ಬೆಳೆ ಹಾನಿ ವೀಕ್ಷಣೆ: ಇದೇ ಸಂದರ್ಭದಲ್ಲಿ ತಾಲ್ಲೂಕಿನಾದ್ಯಂತ ಇತ್ತೀಚೆಗೆ ಸುರಿದ ಮಳೆಯಿಂದ ರೈತರ ಬೆಳೆ ಹಾನಿಯಾದ ಹಿನ್ನೆಲೆಯಲ್ಲಿ ಮಿಣಜಗಿ ಭಾಗದ ಸುಮಾರು 5 ಸರ್ವೇ ನಂಬರ್ ಗಳಲ್ಲಿ ಬರುವ ಜಮೀನುಗಳ ಹಾಗೂ ಡೋಣಿ ನದಿ ತಟದ ಕೆಲವು ಜಮೀನುಗಳ ಬೆಳೆ ವೀಕ್ಷಣೆ ನಡೆಸಿದರು. ನಂತರ ಅವರು ಆದ ಹಾನಿಯ ಸಮೀಕ್ಷೆಯನ್ನು ಸಮರ್ಪಕವಾಗಿ ನಡೆಸಿ ಯಾವುದೇ ಅರ್ಹ ರೈತರ ಜಮೀನು ಕೈ ಬಿಟ್ಟು ಹೋಗದಂತೆ ನಿಗಾವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ತಹಸಿಲ್ದಾರ್ ಡಾ.ವಿನಯಾ ಹೂಗಾರ, ಕೃಷಿ ಸಹಾಯಕ ನಿರ್ದೇಶಕ ಸುರೇಶ ಬಾವಿಕಟ್ಟಿ, ಕೃಷಿ ಅಧಿಕಾರಿ ಮಹೇಶ ಜೋಶಿ, ತೋಟಗಾರಿಕೆ ಇಲಾಖೆಯ ಶಫೀಕ ಬಾವೂರ,ಕಂದಾಯ ನಿರೀಕ್ಷಕ ವಿನೋದ ಕುಮಾರ ಸಿಂದಗಿ, ಗ್ರಾಮ ಲೆಕ್ಕಿಗ ಜಯರಾಮ ಚೌಹಾಣ್, ಗ್ರಾಮ ಸಹಾಯಕ ಗಿರೀಶ ತಳವಾರ ಹಾಗೂ ರಕ್ಷಣಾ ತಂಡದವರು ಮತ್ತಿತರರು ಇದ್ದರು.

# ರಾಜ್ಯದ ಗಮನ ಸೆಳೆದ ಸಾಧನೆ – ಜಿಲ್ಲೆಯ ಕೀರ್ತಿ ಹೆಚ್ಚಿಸಿದ ಯುವ ಕ್ರೀಡಾಪಟುಗಳು

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಕ್ರೀಡಾ ಪ್ರಾಧಿಕಾರ ಹಾಗೂ ದಸರಾ ಕ್ರೀಡಾ ಉಪಸಮಿತಿ ನೇತೃತ್ವದಲ್ಲಿ ರಾಜ್ಯಮಟ್ಟದ ದಸರಾ ಹಾಗೂ ಸಿ.ಎಂ. ಕಪ್ ಕ್ರೀಡಾಕೂಟ –2025 ವಿಜೃಂಭಣೆಯಿಂದ ಆಯೋಜಿಸಲಾಯಿತು. ಈ ಕ್ರೀಡಾಕೂಟದಲ್ಲಿ ಮೈಸೂರ್, ಕಲಬುರ್ಗಿ,ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಮತ್ತು ಬೆಳಗಾವಿ ವಿಭಾಗಗಳ ಸ್ಪರ್ಧೆಗಳು ನಡೆದವು. ಕಲಬುರ್ಗಿ ವಿಭಾಗವನ್ನು ಪ್ರತಿನಿಧಿಸಿದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಬೇತಲ್ ಪದವಿ ಮಹಿಳಾ ಮಹಾವಿದ್ಯಾಲಯದ ಪ್ರತಿಭಾವಂತ ಕ್ರೀಡಾಪಟುಗಳು ಅದ್ಭುತ ಸಾಧನೆ ತೋರಿದರು.

### ವಿಜೇತರ ಸಾಧನೆಗಳು

–45 ಕೆಜಿ ವಿಭಾಗ: ರೇಖಾ – ದ್ವಿತೀಯ ಸ್ಥಾನ, –60 ಕೆಜಿ ವಿಭಾಗ: ಅಸ್ಮಾ–ದ್ವಿತೀಯ ಸ್ಥಾನ, –48 ಕೆಜಿ ವಿಭಾಗ: ಐಶ್ವರ್ಯ – ತೃತೀಯ ಸ್ಥಾನ, –52 ಕೆಜಿ ವಿಭಾಗ: ಆಶಾ –ತೃತೀಯ ಸ್ಥಾನ, ತೈಜಿಷಾನ ವಿಭಾಗ: ದಾನಮ್ಮ –ತೃತೀಯ ಸ್ಥಾನ, –39 ಕೆಜಿ ವಿಭಾಗ: ಮಹ್ಮದಿ ಬೇಗಂ –ತೃತೀಯ ಸ್ಥಾನ ಈ ಮೂಲಕ ಬೇತಲ್ ಮಹಾವಿದ್ಯಾಲಯವು ರಾಜ್ಯಮಟ್ಟದ ವೇದಿಕೆಯಲ್ಲಿ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದೆ. ಸಂಸ್ಥೆಯ ಕಾರ್ಯದರ್ಶಿ ಬ್ಯಾಬೇಜ್ ಮಿಲ್ಲನ್ ಮಾತನಾಡುತ್ತ "ನಮ್ಮ ವಿದ್ಯಾರ್ಥಿಗಳು ಮೆರೆದ ಸಾಧನೆ ಸಂಸ್ಥೆಗೆ ಮಾತ್ರವಲ್ಲ, ಸಮಸ್ತ ಜಿಲ್ಲೆಯ ಹೆಮ್ಮೆ. ಅವರು ಕೇವಲ ಪದಕಗಳನ್ನು ಗೆದ್ದಿಲ್ಲ; ಪರಿಶ್ರಮ, ಶಿಸ್ತು ಮತ್ತು ತಂಡಭಾವದಿಂದ ಏನನ್ನು ಸಾಧಿಸಬಹುದು ಎಂಬುದಕ್ಕೆ ಮಾದರಿಯಾಗಿದ್ದಾರೆ. ಇಂತಹ ಯುವ ಪ್ರತಿಭೆಗಳು ಸಮಾಜಕ್ಕೆ ಸ್ಫೂರ್ತಿ." ಮುಖ್ಯ ತರಬೇತುದಾರ ಬಾಬುಸಾಬ್ ಮಾತನಾಡುತ್ತ "ವಿದ್ಯಾರ್ಥಿಗಳ ಸಾಧನೆ ನನ್ನ ಹೃದಯ ತುಂಬಿದ ಹೆಮ್ಮೆ. ಅವರ ಶಿಸ್ತಿನ ತರಬೇತಿ ಮತ್ತು ಸಮರ್ಪಣೆಯಿಂದಲೇ ಈ ಗೆಲುವು ಸಾಧ್ಯವಾಯಿತು. ಮುಂದಿನ ದಿನಗಳಲ್ಲಿ ಇವರನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟಕ್ಕೂ ತಲುಪಿಸಲು ನನ್ನ ಹಂಬಲ."



ವಿಜೇತ ಪಟು ಅಸ್ಮಾ ಮಾತನಾಡುತ್ತ "ಈ ಸಾಧನೆ ನನಗೆ ಮರೆಯಲಾಗದ ಕ್ಷಣ. ಬಾಬುಸಾಬ್ ಅವರ ಮಾರ್ಗದರ್ಶನ ಹಾಗೂ ಪೋಷಕರ ಪ್ರೋತ್ಸಾಹವೇ ನನ್ನ ಬಲ. ಪದಕಕ್ಕಿಂತ ನನ್ನ ಪೋಷಕರ ಹೆಮ್ಮೆ ನನ್ನ ದೊಡ್ಡ ಗೆಲುವು. ಮೊದಲ ಬಾರಿಗೆ ಸಿ.ಎಂ. ಕಪ್‌ನಲ್ಲಿ ಪಾಲ್ಗೊಂಡು ಪದಕ ಗೆದ್ದ ಸಂತೋಷ ಅಳತೆಯಿಲ್ಲ. ನಮ್ಮ ಕಾಲೇಜು,ಗುರುಗಳ ಮಾರ್ಗದರ್ಶನ ಮತ್ತು ಕುಟುಂಬದ ಆಶೀರ್ವಾದವೇ ನನ್ನ ಯಶಸ್ಸಿನ ಮೂಲ."

ವಿದ್ಯಾರ್ಥಿನಿಯರ ಸಾಧನೆಗೆ ಎಲ್ಲರೂ ಹೃದಯ ತುಂಬಿದ ಅಭಿನಂದನೆ ಸಲ್ಲಿಸಿ, ಭವಿಷ್ಯದಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡಾಂಗಣದಲ್ಲಿ ಚಿನ್ನದ ಪದಕ ಗೆಲ್ಲಲಿ ಎಂಬ ಹಾರೈಕೆ ವ್ಯಕ್ತಪಡಿಸಿದರು."

"ವಿಜೇತರನ್ನು ಗೌರವಿಸಲು ನಡೆದ ಕಾರ್ಯಕ್ರಮದಲ್ಲಿ ಬೇತಲ್ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಹೇಮಾ ಸುಧಾಕರ್, ಅಧ್ಯಕ್ಷ ರಾಜು ಸುಧಾಕರ್, ಕಾರ್ಯದರ್ಶಿ ಬ್ಯಾಬೇಜ್ ಮಿಲ್ಲನ್, ಖಜಾಂಚಿ ಸುಜಾತ ರಾಜು ಹಾಗೂ ಮುಖ್ಯ ತರಬೇತುದಾರ ಬಾಬುಸಾಬ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಳ್ಳಾರಿಯಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ

# ಪ್ರವಾಸಿ ತಾಣಗಳನ್ನು ಉಳಿಸಿ ಬೆಳೆಸಿ ಸಂರಕ್ಷಿಸೋಣ: ಮುಂಡರಗಿ ನಾಗರಾಜ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.27–ನಮ್ಮ ಸುತ್ತಮುತ್ತಲಿನ ಐತಿಹಾಸಿಕ ಸ್ಥಳಗಳನ್ನು ಉಳಿಸಿ ಬೆಳೆಸಿ ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಹೇಳಿದರು.

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ ಹಾಗೂ ಹೋಟೆಲ್ ಮಾಲೀಕರ ಸಂಘ, ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಸಂಡೂರು ಡೈರೀಸ್ ಇವರ ಸಹಯೋಗದಲ್ಲಿ "ಪ್ರವಾಸೋದ್ಯಮ ಹಾಗೂ ಸುಸ್ಥಿರ ಪರಿವರ್ತನೆ" ಎಂಬ ಸಂದೇಶದಡಿಯಲ್ಲಿ ನಗರದ ಐತಿಹಾಸಿಕ ಕೋಟೆ ಮುಂಭಾಗದ ಆವರಣದಲ್ಲಿ ಶನಿವಾರ ಏರ್ಪಡಿಸಿದ್ದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ರಾಜ್ಯವು ಹಲವಾರು ಐತಿಹಾಸಿಕ ಪ್ರವಾಸಿ ತಾಣಗಳು ಮತ್ತು ವಿಸ್ಮಯಕಾರಿ ತಾಣಗಳನ್ನು ಹೊಂದಿದೆ. ವಿಶ್ವವಿಖ್ಯಾತ ಹಂಪಿ ಹಾಗೂ ತುಂಗಭದ್ರಾ ಡ್ಯಾಂ ಪ್ರವಾಸಿ ತಾಣಗಳು ಇದೀಗ ನೆರೆಯ ವಿಜಯನಗರ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟಿವೆ. ಆದರೂ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಸಂಡೂರಿನ ಕುಮಾರಸ್ವಾಮಿ ದೇವಸ್ಥಾನ, ಸ್ವಾಮಿಮಲೈ ಅರಣ್ಯ ಕ್ಷೇತ್ರ, ನಾರಿಹಳ್ಳ ಜಲಾಶಯ, ವಿಶ್ವದ 2 ನೇ ಏಕಶಿಲಾ ಬೆಟ್ಟ ಬಳ್ಳಾರಿಯ ಐತಿಹಾಸಿಕ ಕೋಟೆ, ಮಿಂಚೇರಿ ಬೆಟ್ಟ, ಸಂಗನಕಲ್ಲು ಗುಡ್ಡ, ಸಿರುಗುಪ್ಪದ ತೆಕ್ಕಲಕೋಟೆ, ಕೆಂಚನಗುಡ್ಡ, ಕುರುಗೋಡಿನ ದೊಡ್ಡ ಬಸವೇಶ್ವರ ದೇವಸ್ಥಾನ ಸೇರಿದಂತೆ ಅನೇಕ ಪ್ರವಾಸಿ ತಾಣಗಳಿದ್ದು, ಜನರು ಈ ಸ್ಥಳಗಳಿಗೆ ಭೇಟಿ ನೀಡಿ ಸ್ಥಳೀಯ ಪ್ರವಾಸಿ ತಾಣಗಳನ್ನು ವೀಕ್ಷಿಸಬೇಕು ಎಂದರು.

ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ನಮ್ಮ ಸುತ್ತಮುತ್ತಲಿನ ಪ್ರವಾಸಿ ತಾಣಗಳಿಗೆ ಒಂದು ದಿನದ ಪ್ರವಾಸ ಕರೆದುಕೊಂಡು ಹೋಗಿ ಐತಿಹಾಸಿಕ ಸ್ಥಳಗಳ ಬಗ್ಗೆ ಶಿಕ್ಷಕರು ಮಾಹಿತಿ ನೀಡಿದರೆ ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡುತ್ತದೆ ಎಂದು ಹೇಳಿದರು.

ಇಂದಿನ ವಿದ್ಯಾರ್ಥಿಗಳು ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ದುಶ್ಚಟಕ್ಕೆ ಒಳಗಾಗದೇ ವಿದ್ಯಾಭ್ಯಾಸದ ಕಡೆ ಗಮನ ಹರಿಸುವುದರ ಜೊತೆಗೆ ಪ್ರವಾಸಿ ತಾಣಗಳನ್ನು ವೀಕ್ಷಿಸುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದ ಸದಸ್ಯ ಅಹೀರಾಜ್.ಎಂ ಅವರು ಮಾತನಾಡಿ, ಐದು ಸಾವಿರ ವರ್ಷಗಳ ಇತಿಹಾಸ ಹೊಂದಿದ ಸಂಗನಕಲ್ಲು ಗುಡ್ಡ ಪ್ರದೇಶವು ನವಶಿಲಾಯುಗದ ಕುರುಹುಗಳ ತಾಣವಾಗಿದ್ದು, ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡ ಜನವಸತಿ ಪ್ರದೇಶವಾಗಿತ್ತು ಎಂಬ ಇತಿಹಾಸವನ್ನು ಹೊಂದಿದೆ. ಇಂತಹ ಐತಿಹಾಸಿಕ, ನೈಸರ್ಗಿಕ ತಾಣಗಳ ವೀಕ್ಷಣೆಯಿಂದ ಇತಿಹಾಸದ ಕುರಿತು ಕುತೂಹಲ ಸೃಷ್ಟಿಯಾಗಿ ಜ್ಞಾನ ವೃದ್ಧಿಯಾಗಲಿದೆ ಎಂದು ಹೇಳಿದರು.

ಇದೇ ವೇಳೆ ಪ್ರವಾಸಿ ಮಿತ್ರ ರಕ್ಷಣಾ ಸಿಬ್ಬಂದಿಗಳಿಗೆ ಪ್ರಶಂಸೆ ಪತ್ರ ಹಾಗೂ ಪ್ರವಾಸೋದ್ಯಮ ಇಲಾಖೆಯಿಂದ ಗಣ್ಯರಿಗೆ ನೆನಪಿನ ಕಾಣಿಕೆಯನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಫೋಟೋ ಪಾಯಿಂಟ್ ಮತ್ತು ಕೋಟೆ ಮುಂಭಾಗ ನಿಂತು ಫೋಟೋ ತೆಗೆದುಕೊಂಡು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಜಂಟಿ ಕಾರ್ಯದರ್ಶಿ ಜಿತೇಂದ್ರ, ಸಸಅ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಬಸಪ್ಪ.ಕೆ, ಪ್ರವಾಸೋದ್ಯಮ ಇಲಾಖೆಯ ಹಿರಿಯ ಪ್ರವಾಸಿ ಪ್ರವರ್ತಕ ಶ್ರೀಹರಿ ಮಾಸನೂರು, ಪ್ರವಾಸಿ ಮಿತ್ರರು ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಇತರರು ಉಪಸ್ಥಿತರಿದ್ದರು.

# ಬಲ್ಡೋಟ ಕಾರ್ಖಾನೆ ವಿಸ್ತರಣೆ ಬೇಡ! ಪರಿಸರ ಜಾಗೃತಿ ಸಪ್ತಾಹ–01 ಮುಕ್ತಾಯ

ಮಲ್ಲಮ್ಮ ನುಡಿ ವಾರ್ತೆ




ಕೊಪ್ಪಳ:ಬಲ್ದೋಟಾ ಬಿ.ಎಸ್.ಪಿ.ಎಲ್. ಕಾರ್ಖಾನೆ ಕೊಪ್ಪಳ ನಗರ–ಕ್ಕೆ ಹೊಂದಿಕೊಂಡಿದ್ದರಿಂದ ಇದರ ವಿಸ್ತರಣೆ ಬೇಡ. ಪರಿಸರ ಹಾನಿಕಾರಕ ಹೊಸ ಕಾರ್ಖಾನೆಗಳ ಸ್ಥಾಪನೆ–ವಿಸ್ತರಣೆ ಬೇಡ. ಬಸಾಪುರ ಕೆರೆ 44–35 ಎಕರೆ ಗ್ರಾಮದ ಸಾರ್ವಜನಿಕರ ಆಸ್ತಿ ಎಂದು ಘೋಷಿಸಿ, ಜಾನುವಾರು ನೀರು ಕುಡಿಯಲು ಮುಕ್ತವಾಗಿಡಿ. ಈಗಿರುವ ಕಾರ್ಖಾನೆಗಳಿಂದ ಉಂಟಾಗುತ್ತಿರುವ ಪರಿಸರ ಹಾನಿ ನಿಲ್ಲಬೇಕು. ಒಂದೇ ಕಡೆ ಕೈಗಾರಿಕೆಗಳ ಕೇಂದ್ರೀಕರಣ ಬೇಡ. ಕಾರ್ಖಾನೆಗಳ ತ್ಯಾಜ್ಯದಿಂದ ತುಂಗಭದ್ರಾ ವಿಷವಾಗುತ್ತಿದೆ, ತ್ಯಾಜ್ಯ ಹರಿಬಿಡುವ ಕಾರ್ಖಾನೆಗಳ ಮೇಲೆ ಕ್ರಮ ಜರುಗಿಸಿ. ಜಲಾಶಯದ ನೀರು ಕಾರ್ಖಾನೆಗಳಿಗೆ ಕೊಡುವುದನ್ನು ನಿಲ್ಲಿಸಿ. ಕಾರ್ಖಾನೆ ದೂಳು, ಹೊಗೆ, ಹಾರುಬೂದಿ ಬಾಧಿತ 20 ಗ್ರಾಮದ ಜನರ ಮತ್ತು ಕೊಪ್ಪಳ–ಭಾಗ್ಯನಗರದ 1.5 ಲಕ್ಷ ಜನರ ಆರೋಗ್ಯ ರಕ್ಷಣೆ ಖಾತರಿಪಡಿಸಿ ಎನ್ನುವ ಕೊಪ್ಪಳ ಜನರ ಆಗ್ರಹವನ್ನು ಸರ್ಕಾರದ ಮುಂದಿಡಲು ಸೆ, 18 ರಿಂದ 24 ರವರೆಗೆ ಪರಿಸರ ಜಾಗೃತಿ ಸಪ್ತಾಹ –01 ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಯಿತು. ಸಪ್ತಾಹದ ಕೊನೆಯ ದಿನ ಕೇಂದ್ರೀಯ ಬಸ್ ನಿಲ್ದಾಣದ ಕನಕದಾಸ ವೃತ್ತದಲ್ಲಿ, ಮಾರುಕಟ್ಟೆ, ಗಡಿಯಾರ ಕಂಬ, ಕಿತ್ತೂರು ಚೆನ್ನಮ್ಮ ಸರ್ಕಲ್, ನಂದಿನಗರ ಮತ್ತು ದೇವರಾಜ್ ಅರಸು ಕಾಲೊನಿಯಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು.

ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಬಹಿರಂಗ ಸಭೆಯಲ್ಲಿ ನಗರದ ಜನರನ್ನುದ್ದೇಶಿಸಿ ಮಾತನಾಡುತ್ತಾ, ಬಲ್ಡೋಟ ಬಿಎಸ್ಪಿಎಲ್ 54 ಸಾವಿರ ಕೋಟಿ ಹೂಡಿಕೆಯಿಂದ ವಿಸ್ತರಣೆಯಾದರೆ ಇದು ನಗರಕ್ಕೆ ಹೊಂದಿಕೊಂಡಿದ್ದರಿಂದ 27 ಮಾಲಿನ್ಯ ಉಂಟು ಮಾಡುವ ಚಿಮಣಿಗಳು ಎದ್ದು ನಿಲ್ಲುತ್ತವೆ. 13 ವರ್ಷಗಳಿಂದ ಇದೆ ಬಲ್ಡೋಟ ಎಂಎಸ್ ಪಿಎಲ್ ಒಂದು ಚಿಮಿಣಿಯಿಂದ ಬರುವ ರಾಸಾಯನಿಕ ದೂಳು, ಹಾರುಬೂದಿ, ಹೊಗೆಯಿಂದ ಕೊಪ್ಪಳದ ಅರ್ಧದಷ್ಟು ವಾತಾವರಣ ಹಾಳಾಗಿದೆ. ಅಲ್ಲದೆ ಭಾಗ್ಯನಗರಕ್ಕೂ ಇದರ ಪರಿಣಾಮ ತಟ್ಟಿದೆ

ಗಿಣಿಗೇರಿ, ಕನಕಾಪುರ, ಅಲ್ಲಾನಗರ, ಬೇವಿನಹಳ್ಳಿ, ಹಿರೇಬಗನಾಳ, ಕುಣಿಕೇರಿ, ಹಾಲವರ್ತಿ, ಹಿರೇಕಾಸನಕಂಡಿ, ಚಿಕ್ಕಬಗನಾಳ, ಲಾಚನಕೇರಿ, ಮುಂಡರಗಿ, ಕುಣಿ–ಕೇರಿ ತಾಂಡಾ, ಬಸಾಪುರ, ಬೆಳವಿನಾಳ ಹೀಗೆ 20 ಗ್ರಾಮಗಳ ಸುತ್ತ ಸ್ಥಾಪಿಸಿದ ಕಲ್ಯಾಣಿ, ಹೋಸಪೇಟೆ ಸ್ಟೀಲ್, ಕಿರ್ಲೋಸ್ಕರ್, ಅಲ್ಟ್ರಾಟೆಕ್, ಎಚ್.ಆರ್.ಜಿ. ಅಲಾಯ್ಸ್, ತನುಷ್, ವನ್ಯಾ ಸ್ಟೀಲ್,, ಎಕ್ಸಿಂಡಿಯಾ, ದೃವದೇಶ, ಮುಕುಂದ–ಸುಮಿ, ನವಭಾರತ ಕೆಮಿಕಲ್ಸ್, ಬಾಬಾ ಅಖಿಲಸಾಯಿ ಜ್ಯೋತಿ, ಭದ್ರಶ್ರೀ ಮೆಟಾಲಿಕ್, ಐ.ಎಲ್.ಸಿ, ಕೆ.ಪಿ.ಆರ್ ಕೆಮಿಕಲ್ಸ್, ಠಾಕೂರ್, ಬಲ್ಡೋಟಾ ಎಂ.ಎಸ್.ಪಿ.ಎಲ್ ಹೀಗೆ ಒಟ್ಟು 28 ಸ್ಪಾಂಜ್ ಐರನ್, ಸಿಮೆಂಟ್, ಕೆಮಿಕಲ್, ಗೊಬ್ಬರ, ಸುಣ್ಣ, ಕಲ್ಲಿದ್ದಲು ವಿದ್ಯುತ್, ಉಕ್ಕು ತಯಾರಿಕಾ ಕಾರ್ಖಾನೆಗಳು ಒಂದೇ ಕಡೆ ಕೇಂದ್ರೀಕರಣ ಆಗಿರುವುದರಿಂದ ಹಾರುಬೂದಿ, ಹೊಗೆ, ದೂಳು, ಕೆಮಿಕಲ್ ಘಾಟು ವಾಸನೆ ವಾತಾವರಣದಲ್ಲಿ ಬೆರೆತು

ಧಾರಣಾ ಸಾಮರ್ಥ್ಯ ಕಳೆದುಕೊಂಡಿದೆ. ಅಲ್ಲಿನ ಜನರ ಕೃಷಿಭೂಮಿ ಫಲವತ್ತತೆ, ನೀರು, ಅಂತರ್ಜಲ, ತುಂಗಭದ್ರಾ ಜಲಾಶಯ, ರೈತರ ಬೆಳೆ ಹಾಳಾಗುತ್ತಿವೆ. ಕಲುಷಿತಮೇವುತಿಂ–ದು ಜಾನುವಾರು ಸಾಯುತ್ತಿವೆ. ಜನರು ಅಸ್ತಮಾ, ಟಿಬಿ, ಕ್ಯಾನ್ಸರ್, ಹೃದಯ ಸಂಬಂಧಿ ಖಾಯಿಲೆ ಬಿದ್ದು ಸಾಯುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು, ಕೈಗಾರಿಕಾ ಮಂತ್ರಿಗಳು ಕಾರ್ಖಾನೆಯಿಂದ ಬಾಧಿತವಾದ 20 ಹಳ್ಳಿಗೆ ಖುದ್ದಾಗಿ ಭೇಟಿ ನೀಡಿ ಪರಿಸರ ಮಾಲಿನ್ಯ ಆಗಿದ್ದರ ಬಗ್ಗೆ, ರೋಗಪೀಡಿತರ ಬಗ್ಗೆ ರೈತರನ್ನು 1 ನಿಮಿಷ ವಿಚಾರಿಸಿ ಸತ್ಯ ಅರಿಯಬೇಕು. ಎಂದು ನಮ್ಮ ಹೋರಾಟದ ವೇದಿಕೆಯಿಂದ ಒತ್ತಾಯಿಸುತ್ತಾ ಬಂದಿದ್ದೇವೆ. ಈ ಗ್ರಾಮಗಳ ಭೇಟಿಯನ್ನು ಈ ವರೆಗೂ ಮಾಡುತ್ತಿಲ್ಲ. ಜನರ ಆರೋಗ್ಯ ಸರ್ವೆಯನ್ನು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಂಖಖಒಖ)ಯಿಂದ ಅಥವಾ ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ (ಖಒಂ)ಯಿಂದ ಮಾಡಬೇಕೆಂದು, ಇಲ್ಲಿನ ಸಂಪೂರ್ಣ ಪರಿಸರ ಹಾನಿಯ ಸರ್ವೆಯನ್ನು ಭಾರತೀಯ ವಿಜ್ಞಾನ ಸಂಸ್ಥೆ (ಖಖಖಅ)ಯಿಂದ ಮಾಡಬೇಕೆಂದು ಕೇಳಿದ್ದೇವೆ. ಸರ್ಕಾರ ಜನರ ಆರೋಗ್ಯದ ಸರ್ವೆ ಮತ್ತು ಪರಿಸರ ಹಾನಿಯಾದ ಸರ್ವೆ ಮಾಡದೆ ನಿರ್ಲಕ್ಷ್ಯ ವಹಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಚಾಲಕರಾದ ಕೆ.ಬಿ. ಗೋನಾಳ ಬಹಿರಂಗ ಸಭೆಯಲ್ಲಿ ಇಷ್ಟೆಲ್ಲ ಪರಿಸರ ಹಾನಿಯ ಪರಿಣಾಮ ಕೊಪ್ಪಳ ಎದುರಿಸುತ್ತಿದ್ದರೂ ಬೃಹತ್ ಕೈಗಾರಿಕಾ ಮಂತ್ರಿಯಾದ ಎಂ.ಬಿ. ಪಾಟೀಲ್ ಅವರು ಜಪಾನ್ ದೇಶಕ್ಕೆ ಹೋಗಿ ಸುಮಿಟೊಮೊ ಕಂಪನಿ ಜತೆಗೆ 2,345 ಕೋಟಿ ಹೂಡಿಕೆಯ 7 ಲಕ್ಷ ಎಂಟಿಪಿಎ ಉಕ್ಕು ತಯಾರಿಕಾ ಘಟಕ ಸ್ಥಾಪನೆಗೆ ಒಡಂಬಡಿಕೆ ಮಾಡಿಕೊಂಡಿರುವುದು ಖಂಡನೀಯ. ಸರ್ಕಾರ ಹಟಕ್ಕೆ ಬಿದ್ದಂತೆ ವರ್ತಿಸುತ್ತಿದ್ದು, ಕೊಪ್ಪಳ ಜನರ ತಾಳ್ಮೆ ಪರೀಕ್ಷೆ ಮಾಡುತ್ತಿದೆ. ತುಂಗಭದ್ರಾ ಒಡಲನ್ನು ಕಾರ್ಖಾನೆ ತ್ಯಾಜ್ಯದ ತೊಟ್ಟಿಯನ್ನಾಗಿ ಮಾಡಲಾಗಿದೆ. ಜನರ ಆರೋಗ್ಯ ಜೀವ ಹಾನಿ ಮಾಡುತ್ತಾ ಉದ್ಯೋಗದ ಭ್ರಮೆ, ಅಭಿವೃದ್ಧಿ ಮಂತ್ರ ಜಪಿಸುತ್ತ ನಮ್ಮನ್ನು ದಾರಿ ತಪ್ಪಿಸುತ್ತಿದ್ದಾರೆ. ಕಳೆದ 30 ವರ್ಷಗಳಿಂದ ಈ ಕಾರ್ಖಾನೆಗಳಿಗಾಗಿ ನಾವು ಫಲವತ್ತಾದ ಭೂಮಿ ಕಳೆದುಕೊಂಡು, ನೀರು ಕೊಟ್ಟು, ನಾವು ಓಡಾಡುವ ರಸ್ತೆ ಅವರಿಗೇ ಬಿಟ್ಟುಕೊಟ್ಟಿದ್ದೇವೆ. ಆದರೆ ಈ ಫ್ಯಾಕ್ಟರಿಗಳು ಕೊಟ್ಟ ಕೊಡುಗೆ ಏನೆಂದರೆ ಕೆಟ್ಟ ರಾಸಾಯನಿಕ ದೂಳು, ಹೊಗೆ ಮತ್ತು ಹಾರು ಬೂದಿ. ಇದರಿಂದ ಕೊಪ್ಪಳ ಜನ ಸಂಪೂರ್ಣ ಆರೋಗ್ಯ ಕಳೆದುಕೊಂಡಿದ್ದು ಬಿಟ್ಟರೆ ಬೇರೇನೂ ಪ್ರಯೋಜನವಾಗಿಲ್ಲ ಎಂದರು.

ಶರಣು ಗಡ್ಡಿ ಮಾತನಾಡಿ ಭವಿಷ್ಯದ ಈ ಅಪಾಯವನ್ನು ಕಂಡು ಸುಮ್ಮನೆ ಕೂತರೆ ಮುಂದಿನ ಪೀಳಿಗೆ ನಮ್ಮನ್ನು ಶಪಿಸಿ, ಕಣ್ಣೀರಿಡುವಂತೆ ಆಗುತ್ತದೆ. ಪರಿಸರ ಹಾನಿ ಮಾಡಿ ಆರೋಗ್ಯ ಕೆಡಿಸಲು ಯಾರಿಗೂ ಹಕ್ಕಿಲ್ಲವಾದರೂ ಇಲ್ಲಿ ಪರಿಸರ ಇಲಾಖೆ ಏನು ಮಾಡುತ್ತಿದೆ, ಅದರ ಜವಾಬ್ದಾರಿ ಏನೆಂದು ಯಾರಿಗೂ ತಿಳಿದಿಲ್ಲ.. ಪರಿಸರ ಹಾನಿ ಮಾಡುವ ಈ ಕಾರ್ಖಾನೆಗಳಿಗೆ ಯಾವುದೇ ಕಡಿವಾಣ ಇಲ್ಲದಂತಾಗಿದೆ. ಇಂತಹ ಸಂದರ್ಭದಲ್ಲಿ ದೊಡ್ಡ ಮಟ್ಟದ ಬೀದಿ ಹೋರಾಟಕ್ಕೆ ಉಸಿರಾಡುವ ಪ್ರತಿಯೊಬ್ಬ ಸಾಮಾನ್ಯ ನಾಗರಿಕರು ಎದ್ದು ಬರಬೇಕು ಎಂದು ನಗರದ ಜನರಲ್ಲಿ ಮನವಿ ಮಾಡಿದರು.

ಫಾಸ್ಟರ್ ಅಸೋಸಿಯೇಶನ್ ಅಧ್ಯಕ್ಷರಾದ ಚನ್ನಬಸಪ್ಪ ಅಪ್ಪಣ್ಣವರ ಮಾತನಾಡಿ ಅ. 6 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಿಲ್ಲಾ ಕೇಂದ್ರದ ಕಿಮ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ ಸಂತ ಶ್ರೇಷ್ಠ ಕನಕದಾಸರ ಪ್ರತಿಮೆ ಅನಾವರಣ ಮಾಡಲು ಬರುತ್ತಾರೆ. ಅಂ–ದು ತಾವು ಅವರನ್ನು ಇದುವರೆಗೆ ಯಾಕೆ ಬಿಎಸ್ ಪಿಎಲ್ ವಿಸ್ತರಣೆ ಶಾಶ್ವತವಾಗಿ ರದ್ದು ಮಾಡಿಲ್ಲ ಎಂದು ಕೇಳೋಣ ಎಂದರು.

ಆಂದೋಲನದಲ್ಲಿ ಮುದುಕಪ್ಪ ಎಂ ಹೊಸಮನಿ, ಮಹಾದೇವಪ್ಪ ಮಾವಿನಮಡು, ಗಾಳೆಪ್ಪ ಮುಂಗೋಲಿ, ಬಂದೆನವಾಜ್ ಮಣಿಯಾರ, ಮೂಕಪ್ಪ ಮೇಸ್ತ್ರಿ ಬಸಾಪುರ, ಪ್ರಕಾಶ ಮ್ಯಾದಾರ, ಮಖ್ಬೂಲ್ ರಾಯಚೂರು, ಯಮನೂರಪ್ಪ ಹಾಲಳ್ಳಿ ಬಸಾಪುರ ನೇತೃತ್ವ ವಹಿಸಿ

# ಜಿಲ್ಲೆಯ ಪ್ರಮುಖ ಸರ್ಕಾರಿ ಪದವಿ ಕಾಲೇಜ ವಿದ್ಯಾರ್ಥಿಗಳ ತರಗತಿಗಳಿಗೆ ಬಹಿಷ್ಕಾರ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಸರ್ಕಾರದ ಭೀಕರ ತಾರತಮ್ಯ ಖಂಡಿಸಿ, ಈ ಕೂಡಲೇ ಅತಿಥಿ ಉಪನ್ಯಾಸಕರನ್ನು ನೇಮಿಸಲು ಒತ್ತಾಯಿಸಿ, ಜಿಲ್ಲೆಯ ಪ್ರಮುಖ ಸರ್ಕಾರಿ ಪದವಿ ಕಾಲೇಜು ವಿದ್ಯಾರ್ಥಿಗಳ ತರಗತಿ ಬಹಿಷ್ಕಾರ

ಒಂದೂ ತರಗತಿ ನಡೆಯದ ನೂರಾರು ಸರ್ಕಾರಿ ಪದವಿ ಕಾಲೇಜುಗಳು ಒಂದೆಡೆ, ಎರಡು ಘಟಕ ಪರೀಕ್ಷೆಗಳನ್ನು ಮುಗಿಸಿ, ಸೆಮಿಸ್ಟರ್ ಪರೀಕ್ಷೆಯ ತಯಾರಿಯಲ್ಲಿರುವ ಖಾಸಗಿ ಪದವಿ ಕಾಲೇಜುಗಳು ಮತ್ತೊಂದೆಡೆ

ಈ ಕೂಡಲೇ ಅತಿಥಿ ಉಪನ್ಯಾಸಕರನ್ನು ನೇಮಿಸಲು ಒತ್ತಾಯಿಸಿ, ರಾಜ್ಯವ್ಯಾಪಿ ಸರ್ಕಾರಿ ಪದವಿ ವಿದ್ಯಾರ್ಥಿಗಳ ತರಗತಿಗೆ ಬಹಿಷ್ಕಾರ ಮಾಡಿದ ಕೊಪ್ಪಳ ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸರ್ಕಾರಿ ಮಹಿಳಾ ಪದವಿ ಕಾಲೇಜುಗಳು ಸೇರಿದಂತೆ ಜಿಲ್ಲೆಯ ವಿವಿಧ ಕಾಲೇಜಿನಲ್ಲೂ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ತರಗತಿ ಬಹಿಷ್ಕರಿಸಿ ಸರ್ಕಾರದ ಧೋರಣೆಯ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಎಐಡಿಎಸ್‌ಓ ರಾಜ್ಯ ಸಮಿತಿ ಸದಸ್ಯೆ ಸಿಂಧೂ.ಕೆ ಮಾತನಾಡಿ ಹೋರಾಟದ ಮುಂದಿನ ನಡೆಯಾಗಿ, ತರಗತಿ ನಡೆಸದೆ ಪರೀಕ್ಷೆ ಬೇಡ ಎಂಬ ಘೋಷ ವಾಕ್ಯದೊಂದಿಗೆ ರಾಜ್ಯದಾದ್ಯಂತ ಸಂಘರ್ಷ ನಡೆಸಲು ವಿದ್ಯಾರ್ಥಿಗಳು ಇಂದು ತರಗತಿ ಬಹಿಷ್ಕಾರದ ಹಿನ್ನಲೆಯನ್ನು, ತೀರ್ಮಾನಿಸಿದ್ದಾರೆ.

ಅತಿಥಿ ಉಪನ್ಯಾಸಕರಿಲ್ಲದೆ ಒಂದು ತರಗತಿ ನಡೆಯದಿದ್ದರೂ ಸೆಮಿಸ್ಟರ್ ಪರೀಕ್ಷೆ ವೇಳಾಪಟ್ಟಿ ಮತ್ತು ಪರೀಕ್ಷಾ ಶುಲ್ಕದ ಸುತ್ತೋಲೆ ಹೊರಡಿಸಿರುವ ವಿವಿಗಳ ಧೋರಣೆ ಖಂಡನೀಯ. ಸರ್ಕಾರಿ ವಿವಿಗಳು ಖಾಸಗಿ ಪದವಿ ಕಾಲೇಜುಗಳಿಗೆ ಮಾತ್ರವೇ ಇರುವುದೇ ಎಂಬ ಪ್ರಶ್ನೆ ಮೂಡುತ್ತದೆ. ಆದ್ದರಿಂದ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದರು.

ಹಾಗೆಯೇ ತರಗತಿಗಳನ್ನು ಬಹಿಷ್ಕರಿಸಿ ಹಲವು ವಿದ್ಯಾರ್ಥಿಗಳು ಮಾತನಾಡಿ ಆಕ್ರೋಶ ವ್ಯಕ್ತಪಡಿಸಿದರು. ಕಾರ್ಯಕರ್ತರಾದ ಶರಣು.ಜ, ತಿರುಪತಿ, ಅಪ್ಪಾಜಿ ಮತ್ತು ವಿದ್ಯಾರ್ಥಿಗಳಾದ ಆಕಾಶ್.Y, ಪರ ಶುರಾಮ್.ಊ, ಸಾವಿತ್ರಿ, ದುರ್ಗಾ, ನಾಗರತ್ನ, ಗಂಗಾ ಮುಂತಾದವರು ಭಾಗವಹಿಸಿದ್ದರು.

# ಅಡುಗೆ ಅನಿಲದ ಸಿಲಿಂಡರ್ ಸ್ಫೋಟ 8 ಜನ ಗಾಯ, ಭಾಗಶಃ ಮನೆಹಾನಿ



ಮಲ್ಲಮ್ಮ ನುಡಿ ವಾರ್ತೆ

ಹೊಸಪೇಟೆ; (ವಿಜಯನಗರ)ಸೆ27: ಮನೆಯ ಅಡುಗೆ ಅನಿಲದ ಸಿಲೆಂಡರ್ ಸ್ಫೋಟಗೊಂಡು ಮನೆಯ 8 ಜನರೂ ಗಾಯಗೊಂಡು ಭಾಗಶಃ ಮನೆ ಹಾನಿಯಾದ ಧಾರುಣ ಘಟನೆ ತಾಲೂಕಿನ ಗಾದಿಗನೂರನಲ್ಲಿ ಬೆಳಗಿನ ಜಾವ ಜರುಗಿದೆ.

ಬೆಳಿಗ್ಗೆ ಅಂದಾಜು 4ಗಂಟೆ ಸುಮಾರಿಗೆ ವಕೀಲ ಹಾಲಪ್ಪ, ಸಹೋದರ ಮೈಲಾರಪ್ಪ ರವರ ಮನೆಯಲ್ಲಿ ಅಡುಗೆ ಸಿಲಿಂಡರ್ ಸ್ಫೋಟಗೊಂಡು, ಕುಟುಂಬದ 8 ಜನರೂ ಗಾಯಗೊಂಡು ಇಬ್ಬರು ಗಂಭೀರ ಸ್ವರೂಪದಲ್ಲಿ ಗಾಯಗೊಂಡಿದ್ದಾರೆ

ಸ್ಫೋಟದ ರಭಸಕ್ಕೆ ಮನೆ ಗೋಡೆ ಕುಸಿತವಾಗಿದೆ.

ಮನೆಯಲ್ಲಿ ಮಲಗಿರುವಾಗ ಬೆಳಗಿನ ಜಾವ ಮತ್ತು ಮಲಗಿರುವಾಗ ಘಟನೆ ನಡೆದಿರುವುದರಿಂದ ತಪ್ಪಿಸಿಕೊಳ್ಳಲು ಸಾದ್ಯವಾಗದ ಕಾರಣ ಹೆಚ್ಚಿನ ಹಾನಿಯಾಗಿದೆ. ಎಲ್ಲಾ ಗಾಯಾಳುಗಳನ್ನು ತೋರಣಗಲ್ಲು ಸಂಜೀವಿನಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಲಾಗಿದೆ.

ಸ್ಥಳಕ್ಕೆ ಅಗ್ನಿಶಾಮಕದಳದ ಸಿಬ್ಬಂದಿ, ಹೊಸಪೇಟೆ ಗ್ರಾಮೀಣ ಪೊಲೀಸರು ಸ್ಥಳಕ್ಕೆ ಭೇಟಿ ಪರಿಶೀಲನೆ ಮಾಡಿದ್ದಾರೆ.

# ಸೆ.29 ರಂದು ಜಿಲ್ಲಾಮಟ್ಟದ ಜನಸ್ಪಂದನ; ಸ್ಥಳದಲ್ಲೇ ಸಮಸ್ಯೆಗೆ ಪರಿಹಾರ-ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.27-ಇದೇ ಸೆ.29 ರಂದು ನಗರದ ನೂತನ ಜಿಲ್ಲಾಡಳಿತ ಭವನದ ಆವರಣದಲ್ಲಿ ವಸತಿ, ವಕ್ಫ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಜಿಲ್ಲಾಮಟ್ಟದ ಜನಸ್ಪಂದನ ಕಾರ್ಯಕ್ರಮ ನಡೆಸಲಿದ್ದಾರೆ. ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ಗುರುವಾರ, ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ 'ಜನಸ್ಪಂದನ' ಕಾರ್ಯಕ್ರಮ ಆಯೋಜನೆ ಕುರಿತು ಪೂರ್ವಭಾವಿ ಸಭೆ ನಡೆಸಿ, ಕಾರ್ಯಕ್ರಮದ ಅಚ್ಚುಕಟ್ಟು ಆಯೋಜನೆ ಹಾಗೂ ಅದನ್ನು ಯಶಸ್ವಿಗೊಳಿಸುವ ಬಗ್ಗೆ ಅವರು ಚರ್ಚಿಸಿದರು.

ಸಾರ್ವಜನಿಕರ ಕುಂದು-ಕೊರತೆಗಳನ್ನು ಆಲಿಸಿ ಪರಿಹರಿಸಲು ಜಿಲ್ಲಾ ಕೇಂದ್ರದಲ್ಲಿ ಸೆ.29 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಆವರಣದಲ್ಲಿ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಕಾರ್ಯಕ್ರಮವನ್ನು ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸಬೇಕು. ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಜರಿದ್ದು, ವಿಶೇಷ ಆಸಕ್ತಿ ವಹಿಸಿ ಕುಂದು ಕೊರತೆ ನಿವಾರಣೆಗೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಸರ್ಕಾರದ ಆಡಳಿತವನ್ನು ಸಾರ್ವಜನಿಕರ ಮನೆಬಾಗಿಲಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಅಧ್ಯಕ್ಷತೆ ವಹಿಸಲಿದ್ದು, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಸ್ಥಳದಲ್ಲಿಯೇ ಪರಿಹಾರ ಸೂಚಿಸಲಿದ್ದಾರೆ. ಜಿಲ್ಲೆಯ ಎಲ್ಲಾ ಶಾಸಕರು ಹಾಗೂ ಜನಪ್ರತಿನಿಧಿಗಳು ಸಹ ಭಾಗವಹಿಸಲಿದ್ದಾರೆ ಎಂದು ಹೇಳಿದರು.



ವಿವಿಧ ಇಲಾಖೆಗಳ ಅರ್ಜಿ ಸ್ವೀಕಾರಕ್ಕೆ ಪ್ರತ್ಯೇಕ ಕೌಂಟರುಗಳನ್ನು ಸ್ಥಾಪಿಸಿ, ಅದಕ್ಕೆ ಅಗತ್ಯವಿರುವ ಎಲ್ಲ ಉಪಕರಣಗಳೂ ಹಾಗೂ ಸಿಬ್ಬಂದಿ ನಿಯೋಜಿಸಬೇಕು. ಕಳೆದ ಬಾರಿಯ ಜನಸ್ಪಂದನದಲ್ಲಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ ಮಾಹಿತಿ ಇಟ್ಟುಕೊಂಡಿರಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜನಸ್ಪಂದನ ಕಾರ್ಯಕ್ರಮಕ್ಕೆ ಆಗಮಿಸುವ ವಿಶೇಷಚೇತನರು, ಹಿರಿಯನಾಗರಿಕರಿಗೆ ವಿಶೇಷ ವ್ಯವಸ್ಥೆ ಮಾಡಬೇಕು. ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳಬೇಕು. ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮುಖ್ಯವಾಗಿ ಹಲವು ದಿನಗಳ ಬಳಿಕ ಜಿಲ್ಲಾಮಟ್ಟದ ಜನಸ್ಪಂದನ ಕಾರ್ಯಕ್ರಮವನ್ನು ನಡೆಸಲಿದ್ದಾರೆ. ಕುಂದುಕೊರತೆಗಳನ್ನು ಸರಿಯಾಗಿ ಪರಿಹರಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಎಲ್ಲಾ ಇಲಾಖೆಗಳು ಎಲ್ಲಾ ಮಾಹಿತಿಯೊಂದಿಗೆ ಸಿದ್ಧರಾಗಿರಬೇಕು ಎಂದರು.

**ಜಿಲ್ಲಾ ಉಸ್ತುವಾರಿ ಸಚಿವರಿಂದ ಶಂಕುಸ್ಥಾಪನೆ:**

ಅಂದು ಜಿಲ್ಲಾ ಉಸ್ತುವಾರಿ ಸಚಿವರು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರು ತಮ್ಮ ಯೋಜನಾ ವಿವರಗಳು ಮತ್ತು ಇತರ ಅಗತ್ಯ ಮಾಹಿತಿಯನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಕೃಷಿ, ತೋಟಗಾರಿಕೆ, ಕೊಳಗೇರಿ ಅಭಿವೃದ್ಧಿ ಮಂಡಳಿ ಇಲಾಖೆಗಳಿಂದ ವಿವಿಧ ಸೌಲಭ್ಯಗಳು, ಉಪಕರಣಗಳು ವಿತರಣೆ ಇದ್ದಲ್ಲಿಯೂ ಸಹ ಮಾಹಿತಿ ನೀಡಬೇಕು ಎಂದರು.

*ಜಿಲ್ಲಾ ಕೆಡಿಪಿ ಸಭೆ:*

ಜಿಲ್ಲಾಮಟ್ಟದ 'ಜನಸ್ಪಂದನ' ಕಾರ್ಯಕ್ರಮದ ಬಳಿಕ, ಜಿಲ್ಲಾ ಉಸ್ತುವಾರಿ ಸಚಿವರು ಅಂದು (ಸೆ.29 ರಂದು) ಮಧ್ಯಾಹ್ನ 02 ಗಂಟೆಗೆ ನಗರದ ಜಿಲ್ಲಾ ಪಂಚಾಯತ್‌ನ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಮೊದಲ ತ್ರೈಮಾಸಿಕ ಸಭೆ ನಡೆಸಲಿದ್ದಾರೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

*ಸಾರ್ವಜನಿಕರು ಭಾಗವಹಿಸಿ:*

ಸೆ.29 ರಂದು ನಗರದ ನೂತನ ಜಿಲ್ಲಾಡಳಿತ ಭವನದ ಆವರಣದಲ್ಲಿ ನಡೆಯುವ ಜಿಲ್ಲಾ ಮಟ್ಟದ 'ಜನಸ್ಪಂದನ' ಕಾರ್ಯಕ್ರಮದಲ್ಲಿ ಕುಂದು-ಕೊರತೆಗಳಿರುವ ಸಾರ್ವಜನಿಕರು ಭಾಗವಹಿಸಿ, ತಮ್ಮ ಅಹವಾಲುಗಳ ಇತ್ಯರ್ಥಪಡಿಸಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಜಿಪಂ ಉಪಕಾರ್ಯದರ್ಶಿ ಶಶಿಕಾಂತ ಶಿವಪೂರೆ, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ

## ಅಲೆಮಾರಿಗಳ ಪ್ರತ್ಯೇಕ ಮೀಸಲಾತಿಗಾಗಿ ದೆಹಲಿ ಚಲೋ




**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ, ಸೆ.26: ರಾಜ್ಯದಲ್ಲಿನ ಅಲೆಮಾರಿಗಳಿಗೆ ಪರಿಶಿಷ್ಟ ಜಾತಿ ಮೀಸಲಾತಿಯಲ್ಲಿ ಶೆ.1 ರಷ್ಟು ಪ್ರತ್ಯೇಕ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಎಐಸಿಸಿ ನಾಯಕ, ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಒತ್ತಾಯ ಮಾಡಲು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಅ.2 ರಂದು ದೆಹಲಿ ಚಲೋ ಹಮ್ಮಿಕೊಂಡಿದೆ.

ಒಕ್ಕೂಟದ ಜಿಲ್ಲಾ ಅಧ್ಯಕ್ಷ ಶಿವಕುಮಾರ್ ನಗರದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿ. ರಾಜ್ಯದ ಅಲೆಮಾರಿ ಜನತೆಗೆ ಶೇ 1 ರಷ್ಟು ಮೀಸಲಾತಿ ನೀಡಬೇಕೆಂದು ಜಸ್ಟಿಸ್ ನಾಗಮೋಹನ್ ದಾಸ್ ಆಯೋಗದ ವರದಿ ಹೇಳಿತ್ತು.

ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ಸಭೆಯಲ್ಲಿ ಇದನ್ನು ಒಪ್ಪಿಲ್ಲವೆಂದು ಶೇ 5 ಮೀಸಲಾತಿಯ ಇತರ ಗುಂಪಿನಲ್ಲಿ ನಮ್ಮನ್ನು ಸೇರಿಸಿರುವುದು ಸರಿಯಲ್ಲ.

ಅದಕ್ಕಾಗಿ ರಾಜ್ಯ ಸರ್ಕಾರಕ್ಕೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರನ್ನು ಅ.2 ರಂದು ದೆಹಲಿಗೆ 1000 ಅಲೆಮಾರಿಗಳು ತೆರಳಿ ಮನವಿ ಮಾಡಲಿದೆ. ಇದಕ್ಕೆ ಸ್ಪಂದಿಸದಿದ್ದರೆ ಚುನಾವಣೆ ಸಂದರ್ಭದಲ್ಲಿ ನಾವು ಪಾಠಕಲಿಸಲಿದ್ದೇವೆ.

ನಮಗಾಗಿರುವ ಅನ್ಯಾದ ವಿರುದ್ಧ ಕೋರ್ಟ್ ಮೊರೆ ಹೋಗಿದೆ. ಅಲ್ಲಿ ನಮಗೆ ನ್ಯಾಯ ಸಿಕ್ಕೇ ಸಿಕ್ಕುತ್ತದೆ ಎಂದರು.

ರಾಮಾಂಜಿನಿ, ಜಿ.ಬಾಬು, ಧನುಶ್, ಸತ್ಯಪ್ಪ, ಸುಬ್ಬಣ್ಣ, ಮಹೇಶ್, ಅಜ್ಜಪ್ಪ, ಮೊದಲಾದವರು ಇದ್ದರು.

## ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದು ಮೊಬೈಲ್ ಸಿಮ್ ಬೇಕು: ಸಮಾಜ ಕಲ್ಯಾಣ ಇಲಾಖೆ



**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.26: ಮೊಬೈಲ್‌ಗಳಿಂದ ಮಕ್ಕಳು ಹಾಳಾಗುತ್ತಿದ್ದಾರೆಂಬ ಮಾತುಗಳ ನಡುವೆ. ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ಬೇಕೆಂದರೆ ಪ್ರತಿಯೊಬ್ಬರೂ ಒಂದು ಮೊಬೈಲ್ ಸಿಮ್ ಬೇಕು ಎನ್ನುತ್ತದೆ ಸಮಾಜ ಕಲ್ಯಾಣ ಇಲಾಖೆ.

ವಿದ್ಯಾಭ್ಯಾಸ ಮಾಡುವ ಮಕ್ಕಳು ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಿದರೆ. ಸಮಸಜ ಕಲ್ಯಾಣ ಇಲಾಖೆಯಿಂದ ಹಣ ಪಡೆಯಬೇಕಾದರೆ ಅರ್ಜಿ ಸಲ್ಲಿಸುವಾಗಲೇ ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದು ಮೊಬೈಲ್ ನಂಬರ್ ಹೊಂದಿರಬೇಕಂತೆ. ಕಾರಣ ಒಬ್ಬೊಬ್ಬ ವಿದ್ಯಾರ್ಥಿಗೂ ಓಟಿಪಿ ಕಳಿಸಲಾಗುತ್ತದಂತೆ. ಅದಕ್ಕಾಗಿ ಪ್ರತಿ ವಿದ್ಯಾರ್ಥಿಯೂ ಒಂದು ಮೊಬೈಲ್ ನಂಬರ್ ಸಿಮ್ ಪಡೆದಿರಲೇ ಬೇಕು. ಅಷ್ಟೇ ಅಲ್ಲ ಅದು ಬಳಕೆಯಲ್ಲಿರಬೇಕು ಎಂದರೆ ಮೊಬೈಲ್ ಸಹ ಬೇಕೇ ಬೇಕು.

ಒಂದೇ ಪೋಷಕರ ಮೂರು ಜನ ಮಕ್ಕಳಿದ್ದರೂ ಒಂದೇ ಮೊಬೈಲ್ ನಂಬರ್ ಕೊಡಲು ಬರಲ್ವಂತೆ. ಪ್ರತ್ಯೇಕ ನಂಬರ್ ಬೇಕು ಎಂಬುದು ಇಲಾಖೆಯ ಅಧಿಕಾರಿಗಳ ವಾದ.

ವಿದ್ಯಾರ್ಥಿಗಳು ತಮ್ಮ ತಂದೆ-ಯ ಹತ್ತಿರ ಒಂದೇ ಮೋಬೈಲ್ ನಂಬರಿನ ಓಟಿಪಿ ಕೊಟ್ಟು ನಂತರ ಇನ್ನೂ ಉಳಿದ 2/3 ವಿದ್ಯಾಬ್ಯಾಸ ಮಾಡುವ

ಮಕ್ಕಳಿದ್ದಾರೆ ಆ ಮಕ್ಕಳಿಗೆ ಸಹ ನನ್ನಲ್ಲಿ ಇರುವ ಒಂದೇ ಮೊಬೈಲ್ ನಂಬರ್ ಇದು ಅದಕ್ಕೆ ಆನ್ಲೈನ್ ಅರ್ಜಿ ಹಾಕಿ ಎಂದು ಕೇಳಿದರೆ ಇಲ್ಲ ಬರುವುದಿಲ್ಲ ಒಂದೇ ಮಗುವಿಗೆ ಮಾತ್ರ ಬರುತ್ತದೆ ಇನ್ನು ಉಳಿದ ಎಷ್ಟು ಮಕ್ಕಳಿದ್ದಾರೆ ಆ ಮಕ್ಕಳಿಗೆ ಪ್ರತ್ಯೇಕವಾಗಿ ಹೊಸ ಸಿಮ್ ಕಾರ್ಡ್ ತೆಗೆದುಕೊಂಡು ಅದಕ್ಕೆ ರೀಚಾರ್ಜ್ ಮಾಡಿಕೊಂಡು ಅನ್ ಲೈನ್ ಅರ್ಜಿಗಳನ್ನು

ಹಾಕುವ ಪದ್ಧತಿ ಮಾಡಿದೆ. ಇದು ಸರಿಯಾದ ಕ್ರಮ ಅಲ್ಲವೆಂದು ಇಂದು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿ. ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ದಲ್ಲಿಸಿದೆ.

ಕೂಡಲೇ ದಲಿತ ವಿದ್ಯಾರ್ಥಿಗಳ ತಂದೆ ತಾಯಿ ಪಾಲಕರಲ್ಲಿ ಎಷ್ಟು ಮಕ್ಕಳು ಇರುತ್ತಾರೆ ಅಷ್ಟು ಮಕ್ಕಳಿಗೆ ಒಂದೇ ಮೋಬೈಲ್ ಗೆ ಅನ್ ಲೈನ್ ಅರ್ಜಿಯನ್ನು ಹಾಕಲಿಕ್ಕೆ ಓಟಿಪಿ ಜೋಡಣೆ ಮಾಡಿ ದಲಿತ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದೆಂದು ವೇದಿಕೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಶಂಕರ್ ನಂದಿಹಾಳ , ಸಿ ಹನುಮೇಶ್ ಕಟ್ಟಿಮನಿ , ಸಿ ಶಿವಕುಮಾರ್, ರಾಜ್ ತೋಲಮಾಮಿಡಿ,

ಮಾನಯ್ಯ ಬಿ ಗೋನಾಳ ಛಲವಾದಿ ಲೋಕೇಶ್ ಕಪಗಲ್, ಮಲ್ಲಿಕಾರ್ಜುನ ಬಿ ಗೋನಾಳ್, ಡಿ ರಾಮಕೃಷ್ಣ, ರಮೇಶ್ ಇಬ್ರಾಂಪುರ ಹೇಳಿದ್ದಾರೆ.

## ಆಂತರಿಕ ಕಿತ್ತಾಟಕ್ಕೆ ತೇಪೆ ಹಚ್ಚಲು ಜಾತಿಗಣತಿ: ಜೋಶಿ ಟೀಕೆ

**ಮಲ್ಲಮ್ಮ ನುಡಿ ವಾರ್ತೆ**



ಬೆಂಗಳೂರು, ಸೆ. 27-ಕಾಂಗ್ರೆಸ್ ಪಕ್ಷದಲ್ಲಿನ ಒಳಜಗಳ ಮುಚ್ಚಿಕೊಳ್ಳಲು ಹಾಗೂ ಕಾಂಗ್ರೆಸ್‌ನಲ್ಲಿ ನಡೆಯಲಿರುವ ಕ್ರಾಂತಿಯನ್ನು ಮುಂದೆ ಹಾಕಲು ಜಾತಿಗಣತಿಯನ್ನು ನಡೆಸಲಾಗುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ದೂರಿದ್ದಾರೆ.

ಬೀದರ್‌ನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನವೆಂಬರ್‌ನಲ್ಲಿ ನಾನು ಮುಖ್ಯಮಂತ್ರಿ ಆಗಿಯೇ ಆಗುತ್ತೇನೆ ಎಂದು ಹೇಳುತ್ತಿದ್ದಾರೆ. ಅದೇ ರೀತಿ ಮಾಜಿ ಸಚಿವ ರಾಜಣ್ಣ ಸಹ ಕಾಂಗ್ರೆಸ್‌ನಲ್ಲಿ ಕ್ರಾಂತಿ ಆಗುತ್ತದೆ ಎಂದು ಹೇಳಿದ್ದರು. ಹೀಗಾಗಿ ಇದನ್ನೆಲ್ಲಾ ಮುಂದಕ್ಕೆ ಹಾಕಲು ಮುಖ್ಯಮಂತ್ರಿ ಸಿದ್ದರಾಮಯ್ಯ ಜಾತಿ ಗಣತಿ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದವರ ವಿರೋಧ ಮಾಡುತ್ತಲೇ ಬಂದಿದೆ. ನೆಹರು ರವರಿಂದ ಹಿಡಿದು ರಾಜೀವ್‌ಗಾಂಧಿಯವರಿಗೂ ಎಲ್ಲಾ ಕಾಂಗ್ರೆಸ್ ನೇತಾರರು ಮೀಸಲಾತಿಗೆ ವಿರೋಧ ಮಾಡಿದ್ದರು. ಈಗ ನೋಡಿದರೆ ಸಿದ್ದರಾಮಯ್ಯನವರು ಜಾತಿ ಗಣತಿಯ ನಾಟಕ ನಡೆಸಿದ್ದಾರೆ ಎಂದು ಅವರು ಕಿಡಿಕಾರಿದರು.

ಸಂಸತ್‌ನಲ್ಲೇ ಕಾಂಗ್ರೆಸ್ ನಾಯಕರುಗಳು ಮೀಸಲಾತಿಗೆ ವಿರೋಧ ಮಾಡಿದ್ದೂ ಇದೆ. ಅಲ್ಲಿ ವಿರೋಧ ಮಾಡುತ್ತಾರೆ, ಇಲ್ಲಿ ನೋಡಿದರೆ ನಾಟಕವಾಡುತ್ತಾರೆ ಎಂದು ಟೀಕಿಸಿದರು. ಧರ್ಮಾಧಾರಿತ ಮೀಸಲಾತಿಯನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿದೆ. ಹಾಗಾಗಿ ಕ್ರಿಶ್ಚಿಯನ್ ಬ್ರಾಹ್ಮಣ, ಲಿಂಗಾಯತ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್, ಮುಸಲ್ಮಾನ ಕ್ರಿಶ್ಚಿಯನ್ ಸೃಷ್ಟಿ ನೂರಕ್ಕೆ ನೂರರಷ್ಟು ರಾಹುಲ್‌ಗಾಂಧಿ, ಸೋನಿಯಾಗಾಂಧಿ ಮೆಚ್ಚಿಸಲು ಮಾಡಿರುವ ಪ್ರಕ್ರಿಯೆ ಎಂದು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದರು.

ರಾಜ್ಯ ಸರ್ಕಾರದಲ್ಲಿನ ಸಮಸ್ಯೆಗಳ ಬಗ್ಗೆ ಜನರ ಗಮನವನ್ನು ಬೇರೆಡೆ ಸೆಳೆಯಲು ಈ ಜಾತಿ ಗಣತಿ ನಡೆದಿದೆ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ರಸ್ತೆಗಳು, ಆರ್ಥಿಕ ಸ್ಥಿತಿ ಎಲ್ಲವೂ ಹದಗೆಟ್ಟು ಹೋಗಿದೆ. ಗುಂಡಿ ಮುಚ್ಚಲಿಕ್ಕೂ ಸರ್ಕಾರದ ಬಳಿ ಹಣ ಇರದ ಪರಿಸ್ಥಿತಿಗೆ ಬಂದು ತಲುಪಿದೆ. ಇದೆಲ್ಲಾ ಮುಚ್ಚಿಕೊಳ್ಳಲು ಜಾತಿ ಗಣತಿ ವಿಚಾರವನ್ನು ಕಾಂಗ್ರೆಸ್ ಸರ್ಕಾರ ಮುಂದು ಮಾಡಿದೆ ಎಂದು ಟೀಕಿಸಿದರು. ಕೇಂದ್ರ ಸರ್ಕಾರವೇ ಜನಗಣತಿ ನಡೆಸಲು ತಯಾರಿ ನಡೆಸಿದೆ. ಈಗಾಗಲೇ ತರಬೇತಿ ಕಾರ್ಯಕ್ರಮಗಳು ನಡೆದಿದೆ. ಇಡೀ ದೇಶಾದ್ಯಂತ ತರಬೇತಿ ಕೊಡಬೇಕಾಗುತ್ತದೆ. ಈ ಜನಗಣತಿಯನ್ನು ವ್ಯವಸ್ಥಿತವಾಗಿ ಮಾಡಬೇಕಾಗುತ್ತದೆ ಎಂದು ಅವರು ಹೇಳಿದರು. ರಾಜ್ಯ ಸರ್ಕಾರ ಯಾವುದೇ ರೀತಿಯ ಸರಿಯಾದ ಸಿದ್ಧತೆ ಮಾಡಿಕೊಳ್ಳದೆ ಜಾತಿ ಗಣತಿ ಮಾಡಲು ಹೊರಟಿದೆ. ಜನರು ಇದರ ಬಗ್ಗೆ ಉತ್ಸುಕರಾಗಿಲ್ಲ. ಜನರಿಗೆ ಇದು ಬೋಗಸ್ ಎಂಬುದು ಗೊತ್ತಾಗಿದೆ ಎಂದು ಅವರು ಹೇಳಿದರು.


### ಸಂಡೂರು, ಹಗರಿಬೊಮ್ಮನಹಳ್ಳಿ ನ್ಯಾಯಾಲಯಗಳಲ್ಲಿ ಇ-ಸೇವಾ ಕೇಂದ್ರ, ಹೆಲ್ಪ್ ಡೆಸ್ಕ್ ಆರಂಭ

## ನ್ಯಾಯಾಲಯದ ಸೇವೆಗಳನ್ನು ಇ-ಸೇವಾ ಕೇಂದ್ರಗಳ ಮೂಲಕ ಸುಲಭವಾಗಿ ಪಡೆದುಕೊಳ್ಳಿ: ನ್ಯಾ.ಕೆ.ಜಿ.ಶಾಂತಿ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.25-ಇ-ಕೋರ್ಟ್ಸ್ ಮಿಷನ್ ಮೋಡ್ ಯೋಜನೆಯಡಿ ನಾಗರಿಕ-ಕೇಂದ್ರಿತ ಸೇವೆಗಳನ್ನು ಒದಗಿಸುವಲ್ಲಿ ಇ-ಸೇವಾ ಕೇಂದ್ರಗಳ ಸ್ಥಾಪನೆಯು ಮಹತ್ವದ ಹೆಜ್ಜೆಯಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು.

ಮಂಗಳವಾರ, ಸಂಡೂರು ನ್ಯಾಯಾಲಯ ಮತ್ತು ಹಗರಿಬೊಮ್ಮನಹಳ್ಳಿ ನ್ಯಾಯಾಲಯದಲ್ಲಿ ಇ-ಸೇವಾ ಕೇಂದ್ರ,



ಹೆಲ್ಪ್-ಡೆಸ್ಕ್, ವಿ.ಸಿ ಕ್ಯಾಬಿನ್‌ಗಳನ್ನು ವರ್ಚುವಲ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಇ-ಸೇವಾ ಕೇಂದ್ರಗಳ ಮೂಲಕ ದಾವೆದಾರರು, ವಕೀಲರು ಮತ್ತು ಸಾರ್ವಜನಿಕರು ಈಗ ಪ್ರಕರಣದ ಸ್ಥಿತಿಯನ್ನು ಸುಲಭವಾಗಿ ನೋಡಿ ಪ್ರಮಾಣೀಕೃತ ಪ್ರತಿಗಳನ್ನು ಪಡೆಯಬಹುದು. ಆನ್‌ಲೈನ್ ಪಾವತಿ ಮತ್ತು ಎಲೆಕ್ಟ್ರಾನಿಕ್ ರೂಪದಲ್ಲಿ ಪ್ರಕರಣಗಳನ್ನು ದಾಖಲಿಸಬಹುದು ಹಾಗೂ ವಿವಿಧ ಡಿಜಿಟಲ್ ಸೌಲಭ್ಯಗಳನ್ನು ತೊಂದರೆ-ಮುಕ್ತ ರೀತಿಯಲ್ಲಿ ಪಡೆಯಬಹುದು ಎಂದು ತಿಳಿಸಿದರು.

ಇ-ಸೇವಾ ಕೇಂದ್ರಗಳು ನ್ಯಾಯಾಲಯದ ಸೇವೆಗಳನ್ನು ಹೆಚ್ಚು ಸುಲಭವಾಗಿ, ಕೈಗಟುಕುವ ಮತ್ತು ಬಳಕೆದಾರ ಸ್ನೇಹಿಯನ್ನಾಗಿ ಮಾಡುವ ಮೂಲಕ ದಾವೆ ಹೂಡುವವರಿಗೆ, ವಿಶೇಷವಾಗಿ ಗ್ರಾಮೀಣ ಪ್ರದೇಶದ ಜನರಿಗೆ ಪ್ರಯೋಜನವನ್ನು ನೀಡುತ್ತವೆ ಎಂದರು.

ಇತ್ತೀಚಿನ ದಿನಗಳಲ್ಲಿ ಕಂಪ್ಯೂಟರ್ ಜ್ಞಾನ ಇಲ್ಲದಿದ್ದರೆ ಅನಕ್ಷರಸ್ಥ ಎಂದು ಕರೆಯಲಾಗುತ್ತಿದ್ದು, ವಕೀಲರು ಕಂಪ್ಯೂಟರ್ ಬಗ್ಗೆ ಜ್ಞಾನವನ್ನು ಹೊಂದಬೇಕು. ಮಾನವನ ಎಲ್ಲಾ ಕೆಲಸ ಕಾರ್ಯಗಳಿಗೆ ಡಿಜಿಟಲ್ ಮೆರಗು ಬಂದಿದ್ದರಿಂದ ಕಂಪ್ಯೂಟರ್ ಜ್ಞಾನದ ಅವಶ್ಯಕತೆ ಎಂದಿಗಿಂತಲೂ ಈಗ ಹೆಚ್ಚಾಗಿ ಬೇಕಾಗಿದೆ ಎಂದು ಹೇಳಿದರು.

ವಕೀಲರು ತಮ್ಮ ಕಕ್ಷಿದಾರರಿಗೆ ಯಾವ ರೀತಿ ಇ-ಸೇವಾ ಕೇಂದ್ರದ ಪ್ರಯೋಜನ ಪಡೆಯಬಹುದು ಎಂಬುದನ್ನು ತಿಳಿಸಬೇಕು ಮತ್ತು ನ್ಯಾಯಾಲಯದ ತಂತ್ರಜ್ಞರಿಂದ ಎಲ್ಲಾ ವಕೀಲರು ಹಾಗೂ ಸಿಬ್ಬಂದಿ ವರ್ಗದವರು ಮಾಹಿತಿ ಪಡೆದು ಇ-ಸೇವಾ ಕೇಂದ್ರಗಳ ಉಪಯೋಗ ಪಡೆಯಬೇಕು. ತ್ವರಿತ ಮತ್ತು ಪಾರದರ್ಶಕ ನ್ಯಾಯ ವಿತರಣೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ತಂತ್ರಜ್ಞಾನ-ಸಕ್ರಿಯಗೊಳಿಸಿದ ಸೇವೆಗಳ ಮಹತ್ವವನ್ನು ನ್ಯಾಯಾಧೀಶರು ವಿವರಿಸಿದರು.

ಈ ಸಂದರ್ಭದಲ್ಲಿ ಹಗರಿಬೊಮ್ಮನಹಳ್ಳಿ ಮತ್ತು ಸಂಡೂರು ನ್ಯಾಯಾಲಯದ ನ್ಯಾಯಾಂಗ ಅಧಿಕಾರಿಗಳು, ವಕೀಲರ ಸಂಘದ ಸದಸ್ಯರು, ನ್ಯಾಯಾಲಯದ ಸಿಬ್ಬಂದಿ ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

## ಹೊರ ಗುತ್ತಿಗೆಯನ್ನು ರದ್ದುಗೊಳಿಸಲು ಆಗ್ರಹಿಸಿ ಧರಣಿ




**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ, ಸೆ.26: ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘ, ವಿಮ್ಸ್ ಗುತ್ತಿಗೆ ನೌಕರರ ಸಂಘ, ಕೆಪಿಟಿಸಿಎಲ್ ವಿದ್ಯುತ್ ವಿತರಣಾ ಕಾರ್ಮಿಕರ ಸಂಘ, ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿಗಳ ಗುತ್ತಿಗೆ ನೌಕರರ ಸಂಘ ಹಾಗೂ ಸ್ಪಾಂಜ್ ಐರನ್ ಕಾರ್ಮಿಕರ ಸಂಘಗಳಿಂದ ಇಂದು ಜಿಲ್ಲಾಧಿಕಾರಿ ಕಛೇರಿ ಮುಂದೆ ಹೊರಗುತ್ತಿಗೆಯನ್ನು ರದ್ದುಗೊಳಿಸಿ, ಖಾಯಂ ನೇಮಕಾತಿ ಮಾಡಬೇಕು, ಈಗಾಗಲೇ ನಿರ್ಧರಿಸಿದಂತೆ ವಿವಿದೋದ್ದೇಶ ಕಾರ್ಮಿಕರ ಸಹಕಾರಿ ಸಂಘ ರಚಿಸಲು ಕ್ರಮ ಕೈಗೊಳ್ಳಬೇಕು. ಪರಿಷ್ಕೃತ ಕನಿಷ್ಠ ವೇತನ ಹೆಚ್ಚಳ ಜಾರಿಗೆ ತರಬೇಕು, ಬಳ್ಳಾರಿಯಲ್ಲಿ ಇಎಸ್‌ಐ ಆಸ್ಪತ್ರೆ ಪ್ರಾರಂಭಿಸಬೇಕು ಎಂದು ಧರಣಿ ಹಮ್ಮಿಕೊಳ್ಳಲಾಗಿತ್ತು.

ಎಐಯುಟಿಯುಸಿ ರಾಜ್ಯ ಅಧ್ಯಕ್ಷ ಕಾ.ಕೆ.ಸೋಮಶೇಖರ್ ಮಾತನಾಡಿ " ಗುತ್ತಿಗೆ ಕಾರ್ಮಿಕರದು ಅತ್ಯಂತ ಸಂಕಷ್ಟದ ಬದುಕಾಗಿದೆ. ಬಹುತೇಕ ಸರ್ಕಾರಿ ಇಲಾಖೆಗಳು, ಕಾರ್ಖಾನೆಗಳು ಗುತ್ತಿಗೆ ಕಾರ್ಮಿಕರ ಶ್ರಮದ ಮೇಲೆಯೇ ಅವಲಂಬಿತವಾಗಿವೆ. ಆದರೂ ಗುತ್ತಿಗೆ ಕಾರ್ಮಿಕರ ಶ್ರಮಕ್ಕೆ ಕವಡೆ ಕಾಸಿನ ಬೆಲೆಯಿಲ್ಲ. ಬಿಜೆಪಿ ತಂದಿರುವ 4 ಲೇಬರ್ ಕೋಡ್‌ಗಳು ಕಾರ್ಮಿಕರನ್ನು ಸಂಪೂರ್ಣವಾಗಿ ಗುಲಾಮರನ್ನಾಗಿಸುತ್ತದೆ. ಸರ್ಕಾರಿ ಇಲಾಖೆಗಳಲ್ಲಿ ಗುತ್ತಿಗೆ ಹೊರಗುತ್ತಿಗೆ ಪದ್ಧತಿ ಅಂತೂ ಅತ್ಯಂತ ನಾಚಿಕೆಗೇಡಿನ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆ ಹೊರಗುತ್ತಿಗೆ ಕಾರ್ಮಿಕರು ಹೆಚ್ಚೆಚ್ಚು ಸಂಘಟಿತರಾಗಬೇಕು, ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಧ್ವನಿಯೆತ್ತಬೇಕು. ಮಾಲೀಕರ ಹಾಗೂ ಸರ್ಕಾರದ ಶೋಷಣೆಯನ್ನು ಕೊನೆಗಾಣಿಸಬೇಕು " ಎಂದರು.

ಜಿಲ್ಲಾ ಅಧ್ಯಕ್ಷ ಎ.ದೇವದಾಸ್, ಜಿಲ್ಲಾ ಕಾರ್ಯದರ್ಶಿ ಡಾ.ಪ್ರಮೋದ್, ಉಪಾಧ್ಯಕ್ಷರಾದ ಆರ್ ಸೋಮಶೇಖರ್ ಗೌಡ, ಎ.ಶಾಂತಾ, ಜಂಟಿ ಕಾರ್ಯದರ್ಶಿ ಸುರೇಶ್ ,ವಿವಿಧ ಯುನಿಯನ್ ಮುಖಂಡರುಗಳು ಮಾತನಾಡಿದರು.

## ರೈತರಿಗೆ ಕೋಳಿ ಸಾಕಾಣಿಕೆ ತರಬೇತಿ

ಕಲಬುರಗಿ,ಸೆ.27-ನಗರಹೊರವಲಯದ ಕೋಟನೂರ (ಡಿ) ಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಐಎಟಿ ಸಹಯೋಗದಲ್ಲಿ 2025-26ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೈತರಿಗೆ ಕೋಳಿ ಸಾಕಾಣಿಕೆ ಲಾಭದಾಯಕ ಉದ್ಯಮಕ್ಕೆ ದಾರಿ ಕುರಿತು ಮೂರು ದಿನಗಳ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸುಮಾರು 100 ಜನ ರೈತರಿಗೆ ಊಟ, ವಸತಿಯೊಂದಿಗೆ ಕೋಳಿ ಸಾಕಾಣಿಕೆ ತರಬೇತಿ ನೀಡಲಾಯಿತು. ತರಬೇತಿ ಅವಧಿ ಮುಗಿದ ನಂತರ ರೈತರಿಗೆ ಕೃಷಿ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕ ಅನಿಲಕುಮಾರ ಅವರು ಪ್ರಮಾಣ ಪತ್ರಗಳನ್ನು ವಿತರಿಸಿದರು. ಕೃಷಿ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

### ಜಿಲ್ಲಾ ಮಟ್ಟದ ಕಾಣೆಯಾದ ಮಕ್ಕಳ ಪತ್ತೆ ಹಚ್ಚಲು ವಿಶೇಷ ಕಾರ್ಯಪಡೆಯ ಸಮಿತಿ ಸಭೆ

## ಕಾಣೆಯಾದ ಮಕ್ಕಳ ಪತ್ತೆಗೆ ವಿಶೇಷ ತಂಡ ರಚಿಸಿ: ಎಎಸ್‌ಪಿ ನವೀನ್ ಕುಮಾರ್

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.26-ಜಿಲ್ಲೆಯಲ್ಲಿ 2021 ರಿಂದ ಇಲ್ಲಿಯವರೆಗೆ 20 ಮಕ್ಕಳು ಕಾಣೆಯಾಗಿದ್ದು, ಪತ್ತೆ ಹಚ್ಚಲು ವಿಶೇಷ ತಂಡ ರಚಿಸಿ ಮಕ್ಕಳ ಮನೆಗೆ ಭೇಟಿ ನೀಡಿ ಪೋಷಕರೊಂದಿಗೆ ಚರ್ಚಿಸಿ ಮಕ್ಕಳ ಪತ್ತೆಹಚ್ಚುವಿಕೆಗೆ ಸಂಬಂಧಿಸಿದ ಪೊಲೀಸ್ ಠಾಣೆಯ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎನ್.ನವೀನ್ ಕುಮಾರ್ ಅವರು ಹೇಳಿದರು.

ನಗರದ ಎಸ್‌ಪಿ ಕಚೇರಿಯ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಕಾಣೆಯಾದ ಮಕ್ಕಳ ಪತ್ತೆ ಹಚ್ಚಲು ವಿಶೇಷ ಕಾರ್ಯಪಡೆಯ ಸಮಿತಿಯ ಮಾಸಿಕ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಅವರು ಮಾತನಾಡಿ, ಜಿಲ್ಲೆಯಲ್ಲಿ ಕಾಣೆಯಾದ ಮಕ್ಕಳಿಗೆ ಸಂಬಂಧಿಸಿದಂತೆ ಎಲ್ಲಾ ಶಾಲೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಹಾಗೂ ಪೋಷಕರನ್ನು ಕರೆಯಿಸಿ ಅವರಿಗೆ ಆಪ್ತ ಸಮಾಲೋಚನೆ ನಡೆಸಬೇಕು. ಎಲ್ಲಾ ಶಾಲೆಗಳಲ್ಲಿ ಸಲಹಾ ಪೆಟ್ಟಿಗೆಯನ್ನು ಹಾಕಬೇಕು. ಪ್ಯಾರಾಲೀಗಲ್ ವಾಲೆಂಟಿಯರ್ಸ್‌ರವರ ಸಹಾಯ ಪಡೆದುಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುಭದ್ರಾದೇವಿ ಅವರು ಮಾತನಾಡಿ, ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳು ಮತ್ತು ಎಲ್ಲಾ ಶಾಲೆಗಳಲ್ಲಿ ಸರ್ಕಾರಿ ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ 1098 ಹೊಸ ಲೋಗೋದೊಂದಿಗೆ ಗೋಡೆ ಬರಹ ಬರೆಸಬೇಕು ಎಂದು ಹೇಳಿದರು.

ಶಾಲೆ ಮತ್ತು ಕಾಲೇಜುಗಳಲ್ಲಿ ಸೈಬರ್ ಅಪರಾಧಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಮಕ್ಕಳು ಶಾಲೆಗೆ ನಿರಂತರ ಗೈರು ಹಾಜರಾಗಿದ್ದರೆ ಮಕ್ಕಳ ಕಲ್ಯಾಣ ಸಮಿತಿಗೆ ವರದಿ ಅಥವಾ 1098ಕ್ಕೆ ಕರೆ ಮಾಡಿ ತಿಳಿಸಬೇಕು ಎಂದರು.

ಸಭೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮೀ ಮೈದೂರು, ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರು, ಪ್ಯಾರಾಲೀಗಲ್ ವ್ಯಾಲೆಂಟಿಯರ್ಸ್, ಬಾಲನ್ಯಾಯ ಮಂಡಳಿಯ ಸದಸ್ಯರು, ಪೊಲೀಸ್ ಠಾಣಾಧಿಕಾರಿಗಳು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು ಇದ್ದರು.

## ಶುಶ್ರೂಷಕರ ವಿದೇಶಿ ಭಾಷಾ ತರಬೇತಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ

**ಮಲ್ಲಮ್ಮ ನುಡಿ ವಾರ್ತೆ**

ಕೊಪ್ಪಳ : ಕರ್ನಾಟಕ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಆಯೋಜಿಸಲಾಗಿರುವ ಶುಶ್ರೂಷಕರ ವಿದೇಶಿ ಭಾಷಾ ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ವಿಧಾನ ಪರಿಷತ್



ಸದಸ್ಯರಾದ ಹೇಮಲತಾ ನಾಯಕ, ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಪೋಸ್ಟರ್ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಕೃಷ್ಣಮೂರ್ತಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಗವಿಶಂಕರ್.ಕೆ, ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಶ್ರೀನಿವಾಸ ಕುಲಕರ್ಣಿ, ಜಿಟಿಟಿಸಿ ಪ್ರಾಂಶುಪಾಲರು, ವಿಟಿಯು ಕೌಶಲ್ಯ ತರಬೇತಿ ಕೇಂದ್ರ ತಳಕಲ್‌ನ ಉಪನಿರ್ದೇಶಕರು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಎನ್.ಎಸ್.ಎಸ್ ಸಂಸ್ಥಾಪನಾ ದಿನಾಚರಣೆ

## ಯುವಸಮೂಹ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಿ-ಭೈರಮಟ್ಟಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.27-ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕ ವಿದ್ಯಾರ್ಥಿಗಳು ಗ್ರಾಮಗಳ ಅಭಿವೃದ್ಧಿಗೆ ಆಡಳಿತವ್ಯವಸ್ಥೆಯೊಂದಿಗೆಕೈಜೋಡಿಸಬೇಕು. ಪರಿಸರರಕ್ಷಣೆಗಾಗಿಸಸಿನೆಟ್ಟುಅವುಗಳನ್ನು ದತ್ತುಪಡೆದು ಬೆಳೆಸಬೇಕು ಎಂದು ಬೇವೂರಿನ ಪಿ.ಎಸ್.ಸಜ್ಜನ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಜಗದೀಶ ಭೈರಮಟ್ಟಿ ಹೇಳಿದರು.

ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ಜರುಗಿದ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎನ್.ಎಸ್.ಎಸ್. ಗೀತೆಯಲ್ಲಿ ಹೇಳಿರುವಂತೆ ಗ್ರಾಮಗಳ ಉದ್ಧಾರದ ಕಲ್ಪನೆಯನ್ನು ವಿದ್ಯಾರ್ಥಿಗಳು ಸಾಕಾರಗೊಳಿಸಲು ಮುಂದಾಗಬೇಕು ಎಂದರು.

ಮುಖ್ಯ ಅತಿಥಿ ವಿಶ್ರಾಂತ ಪ್ರಾಚಾರ್ಯ ಬಿ.ಬಿ.ಬೇವೂರ ಮಾತನಾಡಿ, ಮಹಾತ್ಮಗಾಂಧಿಜಿಯವರ ಆದರ್ಶಗಳು ಎನ್.ಎಸ್.ಎಸ್ ಯೋಜನೆಯ ಜೀವಾಳಯೆನಿಸಿವೆ. ಪರಿಸರ ಪ್ರೇಮ, ರಾಷ್ಟ್ರಭಕ್ತಿಯ ಚಿಂತನೆಗಳು ಯುವಸಮುದಾಯಕ್ಕೆಅವಶ್ಯಕವಾಗಿದ್ದು ಇವುಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಜಿ.ಎಸ್.ಗೌಡರ ಪ್ರಾಸ್ತಾವಿಕವಾಗಿ ಮಾತನಾಡಿದರು. ಐಕ್ಯೂಎಸಿ ಘಟಕದ ಮುಖ್ಯಸ್ಥ ಎ.ಎಮ್.ಗೊರಚಿಕ್ಕನವರ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಉಪನ್ಯಾಸಕರಾದ ಎಸ್.ಎಸ್.ಆದಾಪೂರ, ಸಂಗಮೇಶ ಹಂಚಿನಾಳ,ಡಿ.ವಾಯ್.ಬುಡ್ಡಿಯವರ, ಬಿ.ಎಸ್.ಗೋಡಿ ಇದ್ದರು.

ವಿಜಯಲಕ್ಷ್ಮೀ ಬಂಡಿವಡ್ಡರ ಹಾಗೂ ಪವಿತ್ರಾ ಮಾಗನೂರ ಎನ್.ಎಸ್.ಎಸ್ ಗೀತೆ ಹಾಡಿದರು. ಸುಷ್ಮಾ ಸಂದಿಮನಿ ಸ್ವಾಗತಿಸಿದರು. ಪ್ರವೀಣ ಪೂಜಾರಿ ಹಾಗೂ ಬಸಯ್ಯ ಗಣಾಚಾರಿ ನಿರೂಪಿಸಿದರು.

ಲಕ್ಷ್ಮೀ ಜಟಗಿ ಪ್ರಮಾಣ ಪತ್ರ ವಿತರಿಸಿದರು. ಸಿದ್ದಪ್ಪ ಅಳಗುಂಡಿ ವಂದಿಸಿದರು.

ನಂತರ ಕಾಲೇಜಿನ ಆವರಣದಲ್ಲಿ ವಿವಿಧ ಸಸಿಗಳನ್ನು ನೆಡಲಾಯಿತಲ್ಲದೇ, ಶ್ರಮದಾನದ ಮೂಲಕ ಸ್ವಚ್ಛತಾ ಕಾರ್ಯಕ್ರಮ ನಡೆಸಲಾಯಿತು.

# ಪ್ರಾಣಿಗಳ ಕಡಿತಕ್ಕೆ ಚುಚ್ಚುಮದ್ದು ಪಡೆದುಕೊಳ್ಳಿ-ಡಾ.ಮಂಜುನಾಥ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.27-ದೇಶದಲ್ಲಿ ಪ್ರತಿ ವರ್ಷ ಹೆಚ್ಚು ಜನ ರೇಬೀಸ್ ಮಹಾಮಾರಿಗೆ ಬಲಿಯಾಗುತ್ತಿದ್ದಾರೆ. ನಾಯಿ ಸೇರಿದಂತೆ ಯಾವುದೇ ಪ್ರಾಣಿಯ ಕಡಿತವನ್ನು ನಿರ್ಲಕ್ಷಿಸದೇ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಮಂಜುನಾಥ ಡಿ.ಎನ್.ಹೇಳಿದರು.

ಬಾಗಲಕೋಟೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಸಮೀಕ್ಷಣಾ ಘಟಕ ಇವರ ಸಹಯೋಗದೊಂದಿಗೆ ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಕಟ್ಟಿ ಮೆಡಿಕಲ್ ಮತ್ತು ಎಜುಕೇಶನ್ ಸೊಸಾಯಿಟಿಯ ಗೌರಮ್ಮ ಇನ್ಸಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಶ್ವ ರೇಬೀಸ್ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರೇಬೀಸ್ ಮಾರಣಾಂತಿಕ ಕಾಯಿಲೆಯಾಗಿದೆ. ಸೆಪ್ಟೆಂಬರ್ 28 ಅನ್ನು ವಿಶ್ವ ರೇಬೀಸ್ ದಿನವೆಂದು ಆಚರಿಸಲಾಗುತ್ತದೆ. ವಿಶ್ವದಾದ್ಯಂತ ರೇಬೀಸ್ ಕುರಿತು ಜಾಗೃತಿ ಮೂಡಿಸುವುದೇ ಈ ದಿನಾಚರಣೆಯ ಮೂಲ ಆಶಯವಾಗಿದೆ ಎಂದ ಅವರು, ಜಿಲ್ಲೆಯಲ್ಲಿ ಜನವರಿಯಿಂದ ಈತನಕ ರೇಬೀಸ್ ರೋಗಕ್ಕೆ ತುತ್ತಾದ 17 ಸಾವಿರ ಜನರಿಗೆ ಚಿಕಿತ್ಸೆ ನೀಡಲಾಗಿದೆ. 3 ಜನ ಮೃತಪಟ್ಟಿದ್ದಾರೆ. ಆದ್ದರಿಂದ ಸಾರ್ವಜನಿಕರು ನಾಯಿ ಸೇರಿದಂತೆ ಯಾವುದೇ ಪ್ರಾಣಿ ಕಡಿತಕ್ಕೊಳಗಾದರೆ ತಕ್ಷಣ ಸರ್ಕಾರಿ ಆಸ್ಪತ್ರೆಗೆ ತೆರಳಿ ಆಂಟಿರೇಬೀಸ್ ಲಸಿಕೆಯನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ದಯಾನಂದ ಕರೆಯನ್ನವರ ಮಾತನಾಡಿ, ರೇಬೀಸ್ ಸಸ್ತನಿಗಳಲ್ಲಿ ವೈರಾಣುವಿನಿಂದ ಹರಡುವ ಕಾಯಿಲೆ. ಶ್ವಾನಗಳಿಂದ ಕಡಿತ ಮತ್ತು ಲಾಲಾರಸದ ಸಂಪರ್ಕದಿಂದ ಮನುಷ್ಯನಿಗೆ ಹರಡುತ್ತದೆ. ನೇರವಾಗಿ ನರಮಂಡಲದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಮಿದುಳಿಗೆ ಘಾಸಿಯಾಗಿ ಸಾವು ಸಂಭವಿಸುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸಮುದಾಯಕ್ಕೆ ನಾಯಿ ಕಡಿತ ಪರಿಣಾಮ ಮತ್ತು ನಿಯಂತ್ರಣದ ಬಗ್ಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಸೋಂಕು ಶಾಸ್ತ್ರಜ್ಞರಾದ ಡಾ.ಸೀಮಾ ಹುದ್ದಾರ ಮಾತನಾಡಿ, ಪ್ರಾಣಿ ಜನ್ಯರೋಗ ಒಂದು ಮಾರಣಾಂತಿಕವಾಗಿದೆ. ಪ್ರಾಣಿಗಳು ಕಡಿಯುವದರಿಂದ ಮತ್ತು ಪರಚುವದರ ಮೂಲಕ ಕಾಯಿಲೆ ಉಲ್ಬಣಗೊಳ್ಳುವುದು. ಆದ್ದರಿಂದ ಸಮುದಾಯದಲ್ಲಿ ರೇಬೀಸ್ ರೋಗದ ಬಗ್ಗೆ ಆರೋಗ್ಯ ಇಲಾಖೆಯಿಂದ ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಗೌರಮ್ಮ ಇನ್ಸಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಕಾಲೇಜಿನ ಪ್ರಾಚಾರ್ಯ ವಿದ್ಯಾಧರ ಜಾಡರ, ತಾಲೂಕು ಆರೋಗ್ಯಾಧಿಕಾರಿ ಡಾ.ಸರಸ್ವತಿ ಮಾಗಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಚ್.ಪಿ.ನಾಯ್ಕರ, ಶಶಿಧರ ಕುಮಟಳ್ಳಿ ಸೇರಿದಂತೆ ಜಿಲ್ಲಾ ಸಮೀಕ್ಷಣಾಧಿಕಾರಿಗಳ ಕಚೇರಿ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

## ವಿಶ್ವನಾಥಗೆ ಎಮಿನೆಂಟ್ ಇಂಜಿನಿಯರ್ ಅವಾರ್ಡ್ ಪ್ರಧಾನ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಸಮೀಪದ ಹಂದ್ರಾಳ ಗ್ರಾಮದವರಾದ ಕೆ.ಐ.ಎ.ಡಿ.ಬಿ.ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ವಿಶ್ವನಾಥ ಸಿದ್ದನಗೌಡ ಬಿರಾದಾರ ಇವರಿಗೆ ಏಷ್ಯನ್ ನೆಟ್ವರ್ಕ್ ಸುವರ್ಣ ನ್ಯೂಸ್ ಹಾಗೂ ಕನ್ನಡಪ್ರಭ ಸಮೂಹ ಸಂಸ್ಥೆಯಿಂದ ಕೊಡಮಾಡುವ 2025 ನೇ ಸಾಲಿನ "ಎಮಿನೆಂಟ್ ಇಂಜಿನಿಯರ್ ಅವಾರ್ಡ್" ಪ್ರಧಾನ ಮಾಡಲಾಗಿದೆ.

ಬೆಂಗಳೂರಿನ ಕುಮಾರ ಕೃಪಾ ಅತಿಥಿ ಗೃಹದ ಹತ್ತಿರ ಇರುವ ಲಲಿತ್ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕೇಂದ್ರ ರೈಲ್ವೆ ಸಚಿವಾಲಯದ ರಾಜ್ಯ ಸಚಿವ ವೀ.ಸೋಮಣ್ಣ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಂಟಿಯಾಗಿ ವಿಶ್ವನಾಥ್ ಅವರಿಗೆ ಈ ಅವಾರ್ಡ್ ಪ್ರಧಾನ ಮಾಡಿದರು. ವಿಶ್ವನಾಥ ಬಿರಾದಾರ ಅವರು ತಮ್ಮ ಸೇವಾ ಕ್ಷೇತ್ರದಲ್ಲಿ ಮಾಡಿದ ಅಮೋಘ ಕಾರ್ಯಗಳಿಗಾಗಿ ಈ ಅವಾರ್ಡನ್ನು ನೀಡಲಾಗಿದೆ. ಈ ಸಂದರ್ಭದಲ್ಲಿ ಕನ್ನಡಪ್ರಭ ಪತ್ರಿಕೆಯ ಪ್ರಧಾನ ಸಂಪಾದಕ ರವಿ ಹೆಗಡೆ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿಶ್ವನಾಥ ಅವರ ಧರ್ಮಪತ್ನಿ ಸುನೀತಾ ಬಿರಾದಾರ, ಪುತ್ರ ನಾಗಾರ್ಜುನ ವಿಶ್ವನಾಥ ಬಿರಾದಾರ, ಕುಟುಂಬದ ಸದಸ್ಯರಾದ ಬಸನಗೌಡ ಪಾಟೀಲ, ಸರೋಜಿನಿ ಬಸನಗೌಡ ಪಾಟೀಲ, ಶ್ರೀಕಾಂತ ಸಿ.ಪಾಟೀಲ, ಶರಣಗೌಡ ಪಾಟೀಲ, ಪ್ರಸಾದ್ ಬಿರಾದಾರ ಹಾಗೂ ಶಿವರಾಜ ಬಿರಾದಾರ ಇದ್ದರು.

### ಸಿಂಧನೂರು ತಾಲೂಕಿನಲ್ಲಿ ಬಹುಕೋಟಿ ರೂ.ಮೊತ್ತದ

## ನಾನಾ ಅಭಿವೃದ್ಧಿ ಕಾಮಗಾರಿಗೆ ಸಚಿವರಿಂದ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಸೆಪ್ಟೆಂಬರ್ 27 -: ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ಹಾಗೂ ವೈದ್ಯಕೀಯ ಶಿಕ್ಷಣ ಮತ್ತು ರಾಯಚೂರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಅವರು ಸೆ.27ರಂದು ಸಿಂಧನೂರ ತಾಲೂಕಿನಲ್ಲಿ ಆರೋಗ್ಯ ಇಲಾಖೆ, ಕರ್ನಾಟಕ ಗೃಹಮಂಡಳಿ, ಕೆಆರ್ಐಡಿಎಲ್ ಸೇರಿದಂತೆ ವಿವಿಧ ಇಲಾಖೆಗಳ ಕಟ್ಟಡಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು.

15 ಕೋಟಿ ರೂ. ವೆಚ್ಚದಲ್ಲಿ ಸಿಂಧನೂರು ನಗರದ ಪಿ.ಡಬ್ಲ್ಯೂಡಿ ಕ್ಯಾಂಪಿನಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಮತ್ತು 1.5 ಕೋಟಿ ರೂ.ವೆಚ್ಚದಲ್ಲಿ ಸಿಂಧನೂರು ನಗರದಲ್ಲಿ ನೂತನ ತಾಲೂಕು ಪಂಚಾಯತ್ ಕಾರ್ಯಾಲಯಕ್ಕೆ ಲೋಕಾರ್ಪಣೆ ಮಾಡಲಾಯಿತು.6 ಕೋಟಿ ರೂ ವೆಚ್ಚದಲ್ಲಿ ಸಿಂಧನೂರು ನಗರದಲ್ಲಿ ಜಿಟಿಟಿಸಿ ಕಟ್ಟಡ ನಿರ್ಮಾಣ ಕಾಮಗಾರಿಗೆ, 1.48 ಕೋಟಿ ರೂ ವೆಚ್ಚದಲ್ಲಿ ತರಬೇತಿ ಕೇಂದ್ರ ಮತ್ತು ಕಲ್ಚರಲ್ ಹಾಲಗೆ ಮೂಲಭೂತ ಸೌಕರ್ಯ ಕಲ್ಪಿಸುವುದಕ್ಕೆ, 1.46 ಕೋಟಿ ರೂ ವೆಚ್ಚದಲ್ಲಿ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜ್ ಕಟ್ಟಡ ನಿರ್ಮಾಣಕ್ಕೆ, 20 ಕೋಟಿ ರೂ ವೆಚ್ಚದಲ್ಲಿ ಸರ್ಕಾರಿ ಪದವಿ ಮಹಾವಿದ್ಯಾಲಯ ಕಟ್ಟಡ ಕಾಮಗಾರಿಗೆ, 10 ಕೋಟಿ ರೂ ವೆಚ್ಚದಲ್ಲಿ ಅಕ್ಕ ಮಹಾದೇವಿ ಮಹಿಳಾ ಸ್ನಾತಕೋತ್ತರ ಕೇಂದ್ರದ ವಸತಿ ನಿಲಯಕ್ಕೆ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು. ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗು ಇನ್ನಿತರ ಗಣ್ಯರು ಇದ್ದರು.

# ತಾಲೂಕ ಮಟ್ಟದ ಮಹಿಳಾ ವಿಚಾರಗೋಷ್ಠಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾ ಅಭಿವೃದ್ಧಿಧಿ ಯೋಜನೆ ವತಿಯಿಂದ ಕೊಪ್ಪಳ ಪಶ್ಚಿಮ ಯೋಜನಾ ಕಚೇರಿ ವ್ಯಾಪ್ತಿಯ ತಾಲೂಕು ಮಟ್ಟದ ಮಹಿಳಾ ವಿಚಾರ ಗೋಷ್ಠಿ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನಾ ಶ್ರೀಮತಿ ಡಾ.ರಾಧಾ ಕೆ ಕುಲಕರ್ಣಿ ರವರು ವಹಿಸಿದ್ದರು.

ಕಾರ್ಯಕ್ರಮಮದ ಉದ್ಘಾಟನೆಯನ್ನು ಕಲ್ಯಾಣ ಕರ್ನಾಟಕ ಕೊಪ್ಪಳ ಪ್ರಾದೇಶಿಕ ವಿಭಾಗದ ಗೌರವಾನ್ವಿತ ಪ್ರಾದೇಶಿಕ ನಿರ್ದೇಶಕರಾದ ಚಂದ್ರಶೇಖರ್ ಜೆ ರವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಾ

ಜ್ಞಾನವಿಕಾಸದ ಪ್ರಮುಖ ಕಾರ್ಯಕ್ರಮಗಳು ಹಾಗೂ ಅವುಗಳಿಂದ ಮಹಿಳೆಯರು ಮಾನಸಿಕವಾಗಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸದೃಢರಾಗಿರುವ ಬಗ್ಗೆ ಮನಮುಟ್ಟುವಂತೆ ಮಾಹಿತಿ ಮಾರ್ಗದರ್ಶನ ನೀಡಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ನಿರ್ದೇಶಕರಾದ ಪ್ರಕಾಶ್ ರಾವ ಸಚಾರಿ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್ಪೆಕ್ಟರ್ ಶ್ರೀಮತಿ ಉಮೇರಾಬಾನು. ಜಗದ್ಗುರು ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಕೊಪ್ಪಳ ಇದರ ಮುಖ್ಯಸ್ಥರು ಶ್ರೀಜ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಗೌರಮ್ಮ ಲೋಹಿತದೇಸಾಯಿರವರು ಮಹಿಳಾ ಹಕ್ಕು ಮತ್ತು ಕಾನೂನು ಕುರಿತು ವಿಚಾರ ಗೋಷ್ಠಿಯ ಮೂಲಕ ವರದಕ್ಷಿಣೆ ಕಿರುಕುಳ, ಪೋಕ್ಸೋ ಕಾಯಿದೆ, ಆಸ್ತಿ ವಿಂಗಡಣೆ, ಬಾಲ್ಯ ವಿವಾಹ, ಮಹಿಳೆಯರ ಹಕ್ಕು, ಮಹಿಳಾ ದೌರ್ಜನ್ಯ ಹಾಗೂ ಕಾನೂನು ಕುರಿತು ಸದಸ್ಯರಿಗೆ ಮಾಹಿತಿ ನೀಡಿದರು.

ಈ ಸಂದರ್ಭ ಜ್ಞಾನ ವಿಕಾಸ ಸದಸ್ಯರಿಗೆ ಆಟೋಟಸ್ಪರ್ಧೆ.ರಂಗೋಲಿ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು, ಜ್ಞಾನ ವಿಕಾಸ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಮಾಡಲಾಯಿತು ಯೋಜನಾಧಿಕಾರಿ ಜಗದೀಶ್ ಕೆ ಎಚ್ ರವರು ಕಾರ್ಯಕ್ರಮವನ್ನ ಸ್ವಾಗತಿಸಿದರು, ಜ್ಞಾನ ವಿಕಾಸ ಸಮನ್ವಯಧಿಕಾರಿ ಗೀತಾ ಕಾರ್ಯಕ್ರಮ ನಿರೂಪಿಸಿದರು ಮೇಲ್ವಿಚಾರಕರಾದ ಲಕ್ಷ್ಮಿ ವಂದಿಸಿದರು.

ಕಾರ್ಯಕ್ರಮದಲ್ಲಿ 25 ಕೇಂದ್ರದ ಸಂಯೋಜಕಿಯರು. ಜ್ಞಾನ ವಿಕಾಸ ಕೇಂದ್ರದ ಸದಸ್ಯರು ಭಾಗವಹಿಸಿದ್ದರು.

### ಡೆಂಟಲ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

## ವೃತ್ತಿಯಲ್ಲಿ ಧೈರ್ಯ ಮತ್ತು ಶಿಸ್ತು ಇರಲಿ- ರವಿ ಚನ್ನಣ್ಣನವರ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.27-ಪದವಿ ಪೂರ್ಣಗೊಳಿಸುವುದು ಬದುಕಿನ ಮಹತ್ವದ ಘಟ್ಟವಾಗಿದ್ದು, ಮುಂದೆ ಕೈಗೊಳ್ಳುವ ವೃತ್ತಿಯಲ್ಲಿ ಧೈರ್ಯ ಮತ್ತು ಶಿಸ್ತನ್ನು ಪಾಲಿಸಿ ನಡೆಯಬೇಕು ಎಂದು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೋಲಿಸ್ ಉಪಮಹಾನಿರೀಕ್ಷಕ ರವಿ ಚನ್ನಣ್ಣವರ ಯುವ ವೈದ್ಯರಿಗೆ ಸಲಹೆ ನೀಡಿದರು.

ನಗರದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಶತಾಬ್ದಿ ಭವನದಲ್ಲಿ ಶುಕ್ರವಾರ ದಂತ ವೈದ್ಯಕೀಯ ವಿದ್ಯಾರ್ಥಿಗಳ 34 ನೇ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಪಾಲಕರ ಅಭಿಲಾಷೆಯಾಗಿದೆ. ಅವರ ಅಪಾರ ತ್ಯಾಗ ಮತ್ತು ಪರಿಶ್ರಮದಿಂದ ನಿಮಗೆಲ್ಲ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗಿದೆ. ದೌರ್ಬಲ್ಯಗಳನ್ನು ಬದಿಗೆ ಸರಿಸಿ ವೃತ್ತಿಯಲ್ಲಿ ಶ್ರೇಷ್ಠವಾದದ್ದನ್ನು ಸಾಧಿಸಬೇಕು ಎಂದರು.

ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಅಧ್ಯಕ್ಷತೆ ವಹಿಸಿದ್ದು, ಉತ್ತಮ ವೈದ್ಯರಾಗಿ ಜನರ ಸೇವೆ ಮಾಡಿ ಕಲಿತ ಸಂಸ್ಥೆಯ ಹೆಸರು ತರುವಂತೆ ಸಲಹೆ ಇತ್ತರು.

98 ಬಿ.ಡಿ.ಎಸ್ ಮತ್ತು 7 ಎಮ್.ಡಿ.ಎಸ್ ದಂತವೈದ್ಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಮೂವರು ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪದವಿ ಪಡೆದ ಡಾ.ಸ್ಫೂರ್ತಿ ಮತ್ತು ಡಾ.ಅರ್ಚನಾ, ವೈದ್ಯೆ ಡಾ.ರಶ್ಮಿ ಯಡಹಳ್ಳಿ, ಪಾಲಕರಾದ ಡಾ.ಶ್ರೀವಾತ್ಸವ ಮತ್ತು ಡಾ.ಸಂದೀಪ ಶಹ ಅನಿಸಿಕೆಗಳನ್ನು ಹಂಚಿಕೊಂಡರು.

ವೇದಿಕೆಯಲ್ಲಿ ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ), ಪ್ರಾಚಾರ್ಯ ಡಾ.ಶ್ರೀನಿವಾಸ ವನಕಿ ಮತ್ತು ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ಕಾಲೇಜಿನ ಪರವಾಗಿ ರವಿ ಚನ್ನಣ್ಣವರ ಅವರನ್ನು ಸನ್ಮಾನಿಸಲಾಯಿತು.

ಪ್ರಾಚಾರ್ಯ ಡಾ.ಶ್ರೀನಿವಾಸ ವನಕಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಪ್ರವೀಣ ರಾಮದುರ್ಗ ಪರಿಚಯಿಸಿದರು. ಡಾ.ಪ್ರಹ್ಲಾದ ಸರಾಫ ಪದವಿಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಡಾ.ಸ್ನೇಹಾ ವನಕಿ ವಂದಿಸಿದರು. ಡಾ.ಸೌಮ್ಯಾ ಆಲ್ಲೂರಕರ್ ನಿರೂಪಿಸಿದರು.

## ವಿಂಡ್ ಪವರ್ ಕಂಪನಿಯಿಂದ ರೈತರ ಮೇಲೆ ದಬ್ಬಾಳಿಕೆ ಪೊಲೀಸ್ ಮೌನ: ಕಣ್ಣು ಮುಚ್ಚಿ ಕುಳಿತ ಜಿಲ್ಲಾಡಳಿತ ರೈತ ಮುಖಂಡ ಅರುಣ ಹೆಚ್, ಟಿ.ರತ್ನಾಕರ್ ಆರೋಪ


ಮಲ್ಲಮ್ಮ ನುಡಿ ವಾರ್ತೆ




ಕೊಪ್ಪಳ :ರಿನ್ಯೂ ಪವರ್ ಎಂಬ ವಿಂಡ್ ಪವರ ಜಿಲ್ಲೆಯ ಯಲಬುರ್ಗಾ, ಕುಷ್ಟಗಿ ತಾಲೂಕಿನ ಕೆಲವು ಗ್ರಾಮಗಳ ರೈತರ ಜಮೀನಿನಲ್ಲಿರುವ ಬೆಲೆ ಬಾಳುವ ಮರಗಳನ್ನು ನಾಶ ಮಾಡಿ ನಕಲಿ ಕಡತ ಸೃಷ್ಟಿಸಿ ರೈತರ ಮೇಲೆ ದಬ್ಬಾಳಿಕೆ ಮಾಡುತ್ತಿದೆ. ಈ ಕುರಿತು ದೂರು ನೀಡಿದರು ಪೊಲೀಸರು ಮೌನವಹಿಸಿದ್ದು, ಜಿಲ್ಲಾಡಳಿತದ ಅಧಿಕಾರಿಗಳು ಕೂಡಾ ಕಣ್ಣು ಮುಚ್ಚಿ ಕುಳಿತಿದ್ದಾರೆ ಎಂದು ರೈತರಾದ ಅರುಣ ಹಿರಿಯಾಳ್, ಮುಖಂಡ ಟಿ.ರತ್ನಾಕರ್ ಮತ್ತಿತರು ಆರೋಪಿಸಿದ್ದಾರೆ.

ಮಂಗಳವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು. ರಿನ್ಯೂ ಪವರ್ ಕಂಪನಿ ಸಹಾಯಕ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳ ನಕಲಿ ಸಹಿಯೊಂದಿಗೆ ಕೆಲವು ಪತ್ರಗಳನ್ನು ತಯಾರಿಸಿ ಅರಣ್ಯ ಇಲಾಖೆ ಅನುಮತಿ ಪಡೆಯದೇ ರೈತರ ಜಮೀನಿನಲ್ಲಿರುವ ಬೆಲೆ ಬಾಳುವ ಟೀಕ್ ಮರಗಳನ್ನು ಕಡೆದು ಹಾಕಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ನಿಯಮ ಬಾಹಿರವಾಗಿ ಕಂಪನಿ ರೈತರ ಜಮೀನಿನಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತಿದೆ. ಯಲಬುರ್ಗಾ ಮತ್ತು ಕುಷ್ಟಗಿ ತಾಲೂಕಿನ 19 ಹಳ್ಳಿಗಳ ರೈತರ ಜಮೀನಿನಲ್ಲಿ ಎಸ್‌ಟಿಎಸ್ ಮಾರ್ಗವನ್ನು ರಿನ್ಯೂ ಪವರ್ ಕಂಪನಿ ಅದರ ಉಪ ಕಂಪನಿಗಳಿಂದ ವಿಂಡ್ ಪವರ್ ಜೋಡಿಸುತ್ತಿದೆ. ಎಸ್‌ಸಿ.ಎಸ್‌ಟಿ ರೈತರ ಜಮೀನಿನಲ್ಲಿ ಬಂದು ದಬ್ಬಾಳಿಕೆ ಮಾಡುತ್ತಿದೆ. ಈ ಕುರಿತು ದೂರು ನೀಡಿದರೆ ಪೊಲೀಸರು, ಕಂದಾಯ, ಅರಣ್ಯ ಮತ್ತು ಜಿಲ್ಲಾಧಿಕಾರಿಗಳು ಕೂಡಾ ಯಾವುದೇ ಕ್ರಮ ಕೈಗೊಳ್ಳದೇ ಮೌನವಹಿಸಿದ್ದಾರೆ. ಕೊಪ್ಪಳ ಸಹಾಯಕ ಆಯುಕ್ತರ ಹೆಸರಿನಲ್ಲಿ ನಕಲಿ ನಡವಳಿಕೆ ಸೃಷ್ಟಿಸಿರುವುದು ದಾಖಲೆಗಳಿಂದ ಬಹಿರಂಗವಾಗಿದೆ. ಈ ಕುರಿತು ಈಗ ನಾವು ಲೋಕಾಯುಕ್ತ ಮತ್ತು ದೆಹಲಿ ಎನ್‌ಸಿಎಸ್‌ಟಿಗೆ ದೂರು ನೀಡಿದ್ದೇವೆ. ಹಿಂದೆ ಕರ್ತವ್ಯ ನಿರ್ವಹಿಸಿದ್ದ ಜಿಲ್ಲಾಧಿಕಾರಿಗಳು ಕಂಪನಿಯೊಂದಿಗೆ ಶ್ಯಾಮೀಲ್ ಆಗಿದ್ದರು. ಜಿಲ್ಲಾಡಳಿತ ರೈತರ ಬೆಂಬಲಕ್ಕೆ ಬಾರದ ಕಾರಣ ಮಾಧ್ಯಮಗಳ ಮೂಲಕ ಕಂಪನಿ ಮಾಡುತ್ತಿರುವ ಅನ್ಯಾಯವನ್ನು ಬಹಿರಂಗಪಡಿಸಿದ್ದೇವೆ ಎಂದರು. ಈ ಸಂದರ್ಭದಲ್ಲಿ ರೈತ ಮುಖಂಡ ಶರಣಪ್ಪ ಗುಂಗಾಡಿ ಮತ್ತಿತರು ಇದ್ದರು.

## ಸಚಿವ ಜಮೀರ್ ಅಹ್ಮದ್ ಖಾನ್ ಗೆ ಭೇಟಿ- ಅನುದಾನ ನೀಡಲು ಮನವಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಚ್ ಮತ್ತು ವಕ್ಫ್ ಖಾತೆ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ರವರಿಗೆ ಪಕ್ಕದ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಭೇಟಿಯಾಗಿ ಅಂಜುಮನ್ ಕಮಿಟಿಯ ಶಾದಿ ಮಹಲ್ ಕಟ್ಟಡ, ಕೊಪ್ಪಳದ ಕಬರಸ್ಥಾನ ಕಾಂಪೌಂಡ್ ಕಟ್ಟಡ ನಿರ್ಮಾಣಕ್ಕೆ ಮತ್ತು ಮಸೀದಿ ಕಟ್ಟಡ ಸೇರಿದಂತೆ ಅಲ್ಪಸಂಖ್ಯಾತ ಸಮುದಾಯದ ವಿವಿಧ ಸಂಸ್ಥೆಗಳಿಗೆ ಅನುದಾನ ನೀಡಲು ಮನವಿ ಮಾಡಿಕೊಳ್ಳಲಾಯಿತು,

ಅವರ ಮನವಿ ಗಳಿಗೆ ಸಕಾರಾತ್ಮಕವಾಗಿ ಸ್ಪಂದನೆ ನೀಡಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಂಡು ಅನುದಾನ ನೀಡಲಾಗುವುದು ಎಂದು ಸಚಿವ ಜಮೀರ್ ಅಹ್ಮದ್ ಖಾನ್ ರವರು ಭರವಸೆ ನೀಡಿದರು, ಈ ಸಂದರ್ಭದಲ್ಲಿ ಶಾಸಕ ಕೆ ರಾಘವೇಂದ್ರ ಹಿಟ್ನಾಳ, ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್, ಅಂಜುಮನ್ ಕಮಿಟಿಯ ಅಧ್ಯಕ್ಷ ಎಂ ಡಿ ಆಸಿಫ್ ಕರ್ಕಿಹಳ್ಳಿ, ನಗರಸಭೆ ಸದಸ್ಯ ಅಜೀಮ್ ಅತ್ತಾರ್, ಮತ್ತು ಗಫಾರ್ ಡಿಡ್ಡಿ ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು,

# ಆ್ಯಪ್ ಡೌನ್‌ಲೋಡ್ ಆಗಿಲ್ಲ - ಸಮೀಕ್ಷೆ ನಡೆದಿಲ್ಲ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಕರ್ನಾಟಕ ಸರ್ಕಾರ ಹಿಂದುಳಿದ ಆಯೋಗದ ಪ್ರಕಾರ ಸೆ.22 ರಿಂದ ಅ.07 ರವರೆಗೆ ಸಾಮಾಜಿಕ,ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಲಾಗುತ್ತಿದೆ.

ಸಾಮಾಜಿಕ,ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ನಿಗದಿತ ಸೆ.22 ರಿಂದಲೇ ಎಲ್ಲ ಕಡೆ ಶೂರು ಆಗಿದೆ. ಆದರೆ ದಿನಕ್ಕೊಂದು ವಿಘ್ನಗಳು ಕಾಡುತ್ತಿರುವುದರಿಂದ ಸಮೀಕ್ಷೆದಾರರಿಗೆ ತಲೆಬಿಸಿಯಾಗುತ್ತಲಿದೆ.ಒಂದೊಂದು ದಿನ ವಿನೂತನ ಸಮಸ್ಯೆಗಳು ತಲೆದೋರುತ್ತಲಿವೆ.ಸಮೀಕ್ಷೆಯ ನಾಲ್ಕನೇ ದಿನ

ಆ್ಯಪ್‌ಡೌನ್‌ಲೋಡ್‌ಆಗದಿರುವುದರಿಂದ ಗಣತಿದಾರರು ಸಮೀಕ್ಷೆ ಮಾಡದೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕಾಯ್ದು ಸುಸ್ತಾಗಿ ತಮ್ಮ ತಮ್ಮ ಮನೆಗಳಿಗೆ ತೆರಳಿದ ಪ್ರಸಂಗ ನಡೆದಿದೆ.ಸರ್ಕಾರ,ಇಲಾಖೆಯ ಆದೇಶಕ್ಕನುಗುಣವಾಗಿ ಸಮೀಕ್ಷೆ



ಕಾರ್ಯಕ್ಕೆನಾವೆಲ್ಲರೂ ಉತ್ಸಾಹದಿಂದ ಸಮಯಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸಲು ಬಂದಿರುತ್ತೇವೆ.ಆದರೆ ಇಲ್ಲಿ ಯಾವುದು ಸರಿಯಿಲ್ಲ.ಹೆಸರು ಹೇಳಲು ಇಚ್ಚಿಸಿದ ಸಮೀಕ್ಷೆದಾರರು ಸಮಸ್ಯೆಗಳ ಉದ್ದವಾದ ಪಟ್ಟಿಯನ್ನು ಬಿಚ್ಚಿಡುತ್ತಾರೆ.ಆ್ಯಪ್ ಎಲ್ಲಮೊಬೈಲ್‌ಗಳಿಗೆ ಸಪೋರ್ಟ್ ಮಾಡುವುದಿಲ್ಲ.ಸರ್ವರ್ ಸಮಸ್ಯೆ,ಜಿಯೋಟ್ಯಾಗ ಮೂಲಕ ಮನೆ ಶೋಧಿಸುವುದು,ಗ್ರಾಮೀಣಪ್ರದೇಶಗಳಲ್ಲಿ ನೆಟವರ್ಕ್ ಸಮಸ್ಯೆ,ಆಧಾರಕಾರ್ಡ್ಗೆ ಕೆವಾಯ್‌ಸಿ ಆಗದಿರುವುದರಿಂದ ಓಟಿಪಿ ಸಮಸ್ಯೆ,ಕೆಲವು ಕುಟುಂಬಸ್ಥರು ಓಟಿಪಿ ಹೇಳಲು ಅನುಮಾನ ಪಡುತ್ತಿರುವುದು,ಸಮೀಕ್ಷೆಪೂರ್ಣಗೊಳಿಸಿದ ನಂತರ ದೃಢಿಕರಣ ನೀಡುವಾಗ ಎರರ್(ತಪ್ಪು) ಎಂದು ಬರುವುದು ಸೇರಿದಂತೆ ಅನೇಕ ಗಂಭೀರ ಸಮಸ್ಯೆಗಳು ಎದುರಿಸಬೇಕಾಗಿದೆ.ಅಲ್ಲದೆ ಇಲಾಖೆಯವರು ಒಂದು ದಿವಸದಲ್ಲಿ 10 ಮನೆ ಸರ್ವೆ ಮಾಡಬೇಕು ಎಂದು ಟಾರ್ಗೇಟ್ ನೀಡಿದ್ದಾರೆ.ಆದರೆ ಒಂದೊಂದು ಮನೆಗೆ ಕನಿಷ್ಠ 02 ಗಂಟೆ ಸಮಯ ಕಳೆಯಬೇಕಾಗಿದೆ. ಹಾಗಾಗಿ 01 ದಿನದಲ್ಲಿ 2–3 ಮನೆ ಪೂರ್ಣಗೊಳ್ಳುತ್ತಿರುವುರಿಂದ ಸರ್ವೇ ಕಾರ್ಯ ಆಮೆ ಗತಿಯಲ್ಲಿ ನಡೆ–ಯುತ್ತಿದೆ ಎನ್ನುವುದು ಸಮೀಕ್ಷೆದಾರರ ಒಕ್ಕೋರಲಿನ ಅಭಿಪ್ರಾಯವಾಗಿದೆ.ಸಮೀಕ್ಷೆ ಉದ್ಭವಿಸಿದಾಗ ಮೇಲಾಧಿಕಾರಿಗಳಿಗೆ ಸಂಪರ್ಕಿಸಿದಾಗ 'ತಾಳ್ಮೆ ತೊಗೊಳ್ಳಿ' ತಾಂತ್ರಿಕ ದೋಷಗಳನ್ನು ಹಂತ ಹಂತವಾಗಿ ಸರಿಪಡಿಸಲಾಗುತ್ತದೆ ಎನ್ನುವ ಉತ್ತರ ಬರುತ್ತಿದೆ.

# ಪ್ರವಾಹ ಭೀತಿ ಹಿನ್ನೆಲೆ:ಅಧಿಕಾರಿ-ಸಿಬ್ಬಂದಿ ಕೇಂದ್ರ ಸ್ಥಾನದಲ್ಲಿರುವಂತೆ ಡಿ.ಸಿ. ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಸೆ.27: ಮಹಾರಾಷ್ಟ್ರದ ವೀರ್, ಉಜನಿ, ಸಿನಾ ಜಲಾಶಯ ಹಾಗೂ ಬೋರಿ ನದಿಯಿಂದ 3.50 ಲಕ್ಷ ಕ್ಯೂಸೆಕ್ಸ್ ನೀರು ಭೀಮಾ ನದಿಗೆ ಹರಿಬಿಟ್ಟದರಿಂದ ಪ್ರವಾಹದ ಭೀತಿ ಹೆಚ್ಚಿದ್ದು, ಸಂತ್ರಸ್ತರ ರಕ್ಷಣಾ ಕಾರ್ಯಚರಣೆತ್ವರಿತವಾಗಿ ಮಾಡುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಜಿಲ್ಲಾ ಮತ್ತು ತಾಲೂಕು ಹಂತದ ಅಧಿಕಾರಿ–ಸಿಬ್ಬಂದಿ ಕೇಂದ್ರಸ್ಥಾನದಲ್ಲಿರುವಂತೆ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಸೂಚನೆ ನೀಡಿದ್ದಾರೆ.

ಜಿಲ್ಲೆಯ ಅಫಜಲಪೂರ, ಕಲಬುರಗಿ, ಶಾಹಾಬಾದ, ಜೇವರ್ಗಿ ಮತ್ತು ಚಿತ್ತಾಪೂರ ತಾಲೂಕಿನ ಸುಮಾರು ಒಟ್ಟು 105 ಗ್ರಾಮಗಳಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆ ಇದ್ದು, ನೆರೆ ಪರಿಸ್ಥಿಯನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ತಗ್ಗು ಪ್ರದೇಶಗಳಲ್ಲಿನ ಜನರನ್ನು ಗುರುತಿಸಿ ಸುರಕ್ಷಿತ ಸ್ಥಳಗಳಿಗೆಸ್ಥಳಾಂತರಿಸುವುದು, ಕಾಳಜಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವುದು ಜೊತೆಗೆ ನದಿ ದಂಡೆಗೆ ಜನರು ಹೋಗದಂತೆ ನಿಯಂತ್ರಿಸುವುದು ಜಿಲ್ಲಾಡಳಿತ ಮತು ತಾಲೂಕಾಡಳಿತದ ಪ್ರಥಮಾದ್ಯತೆಯ ಕೆಲಸವಾಗಿರುತ್ತದೆ.ಹೀಗಾಗಿ ಜಿಲ್ಲೆಯ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿ–ಸಿಬ್ಬಂದಿಗಳು ಪ್ರವಾಹ ಮತ್ತು ಭಾರಿ ಮಳೆಯಿಂದ ಯಾವುದೇ ಅಹಿತಕರ ಘಟನೆಯಾಗದಂತೆ ಕೇಂದ್ರ ಸ್ಥಾನದಲ್ಲಿದ್ದು, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗದುಕೊಳ್ಳುವಂತೆ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

# ಮೋದಿ ನಾಯಕತ್ವದ ಭಾರತ ಅತ್ಯಧಿಕ ಆರ್ಥಿಕ ಬೆಳವಣಿಗೆ: ಪುಟಿನ್ ಶ್ಲಾಘನೆ



ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಸೆ.27: ಮೋದಿ ನಾಯಕತ್ವದ ಭಾರತ ಅತ್ಯಧಿಕ ಆರ್ಥಿಕ ಬೆಳವಣಿಗೆ ಸಾಧಿಸಿರುವುದಾಗಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶ್ಲಾಘಿಸಿದ್ದಾರೆ.

ಕಳೆದ ವಾರ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದ ವ್ಲಾಡಿಮಿರ್ ಪುಟಿನ್, ರಷ್ಯಾ ಮತ್ತು ಭಾರತ ನಡುವಿನ ಸದೃಢ ಸಂಬಂಧವನ್ನು ಪುನರುಚ್ಚರಿಸಿದ್ದಾರೆ.ರಷ್ಯಾ ಸರ್ಕಾರದ ಸದಸ್ಯರೊಂದಿಗಿನ ಸಭೆಯಲ್ಲಿ ಪ್ರಧಾನಿ ಮೋದಿ ಜೊತೆಗಿನ ಮಾತುಕತೆಯ ವಿವರಗಳನ್ನು ಪುಟಿನ್ ಹಂಚಿಕೊಂಡಿರುವುದಾಗಿ ಕ್ರೆಮ್ಲಿನ್‌ನ ಅಧಿಕೃತ ವೆಬ್‌ಸೈಟ್ ವರದಿ ಮಾಡಿದೆ.

ರಷ್ಯಾ–ಭಾರತದ ಸಂಬಂಧಗಳನ್ನು 'ರಾಷ್ಟ್ರೀಯ ಒಮ್ಮತದ ಆಧಾರದ ಮೇಲೆ' ಸ್ಥಿರವಾದದ್ದು ಎಂದು ಹೇಳಿರುವ ಪುಟಿನ್, ಮೋದಿಯವರ ನಾಯಕತ್ವದಲ್ಲಿ ಆಡಳಿತ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಭಾರತದ ಸಾಧನೆಗಳನ್ನು ಶ್ಲಾಘಿಸಿದ್ದಾರೆ.

ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ಭಾರತ ಸಂಪೂರ್ಣ ಸ್ವತಂತ್ರ, ಸಾರ್ವಭೌಮ ನೀತಿಯನ್ನು ಅನುಸರಿಸುತ್ತಿದೆ. ಮುಖ್ಯವಾಗಿ ಆರ್ಥಿಕ ಕ್ಷೇತ್ರದಲ್ಲಿ ಉತ್ತಮ ಫಲಿತಾಂಶಗಳನ್ನು ಸಾಧಿಸುತ್ತಿದೆ. ವಿಶ್ವದ ಪ್ರಮುಖ ಆರ್ಥಿಕತೆಗಳಲ್ಲಿ ಭಾರತವು ಅತ್ಯಧಿಕ ಆರ್ಥಿಕ ಬೆಳವಣಿಗೆ ದಾಖಲಿಸಿದೆ ಎಂದು ಅವರು ಹೇಳಿದ್ದಾರೆ.

ಮೋದಿ ಅವರ 75ನೇ ಜನ್ಮದಿನದ ಅಂಗವಾಗಿ ಟೆಲಿಗ್ರಾಂ ಮೂಲಕ ಶುಭಾಶಯ ಕಳುಹಿಸಿದ ಕೂಡಲೇ ಉಭಯ ನಾಯಕರು

ದೂರವಾಣಿಯಲ್ಲಿ ಸಂಭಾಷಣೆ ನಡೆಸಿದ್ದು, ಉಭಯ ರಾಷ್ಟ್ರಗಳ ಸದೃಢ ಸಂಬಂಧದಲ್ಲಿ ಮೋದಿ ಅವರ ವೈಯಕ್ತಿಕ ಕೊಡುಗೆಗಳನ್ನು ಪುಟಿನ್ ಒತ್ತಿ ಹೇಳಿರುವುದಾಗಿ ಟಿವಿ ಬ್ರಿಕ್ಸ್ ವರದಿ ಮಾಡಿದೆ. ರಷ್ಯಾ ದೀರ್ಘಕಾಲದ ಪ್ರಾಮಾಣಿಕ ಮಿತ್ರ ರಾಷ್ಟ್ರವಾಗಿದೆ. ರಷ್ಯಾ–ಭಾರತ ನಡುವಿನ ಸಂಬಂಧ ಅಭಿವೃದ್ಧಿ ಭಾರತದ ವಿದೇಶಾಂಗ ನೀತಿಯಲ್ಲಿ ಪ್ರಮುಖವಾಗಿದೆ

# ಪ್ರವಾಸೋದ್ಯಮದಿಂದ ಹೆಚ್ಚಿನ ವಿಷಯ ತಿಳಿದುಕೊಳ್ಳಬಹುದು: ಆಯುಕ್ತೆ ರಮ್ಯಾ ರಂಗನಾಥ

ಮಲ್ಲಮ್ಮ ನುಡಿ ವಾರ್ತೆ

ಬೀದರ,ಸೆ.27:ಪ್ರವಾಸೋದ್ಯಮದಿಂದ ಹೆಚ್ಚಿನವಿಷಯಗಳುತಿಳಿದುಕೊಳ್ಳಬಹುದು ಎಂದು ಮಹಾನಗರ ಪಾಲಿಕೆ ಆಯುಕ್ತೆ ರಮ್ಯಾ ರಂಗನಾಥ ಅವರು ತಿಳಿಸಿದರು.

ಅವರು ಶನಿವಾರ ನಗರದ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರವಾಸೋದ್ಯಮದಿಂದ ಐತಿಹಾಸಿಕ, ಸಾಂಸ್ಕೃತಿಕ, ಪ್ರಾಕೃತಿಕ ಮಹತ್ವವುಳ್ಳ ನೆಲೆಗಳ ಬಗ್ಗೆ ತಿಳಿದುಕೊಳ್ಳಬಹುದು. 'ದೇಶ ಸುತ್ತು, ಕೋಶ ಓದು' ಎಂಬ ಮಾತಿನಂತೆ ನಾವು ಕೆಲವು ಸ್ಥಳಗಳಿಗೆ ಭೇಟಿ ನೀಡಿದ್ದಾಗ ಅಲ್ಲಿನ ಇತಿಹಾಸ, ಸಂಸ್ಕೃತಿ, ಆಚಾರ ವಿಚಾರ, ಕಲೆ ಸಾಹಿತ್ಯ ಮುಂತಾದವು ತಿಳಿದುಕೊಳ್ಳಬಹುದು.



ಎಂದರು.

ಕಾರ್ಯಕ್ರಮದಲ್ಲಿ ವಿನಯ್ ಮಾಳಗೆ ಅವರು "ಪ್ರವಾಸೋದ್ಯಮ ಮತ್ತು ಸುಸ್ಥಿರ ಪರಿವರ್ತನೆ" ಕುರಿತು ಉಪನ್ಯಾಸ ನೀಡಿ ಬೀದರ ತನ್ನದೆ ಆದ ಇತಿಹಾಸ ಹೊಂದಿರುವ ಜಿಲ್ಲೆಯಾಗಿದೆ. ಇಲ್ಲಿ ಹಲವಾರು ಕೋಟೆ, ಕೊತ್ತಲಗಳು ಇವರ ಮತ್ತು ಅನೇಕ ಸುರಂಗ ಬಾವಿ ಹಾಗೂ ಕಾಲುವೆಗಳು ಒಳಗೊಂಡಿರುತ್ತದೆ. ಬೀದರ ಕೋಟೆಯು ಭಾರತದಲ್ಲಿ ಅತ್ಯಂತ ಎರಡನೆ ದೊಡ್ಡ ಕೋಟೆ–ಯಾಗಿದ್ದು, ಇದರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಅಭಿವೃದ್ಧಿ ಯೋಜನೆಗಳನ್ನು ಮಂಜೂರಾಗಿರುತ್ತವೆ. ಬೀದರ ಜಿಲ್ಲೆಯು ರಾಷ್ಟ್ರ ಮತ್ತು ರಾಜ್ಯ ಮಟ್ಟದಲಿ ಹೆಚ್ಚು ಅಭಿವೃದ್ಧಿ ಪಡಿಸಲು ಸರ್ಕಾರವು ಸಹ ಪ್ರಯತ್ನಮಾಡಲಾಗುತ್ತಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಬೆಳಿಗ್ಗೆ ವಿಶ್ವ ಪ್ರವಾಸೋದ್ಯಮ ದಿನಾಚರಣೆಯ ಅಂಗವಾಗಿ "ಪಾರಂಪರಿಕ ನಡಿಗೆ" "ಊಜಡುಣಚಿರಿಜ ಫಾಚಿಟಞ" ಗೆ ಮಹಾನಗರ ಪಾಲಿಕೆ ಆಯುಕ್ತೆ ರಮ್ಯಾ ರಂಗನಾಥ ರವರು ಬೀದರ ಕೋಟೆಯಿಂದ ಬೆಳಿಗ್ಗೆ 6.30 ಗಂ–ಟೆಗೆ ಚಾಲನೆ ನೀಡಿ ಪಾರಂಪರಿಕ ನಡಿಗೆಯನ್ನು ಪ್ರಾರಂಭಿಸಿದರು, ನಂತರ ಪಾರಂಪರಿಕ ನಡಿಗೆಯು ಮಹಮ್ಮದ ಗವಾನ ಮದರಸಾ, ಚೌಬಾರ, ನಯಾಕಮಾನ, ಶಿವಾಜಿ ವೃತ್ತ ವಿಶ್ವಗುರು ಬಸವೇಶ್ವರ ವೃತ್ತ, ಶಿವಾಜಿ ವೃತ್ತದಿಂದ ನೇರವಾಗಿ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮದಿರ ಬೀದರನಲ್ಲಿ ಸೇರಿಸಲಾಯಿತು.

ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಡೆಂಗಿ ಶಿವಲಿಂಗಪ್ಪ , ಪ್ರವಾಸಿ ಮಾರ್ಗದರ್ಶಿಗಳು, ಶಾಹೀನ್ ಮತ್ತು ಕರ್ನಾಟಕ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪುನಶ್ಚೇತನ




ಕಲಬುರಗಿ: ಸೆ.27:ಸರಕಾರಿ ಮಹಾವಿದ್ಯಾಲಯ ಸಾಯತ್ತದಲ್ಲಿರುವ ಪಿ.ಜಿ. ಸಭಾಂಗಣದಲ್ಲಿ ಪ್ರಥಮ ವರ್ಷದ ಬಿ.ಎ, ಬಿ.ಎಸ್ಸಿ, ಬಿ.ಕಾಂ ಮತ್ತು ರಿಟೇಲ್ ಆಪರೇಷನ್ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪುನಶ್ಚೇತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮವನ್ನು ದಕ್ಷಿಣ ಮತಕ್ಷೇತ್ರದ ಶಾಸಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಅಲ್ಲಮಪ್ರಭು ಪಾಟೀಲ ಅವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡುತ್ತಾ, ಇಂದಿನ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ತಂತ್ರಜ್ಞಾನದ ಮೂಲಕ ಪ್ರಗತಿಯನ್ನು ಸಾಧಿಸಿ ದೇಶಕ್ಕೆ ಕೀರ್ತಿಯನ್ನು ತರಬೇಕು ಎಂದರು. ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ ಅವರ ಚರಿತ್ರೆಯನ್ನು ಓದಿ ಅಭಿವೃದ್ಧಿ ಪಥದಲ್ಲಿ ಸಾಗಬೇಕು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಲ್ಬುರ್ಗಿಯ ಚೌಕ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್ಪೆಕ್ಟರಾದ ರಾಘವೇಂದ್ರ ಭಜಂತ್ರಿ ಅವರು ವಿದ್ಯಾರ್ಥಿಗಳು ಶಿಸ್ತಿನಿಂದ ಹಾಗೂ ತಾಳ್ಮೆಯಿಂದ ಓದಿ ಜ್ಞಾನವನ್ನು ಪಡೆದುಕೊಂಡು ಜೀವನವನ್ನು ರೂಪಿಸಿಕೊಳ್ಳಬೇಕೆಂದರು. ಪುನಶ್ಚೇತನ ಕಾರ್ಯಕ್ರಮದಲ್ಲಿ ಮೊದಲನೆಯ ಅಧಿವೇಶನದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಕಾಲೇಜಿನ ಕಲಾವಿದ ವಿಭಾಗದ ಡಾ.ವಿಜಯ ಕುಮಾರ್ ಸಾಲಿಮನಿ ಅವರು ಬಿ.ಎ ಕಲಾ ವಿಭಾಗದ ಕೋರ್ಸ ವಿಷಯದ ಬಗ್ಗೆ ಮಾತನಾಡಿದರು. ಬಿ.ಎಸ್ ಸಿ ಕೋರ್ಸ್ ವಿಷಯದ ಬಗ್ಗೆ ವಿಜ್ಞಾನ ವಿಭಾಗದ ಡೀನರಾದ ಡಾ.ದೌಲಪ್ಪ ಬಿ ಹೆಚ್ ಅವರು ಮಾತನಾಡಿದರು. ಬಿಕಾಂ ರಿಟೇಲ ಆಪರೇಷನ್ ವಿಷಯಕುರಿತು ಡಾ.ಸುಜಾತಾ ದೊಡ್ಡಮನಿ ಅವರು ಮಾತನಾಡಿದರು. ವೇದಿಕೆಯ ಮೇಲೆ ವಾಣಿಜ್ಯ ವಿಭಾಗದ ಡೀನರಾದ ಡಾ.ರಾಜಕುಮಾರ ಸಲಗರ, ಡಾ. ರವೀಂದ್ರಕುಮಾರ ಭಂಡಾರಿ, ಡಾ.ರಾಜಶೇಖರ್ ಮಡಿವಾಳ ಹಾಗೂ ಅಜಯಸಿಂಗ್ ತಿವಾರಿ, ವಿಜಯಲಕ್ಷ್ಮಿ.ಬಿ, ಶಿವಾನಂದ ಸ್ವಾಮಿ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಎರಡನೇ ಅಧಿವೇಶನದಲ್ಲಿ ಪರೀಕ್ಷಾ ವಿಭಾಗದ ವಿವರವನ್ನು ಕುರಿತುಕಾಲೇಜಿನ ಪರೀಕ್ಷಾ ನಿಯಂತ್ರಕರಾದ ಡಾ ಟಿ.ವಿ ಅಡಿವೇಶ ಅವರು ಮಾತನಾಡಿದರು. ಮಹಾವಿದ್ಯಾಲಯದ ವ್ಯವಸ್ಥೆಯ ಮಾಹಿತಿ ಹಾಗೂ ಕಛೇರಿ ಮಾಹಿತಿಯನ್ನು ಕಾಲೇಜಿನ ಪ್ರಥಮ ದರ್ಜೆ ಸಹಾಯಕರಾದ ಜಯಶ್ರೀ ಅವರು ಮಾತನಾಡಿದರು. ಕಾಲೇಜಿನ ಪಠ್ಯೇತರ ಚಟುವಟಿಕೆಗಳಾದ ಸಾಂಸ್ಕೃತಿಕ, ಎನ್. ಎಸ್. ಎಸ್,ಎನ್. ಸಿ. ಸಿ, ರೋವರ್ಸ್ ಮತ್ತು ರೇಂಜರ್ಸ್, ಡಾ. ಬಿ. ಆರ್. ಅಂಬೇಡ್ಕರ ವೇದಿಕೆ,ಕ್ರೀಡಾ ಗ್ರಂಥಾಲಯ ಕುರಿತು ಡಾ. ಬಲಭೀಮ್ ಸಾಂಗ್ಲಿ, ಡಾ. ಶಿವಲಿಂಗಪ್ಪ ಬಿ ಪಾಟೀಲ, ಡಾ. ವಿಜಯಕುಮಾರ ಗೋಪಾಳೆ, ಡಾ. ಸುರೇಶ ಮಾಳೇಗಾಂವ, ಡಾ. ಅಜ್ರಾಪರ್ವಿನ್, ಡಾ.ರಮೇಶ್ ಪೋತೆ, ಡಾ. ಬೆಣ್ಣೂರ ವಿಶ್ವನಾಥ ಡಾ.ರಾಬಿಯಾ ಇಫತ್ ಇವರೆಲ್ಲರೂ ಮಾತನಾಡಿದರು.

ಮೂರನೇ ಅಧಿವೇಶನದಲ್ಲಿ ಬಿ.ಎಸ್ಸಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಗಳಾದ ಡಾ. ಶ್ರೀಮಂತ ಹೊಳ್ಕರ ಅವರು ವ್ಯಕ್ತಿತ್ವ ವಿಕಾಸನ ಮತ್ತು ಸಮಯ ಪರಿಪಾಲನೆ ಕುರಿತು ಮಾತನಾಡಿದರು. ಬಿ.ಎ ವಿದ್ಯಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಗಳಾದ ಡಾ.ಮಲ್ಲಿಕಾರ್ಜುನ ಸಾರ್ವಕರ ಅವರು ಮಾತನಾಡಿದರು.

ಬಿ.ಕಾಂ ವಿದ್ಯಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಗಳಾದ ಡಾ. ಮೇರಿ ಮಾಥ್ಯೂಸ್ ಅವರು ಮಾತನಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಸವಿತಾ ತಿವಾರಿ ಅವರು ವಹಿಸಿದರು. ಈ ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್ ಅಧಿಕಾರಿಗಳಾದ ಡಾ. ಬಸಂತ ಸಾಗರ, ಡಾ. ಮೀನಾಕ್ಷಿ ಹುಗ್ಗಿ, ಡಾ. ರವಿ ಬೌಧೆ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ಅಧಿಕಾರಿಗಳಾದ

ಡಾ. ನಸೀಮ್ ಫಾತಿಮಾ, ಪ್ರೊ. ಶ್ರೀದೇವಿ ರಾಠೋಡ ರೆಡ್ ರಿಬ್ಬನ್ ಕ್ಲಬ್ ಅಧಿಕಾರಿಗಳಾದ ಡಾ. ಶ್ಯಾಮಲಾ ಸ್ವಾಮಿ ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳಾದ ಅಮಿತ ಬೂದಿಹಾಳ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಮಾದೇವರಾಜ ಪ್ರಾರ್ಥಿಸಿದರು. ಡಾ. ರಾಬಿಯಾ ಇಫತ್ ಸ್ವಾಗತಿಸಿದರು. ಐ.ಕ್ಯೂ.ಎ.ಸಿ ಸಂಯೋಜಕರಾದ ಡಾ. ರಾಜಶೇಖರ ಮಡಿವಾಳ ಅವರು ಪ್ರಾಸ್ತವಿಕವಾಗಿ ಮಾತನಾಡಿದರು. ಕಾಲೇಜಿನ ಸಿಬ್ಬಂದಿ ಕಾರ್ಯದರ್ಶಿಗಳಾದ ಡಾ. ರವೀಂದ್ರಕುಮಾರ ಬಂಡಾರಿ ಅವರು ವಂದಿಸಿದರು. ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಡಾ. ಬಲಭೀಮ ಸಾಂಗ್ಲಿ ಅವರು ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲಾ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿತರ ವರ್ಗದವರು ಮತ್ತು ಪ್ರಥಮ ವರ್ಷದ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿದರು. ಈ ಕಾರ್ಯಕ್ರಮದ ವರದಿಯನ್ನು ಕಾಲೇಜಿನ ಪತ್ರಿಕಾ ಸಂಯೋಜಕರಾದ ಡಾ. ನಾಗಪ್ಪ ಗೋಗಿ ಅವರು ತಿಳಿಸಿದ್ದಾರೆ.

# ನೆರೆ ಹಾವಳಿ ಹಿನ್ನೆಲೆ:ಜಿಲ್ಲೆಯಾದ್ಯಂತ 41 ಕಾಳಜಿ ಕೇಂದ್ರ ಸ್ಥಾಪನೆ, 4,715 ಜನ ಸ್ಥಳಾಂತರ:ಬಿ.ಫೌಜಿಯಾ ತರನ್ನುಮ್

ಕಲಬುರಗಿ,ಸೆ.27: ಮಹಾರಾಷ್ಟ್ರದ ವೀರ್, ಉಜನಿ, ಸಿನಾ ಜಲಾಶಯ ಹಾಗೂ ಬೋರಿ ನದಿಯಿಂದ 3.50 ಲಕ್ಷ ಕ್ಯೂಸೆಕ್ಸ್ ನೀರು ಭೀಮಾ ನದಿಗೆ ಹರಿಬಿಟ್ಟದರಿಂದ ಭೀಮೆಯ ಪ್ರವಾಹ ತುತ್ತಾದ ಗ್ರಾಮಗಳಲ್ಲಿ ಇದೂವರೆಗೆ 41 ಕಾಳಜಿ ತೆರೆದು 4,715 ಸಂತ್ರಸ್ತರನ್ನು ಸ್ಥಳಾಂತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

ಪ್ರವಾಹಕ್ಕೆ ಸಿಲುಕುವ ಒಟ್ಟಾರೆ 153 ಸಮಸ್ಯಾತ್ಮಕ ಗ್ರಾಮಗಳ ಪೈಕಿ ಪ್ರಸ್ತುತ ಭೀಮಾ ನದಿ ಪ್ರವಾಹದಿಂದ 68 ಗ್ರಾಮಗಳು ತುತ್ತಾಗಿದ್ದು, ಇದರಲ್ಲಿ ಇದುವರೆಗೆ 41 ಕಾಳಜಿ ಕೇಂದ್ರ ತೆರೆದು ಸಂತ್ರಸ್ತರಿಗೆ ಆಶ್ರಯ ನೀಡಲಾಗಿದೆ. 2,234 ಪುರುಷರು, 1,647 ಮಹಿಳೆಯರು, 894 ಮಕ್ಕಳು ಸೇರಿದಂತೆ 4,715 ಜನ ಕಾಳಜಿ ಕೇಂದ್ರದಲ್ಲಿ ವಾಸವಿದ್ದು, ಅವರಿಗೆ ಊಟೋಪಚಾರ, ಅಗತ್ಯ ಮೂಲಸೌಕರ್ಯ ಒದಗಿಸಲಾಗಿದೆ, ಆರೋಗ್ಯ ಇಲಾಖೆಯಿಂದ ಆರೋಗ್ಯ



ತಪಾಸಣೆ ಸಹ ಮಾಡಲಾಗುತ್ತಿದೆ ಎಂದಿದ್ದಾರೆ.


ಸೆಪ್ಟೆಂಬರ್ 27 ಮತ್ತು 28 ರಂದು ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಮತ್ತು ಭೀಮಾ ನದಿ ಮೇಲ್ಮೆ ಪ್ರದೇಶದಲ್ಲಿ ರೆಡ್ ಅಲರ್ಟ್ ಘೋಷಿಸಿದ್ದು, ಮುಂಜಾಗ್ರತವಾಗಿ ಜಿಲ್ಲೆಯಲ್ಲಿ ಶಾಲೆಗಳಿಗೆ ಎರಡು ದಿನ ರಜೆ ಘೋಷಿಸಲಾಗಿದೆ. ಇನ್ನು ಮಹಾರಾಷ್ಟ್ರದ ಜಲಾಶಯಗಳಿಂದ ಅಪಾರ ಪ್ರಮಾಣದ ನೀರು ಸೊನ್ನ ಬ್ಯಾರೇಜಿಗೆ ಬರುತ್ತಿವುದರಿಂದ ಒಳ ಹರಿವಿನ ಪ್ರಮಾಣದಷ್ಟೇನೀರು ನದಿಗೆ ಹರಿಬಿಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಅಫಜಲಪೂರ ತಾಲೂಕಿನಲ್ಲಿ 17, ಜೇವರ್ಗಿ–24, ಕಲಬುರಗಿ–5, ಚಿತ್ತಾಪುರ–6, ಚಿಂಚೋಳಿ–3, ಸೇಡಂ–2, ಕಾಳಗಿ–8, ಶಹಾಬಾದ ತಾಲೂಕಿನ 3 ಗ್ರಾಮಗಳು ಪ್ರವಾಹಕ್ಕೆ ತುತ್ತಾಗಿವೆ. ಪ್ರವಾಹಕ್ಕೆ ತುತ್ತಾದ ಗ್ರಾಮಗಳ ಸಂತ್ರಸ್ತರಿಗೆ ಆಶ್ರಯ ಕಲ್ಪಿಸಲು ಅಫಜಲಪೂರ ತಾಲೂಕಿನಲ್ಲಿ 3, ಜೇವರ್ಗಿ–24, ಕಲಬುರಗಿ–3, ಚಿತ್ತಾಪುರ–4, ಚಿಂಚೋಳಿ–3, ಸೇಡಂ–2, ಕಾಳಗಿ ಮತ್ತು ಶಹಾಬಾದ ತಾಲೂಕಿನ ತಲಾ 1 ಕಾಳಜಿ ಕೇಂದ್ರ ತೆರೆಯಲಾಗಿದೆ ಎಂದಿದ್ದಾರೆ.

ಜಿಲ್ಲೆಯಾದ್ಯಂತ ಪ್ರವಾಹದ ಪರಿಸ್ಥಿತಿ ಸಮರ್ಥವಾಗಿ ಎದುರಿಸಲು ಈಗಾಗಲೆ ಪ್ರವಾಹ ಪೀಡಿತ ಪ್ರದೇಶದಲ್ಲಿ ಅಧಿಕಾರಿ–ಸಿಬ್ಬಂದಿಗಳ ಜೊತೆಗೆ ಎಸ್.ಡಿ.ಆರ್.ಎಫ್., ಎನ್.ಡಿ.ಆರ್. ಎಫ್., ಪೊಲೀಸ್, ಅಗ್ನಿಶಾಮಕ ತಂಡಗಳು ಬೀಡು ಬಿಟ್ಟಿದ್ದು, ರಕ್ಷಣಾ ಕಾರ್ಯಾಚರಣೆಯಲ್ಲಿ ನಿರತವಾಗಿವೆ. ಮಾನವ ಹಾನಿ ಮತ್ತು ಪ್ರಾಣಿ ಹಾನಿ ತಡೆಯಲು ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಜನರು ಆತಂಕ ಪಡಬಾರದು. ಸ್ಥಳೀಯ ಆಡಳಿತಕ್ಕೆ ಸಹಕರಿಸಬೇಕು ಎಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ಮನವಿ ಮಾಡಿದ್ದಾರೆ.

ಸೆಲ್ಫಿ, ರೀಲ್ಸ್ ಗೋಜಿಗೆ ಹೋಗಬೇಡಿ: ಪ್ರವಾಹ ಪರಿಸ್ಥಿತಿಯ ಇಂತಹ ಸಂಕಷ್ಟದ ಸಂದರ್ಭದಲ್ಲಿ ಯುವ ಸಮೂಹ ಸೆಲ್ಫಿ, ರೀಲ್ ಮಾಡುವ ಗೋಜಿಗೆ ಹೋಗಬಾರದು ನದಿಯಲ್ಲಿ ಈಜುವುದಾಗಲಿ, ಸ್ಪರ್ಧೆ ಮಾಡುವಂತಹ ಯಾವುದೇ ದುಸ್ಸಾಹಸಕ್ಕೆ ಕೈಹಾಕಬಾರದು. ನದಿ ದಂಡೆಗೆ ಬಟ್ಟೆ ಒಗೆಯಲು, ಕುರಿ–ಆಕಳು ಮೇಯಿಸಲು, ಮೀನುಗಾರರು ಮೀನು ಹಿಡಿಯಲು ಹೋಗಬಾರದು. ಅಪಾಯವಿರುವ ಸೇತುವೆ ಮೇಲೆ ಸಂಚರಿಸಬಾರದು ಎಂದು ಡಿ.ಸಿ. ಜಿಲ್ಲೆಯ ಜನತೆಯಲ್ಲಿ ಮನವಿ ಮಾಡಿದ್ದಾರೆ.

# ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ: ಐವರು ದುರ್ಮರಣ



ಮಲ್ಲಮ್ಮ ನುಡಿ ವಾರ್ತೆ ಚಂಡೀಗಢ:ಸೆ.27: ವೇಗವಾಗಿ ಬಂದ ಥಾರ್ ಕಾರು ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಐವರು ಸಾವನ್ನಪ್ಪಿದ್ದು, ಓರ್ವ ಗಂಭೀರ ಗಾಯಗೊಂಡ ಘಟನೆ ಹರಿಯಾಣದ ಗುರುಗ್ರಾಮದಲ್ಲಿ ನಡೆದಿದೆ. ಶನಿವಾರ ಮುಂಜಾನೆ 4:30ರ ಸುಮಾರಿಗೆ ಗುರುಗ್ರಾಮದ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದೆ. ಮೂವರು ಪುರುಷರು ಹಾಗೂ ಮೂವರು ಮಹಿಳೆಯರು ಸೇರಿದಂತೆ ಒಟ್ಟು ಆರು ಮಂದಿ ಕೆಲಸದ ನಿಮಿತ್ತ ಉತ್ತರ ಪ್ರದೇಶದಿಂದ ಗುರುಗ್ರಾಮಕ್ಕೆ ಪ್ರಯಾಣಿಸುತ್ತಿದ್ದ ವೇಳೆ ಅಪಘಾತ ಉಂಟಾಗಿದೆ. ಮೃತರೆಲ್ಲರೂ ಉತ್ತರ ಪ್ರದೇಶದವರಾಗಿದ್ದಾರೆ. ಅತಿವೇಗದ ಚಾಲನೆಯಿಂದ ಚಾಲಕನ ನಿಯಂತ್ರಣ ತಪ್ಪಿ ಥಾರ್ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದು, ಓರ್ವ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೇ

ಸಾವನ್ನಪ್ಪಿದ್ದಾನೆ. ಇನ್ನೋರ್ವ ಗಾಯಾಳುವಿನ ಸ್ಥಿತಿ ಗಂಭೀರವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮೃತರು ಮತ್ತು ಗಾಯಗೊಂಡವರನ್ನು ಇನ್ನೂ ಗುರುತಿಸಲಾಗಿಲ್ಲ. ಥಾರ್ ವಾಹನವು ಉತ್ತರ ಪ್ರದೇಶ ನೋಂದಣಿಯನ್ನು ಹೊಂದಿದೆ. ಈ ಬಗ್ಗೆ ತನಿಖೆ ನಡೆಸುತ್ತಿದ್ದೇವೆ ಎಂದು ಸೆಕ್ಟರ್ 40 ಪೊಲೀಸ್ ಠಾಣೆಯ ಸ್ಟೇಷನ್ ಹೌಸ್ ಆಫೀಸರ್ ಲಲಿತ್ ಕುಮಾರ್ ಹೇಳಿದರು. ಅಪಘಾತವು ಎಷ್ಟು ತೀವ್ರವಾಗಿತ್ತೆಂದರೆ ಥಾರ್ ಸಂಪೂರ್ಣವಾಗಿ ನಜ್ಜುಗುಜ್ಜಾಗಿತ್ತು ಮತ್ತು ಅವಶೇಷಗಳು ಸ್ಥಳದಲ್ಲಿ 50 ಮೀಟರ್‌ಗಿಂತಲೂ ಹೆಚ್ಚು ಹರಡಿಕೊಂಡಿದ್ದವು ಎಂದು ಮೂಲಗಳು ತಿಳಿಸಿವೆ. ಪೊಲೀಸರು ಸಂಪೂರ್ಣವಾಗಿ ನಜ್ಜುಗುಜ್ಜಾದ ವಾಹನವನ್ನು ಮುಖ್ಯ ರಸ್ತೆಯಿಂದ ತೆರವುಗೊಳಿಸಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.